ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 12 | ಸಂಚಿಕೆ 39 | ಸೆಪ್ಟೆಂಬರ್ 30,1990 | ರೂ. 1.50



ಮಾಸಲಾತಿ ವಿರೋಧಿ ಚಳಿವಳಿ

ದಿಲ್ಲಿಯಲ್ಲೇನು ನಡೆದಿದೆ?

ವಿ.ಪಿ.ಸಿಂಗ್ ಸರಕಾರ ಮಂಡಲ್ ವರದಿ ಶಿಫಾರಸುಗಳನ್ನು ಜ್ಯಾರಿಗೊಳಿಸಲು ನಿರ್ಧರಿಸಿದಂದಿನಿಂದ ದಿಲ್ಲಿಯನ್ನೊಳಗೊಂಡ ಉತ್ತರ ಭಾರತದ ಹಲವು ರಾಜ್ಯಗಳಲ್ಲಿ ಮಾಸಲಾತಿ ವಿರೋಧಿ ಚಳುವಳಿಯ ದಳ್ಳುರಿ ಇಡೀ ಉತ್ತರ ಭಾರತವನ್ನೇ ಆವರಿಸಿದಿಯೆಂಬ ದಪ್ಪಕ್ಷರದ ಭಯಾನಕ ಸುದ್ದಿಗಳನ್ನು ದಿನನಿತ್ಯ ದಿನಪತ್ರಿಕೆಗಳಲ್ಲಿ ಓದುತ್ತಿದ್ದೇವೆ. ದಿಲ್ಲಿಯಲ್ಲಿ ವಿದ್ಯಾರ್ಥಿಗಳ ಮೇಲೆ ಪೋಲೀಸರಿಂದ ಅಮಾನುಷ ದಬ್ಬಾಳಿಕೆ, ಲಾಠಿ ಚಾರ್ಜ್, ಮಾಸಲು ವಿರೋಧಿಗಳಿಂದ ಹಿಂಸಾಚಾರ ಮೊದಲಾದ ದಾರುಣ ಕತೆಗಳ ಪಟ್ಟಿಯೇ ದಿನಪತ್ರಿಕೆಗಳ ಮುಖಪುಟದಲ್ಲಿ ಕಾಣಸಿಗುತ್ತದೆ.

ಬಿಎಂಎಸ್ ಒಂದನ್ನು ಬಿಟ್ಟು ದೇಶದಲ್ಲಿಯ ಇತರ ಎಲ್ಲಾ ಕಾರ್ಮಿಕ ಸಂಘಟನೆಗಳ ಪರವಾಗಿ ದಿಲ್ಲಿಯಲ್ಲಿ ಸೆಪ್ಟೆಂಬರ್ 19 ರಂದು ಏರ್ಪಡಿಸಿದ್ದ ಮಹೀಯ ಸಮಾವೇಶಕ್ಕೆ ಸಿಐಟಿಯು ಪರವಾಗಿ ನಾನು, ಎಸ್. ಸೂರ್ಯನಾರಾಯಣ ರಾವ್, ಸಿ.ನಂಜುಂಡಪ್ಪ ನವರನ್ನೊಳಗೊಂಡು 22 ಕಾರ್ಮಿಕ ಪ್ರತಿನಿಧಿಗಳು ಹೋಗಿದ್ದೆವು.

ನಾಲ್ಕು ದಿವಸ ದಿಲ್ಲಿಯ ಬಹುತೇಕ ಜನನಿಬಿಡವಾದ ಕೇಂದ್ರ ಕಛೇರಿಗಳಿರುವ, ದಿನ ನಿತ್ಯ ಕೋಟ್ಯಾವಧಿ ರೂಪಾಯಿ ವ್ಯವಹಾರ ನಡೆಯುತ್ತಿರುವ, ಚಾಂದನಿ ಚೌಕ, ಕಾನಾಟ್ ಸರ್ಕಸ್ ಇತರ ಮಾರ್ಕೆಟ್‌ಗಳಲ್ಲಿ ನಾನು ನನ್ನ ಇತರ ಸಂಗಾತಿಗಳ ಜೊತೆಯಲ್ಲಿ ಸುತ್ತಾಡಿದೆ. ಸಿಟಿ ಬಸ್‌ಗಳಲ್ಲಿ, ಕಾರು , ಆಟೋಗಳು ಸಲೀಸಾಗಿ ಯಾವ ಅಡ್ಡಿ ಆತಂಕಗಳಿಲ್ಲದೆ ಎಲ್ಲಾ ರಸ್ತೆಗಳಲ್ಲಿ ಓಡಾಡುತ್ತಿರುವುದನ್ನು ಕಂಡೆ. ಆದರೆ ಪ್ರತಿದಿನ ಮುಂಜಾನೆ ಎದ್ದ ಕೂಡಲೇ ಇಂಗ್ಲೀಷ್ ದಿನ ಪತ್ರಿಕಗಳ ಮುಖಪುಟಗಳಲ್ಲಿ ಮಾಸಲಾತಿ ವಿರೋಧಿ ಚಳುವಳಿ ಮಾಡುತ್ತಿರುವ ವಿದ್ಯಾರ್ಥಿಗಳ ಮೇಲೆ ಪೋಲೀಸ್ ದೌರ್ಜನ್ಯದ ಫೋಟೋಗಳನ್ನು ಸುದ್ದಿಗಳನ್ನು ಓದಿ ಆಶ್ಚರ್ಯವಾಗುತ್ತಿತ್ತು. ನಾನು ದಿಲ್ಲಿಯಲ್ಲಿದ್ದೇನೆಯೋ ಅಥವಾ ಬೇರೆ ಯಾವುದಾದರೊಂದು ಊರಿನಲ್ಲಿದ್ದೇನೇಯೋ ಎಂಬ ಸಂಶಯ ನನ್ನಲ್ಲಿ ಮೂಡಿಬರುತ್ತಿತ್ತು. ಯಾಕೆಂದರೆ ದಿಲ್ಲಿ ನಗರದ ಬಹುತೇಕ ಪ್ರದೇಶಗಳಲ್ಲಿಯ ವಾಸ್ತವ ಪರಿಸ್ಥಿತಿಗೂ

ಎಸ್.ಕೆ.ಉಪಾಧ್ಯಾಯ

ದಿನಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದ ಸುದ್ದಿ-ಸಮಾಚಾರಗಳಿಗೂ ಹೇಳಿಕೊಳ್ಳುವಷ್ಟು ಸಂಬಂಧವೇ ಇಲ್ಲವೆಂಬ ಸ್ಪಷ್ಟ ಅಭಿಪ್ರಾಯ ನಾನು ಹಾಗೂ ನನ್ನ ಸಂಗಾತಿಗಳೂ ಹೊಂದಿದ್ದೇವೆ. ದೆಹಲಿಯಲ್ಲಿ ಇಂತಹ ಯಾವ ಘಟನೆಯೂ ನಡೆದೇ ಇಲ್ಲವೆಂದು , ಇಲ್ಲದ್ದನ್ನು ಸೃಷ್ಟಿಸಿ ಸುದ್ದಿಕೊಡುತ್ತಿದ್ದಾರೆಂದು ನಾವು ಹೇಳುತ್ತಿಲ್ಲ. ಜನತೆಯ ಐಕ್ಯತೆಯನ್ನು ಒಡೆಯಲು ಮೇಲ್ಜಾತಿಗಳ ಬಡವರಲ್ಲಿರುವ ಆತಂಕವನ್ನು ಬಳಸಿಕೊಳ್ಳುತ್ತಿರುವ ದುಷ್ಟ ಶಕ್ತಿಗಳಿಗೆ ಕೊಡುತ್ತಿರುವ ಪ್ರಚಾರದ ರೀತಿಯ ಬಗ್ಗೆ ಅಷ್ಟೆ ನಮ್ಮ ವಿರೋಧ.

ತಮಗೆ ಒಗ್ಗದ, ತಮ್ಮ ಧೋರಣೆಗೆ ಸರಿಹೊಂದದ ಆಡಳಿತೆಯ ವಿರುದ್ಧ ಜನರಲ್ಲಿ ಅಪನಂಬಿಕೆ, ಅಪಪ್ರಚಾರ ಮಾಡುವ ಮಹಾತಂತ್ರವನ್ನು ಬಂಡವಾಳಶಾಹಿ ವರ್ಗದ ಒಂದು ಗುಂಪು ಪತ್ರಿಕಾ ಮಾಧ್ಯಮಗಳ ಮೂಲಕ ನಡೆಸುತ್ತಿದೆ. ಜನರ ಅಭಿಪ್ರಾಯಗಳನ್ನು ಬದಲಿಸಲು ಪತ್ರಿಕಾ ಮಾಧ್ಯಮ ಪ್ರಧಾನ ಪಾತ್ರ ವಹಿಸುತ್ತಿದೆ. ದಿನನಿತ್ಯ ಪತ್ರಿಕೆ ಓದುವವರ ಮೇಲೆ ಅದರಲ್ಲಿರುವ ಸುದ್ದಿಗಳು ಸ್ವಲ್ಪಮಟ್ಟಿಗಾದರೂ ಅದು ಗೋಯೆಂಕಾ ಗುಂಪು ಇರಲಿ, ಜೈನ್ ಗುಂಪು ಇರಲಿ, ಹಿಂದೂಸ್ತಾನ ಟೈಂಸ್ . ಇರಲಿ, ಅಮೃತಬಜಾರ್ ಪತ್ರಿಕೆ ಇರಲಿ ಅಥವಾ ಇತರ ರಾಜ್ಯಗಳ ಭಾಷಿಕ ದಿನಪತ್ರಿಕೆಗಳಲ್ಲಿ ಒಂದು ಕಾಲಂ ಹಾಕಬೇಕಾದ ಸುದ್ದಿಗಳನ್ನು ಏಳು ಕಾಲಂ ನಲ್ಲಿ ದಪ್ಪಕ್ಷರದಲ್ಲಿ ಪ್ರಕಟಿಸಿ ಓದುಗರ ಮೇಲೆ ಪರಿಣಾಮ ಬೀರಲು ಪ್ರಯತ್ನ ಮಾಡುತ್ತಿವೆ.

ಬೇರೆ ಬೇರೆ ರಾಜಕೀಯ ಪಕ್ಷಗಳ ನೇತೃತ್ವದ ಕೋಟ್ಯಾವಧಿ ಕಾರ್ಮಿಕರನ್ನು ಪ್ರತಿನಿಧಿಸುವ 9 ಕಾರ್ಮಿಕ ಕೇಂದ್ರಗಳ ಪರವಾಗಿ ದೇಶದ ಮೂಲೆಮೂಲೆಗಳಿಂದ 15,000ಸಾವಿರಕ್ಕೂ ಹೆಚ್ಚು ಕೆಲಸಗಾರರು-ಮೂರು ಸಾವಿರಕ್ಕೂ ಹೆಚ್ಚು ಮಹಿಳೆಯರು ಭಾಗವಹಿಸಿದ ಜಾತೀಯತೆಯ ವಿರೋಧವಾಗಿ ದೇಶದ ಐಕ್ಯತೆ ಸಮಗ್ರತೆಗಾಗಿ ನಡೆಸಿದ ಸೆಪ್ಟೆಂಬರ್ 19 ರ ದಿಲ್ಲಿ ಸಮಾವೇಶದ ಕುರಿತು ದಿಲ್ಲಿಯ ಯಾವುದೇ ಪತ್ರಿಕೆಯೂ ಒಂದೇ ಒಂದು ವಾಕ್ಯ ಕೂಡ ಪ್ರಕಟಿಸಲಿಲ್ಲ. ಆರ್.ಎಸ್. ಎಸ್. ಮುಖಂಡ ದೀನದಯಾಳ್ ರ ಕುರಿತು ಅರ್ಧಗಂಟೆಗೂ ಹೆಚ್ಚು ಕಾಲ ಟಿವಿಯಲ್ಲಿ ಪ್ರಚಾರ ಮಾಡಿದ ಟಿವಿ ಅಧಿಕಾರಿಗಳುಪ್ರತಿದಿವಸ ಹತ್ತಿಪ್ಪತ್ತು ರೂಪಾಯಿಗಳನ್ನು ದುಡಿದು ಹೊಟ್ಟೆ ತುಂಬಿಸಿಕೊಳ್ಳುತ್ತಿರುವ ಪಂಜಾಬ್, ಹರ್ಯಾಣ, ಉತ್ತರಪ್ರದೇಶ ಮೊದಲಾದ ರಾಜ್ಯಗಳಿಂದ ಬಂದು, ಹಾಗೆಯೇ ಇತರ ರಾಜ್ಯಗಳಿಂದ ಸಮಾವೇಶಕ್ಕೆ ಬಂದು ಕಾರ್ಮಿಕರ ಐಕ್ಯಬಲದಿಂದ ಮತೀಯ- ಛಿದ್ರಕಾರಿ ಶಕ್ತಿಗಳನ್ನು ಮೆಟ್ಟಿ ಹಾಕುತ್ತೇವೆಂದು ಪ್ರತಿಜ್ಞೆ ಮಾಡಿ , ಮಹಿಳೆಯರು, ಮಕ್ಕಳೂ ಸುರಿಯುತ್ತಿರುವ ಮಳೆಯಲ್ಲಿ ತೋಯಿಸಿಕೊಂಡು ಮೆರವಣಿಗೆ ತೆಗೆದ ದೃಶ್ಯವನ್ನು ತೋರಿಸುವ ಸೌಹಾರ್ದತೆ ವ್ಯಕ್ತಮಾಡಿಲ್ಲ. ಮಾಸಲಾತಿ ವಿರೋಧಿ ಪ್ರತಿಭಟನೆ, ಚಳುವಳಿ ನಡೆಯುತ್ತಿದೆ. ಅದಕ್ಕೆ ಎಷ್ಟು ಪ್ರಚಾರ ಕೊಡಬೇಕೋ ಅಷ್ಟೇ ಕೊಡದೆ, ಮುಖಪುಟದಲ್ಲಿ ದಪ್ಪಕ್ಷರದಲ್ಲಿ ಪ್ರಕಟಿಸುತ್ತಿರುವುದು ಅಸಂಬದ್ಧ. ಜನರಲ್ಲಿ ತಪ್ಪು ತಿಳುವಳಿಕೆ , ಭಯಭೀತಿ ಉಂಟು ಮಾಡುವ ತಂತ್ರ. ದಿನಪತ್ರಿಕೆಗಳು ಪ್ರಕಟಿಸುತ್ತಿರುವಂತೆ, ದಿಲ್ಲಿ, ಹರ್ಯಾಣ, ಉತ್ತರಪ್ರದೇಶ, ಪಂಜಾಬ್ ಗಳಲ್ಲಿ ಮಾಸಲಾತಿ ವಿರೋಧಿ ಮೇರೆ ಮೀರಿ ನಡೆದಿದ್ದರೆ ದಿಲ್ಲಿ ಸಮಾವೇಶಕ್ಕೆ 15,000 ಕಾರ್ಮಿಕರು ಸೇರಿಕೊಳ್ಳಲಿಕ್ಕೆ ಸಾಧ್ಯ ಆಗುತ್ತಿತ್ತೇ?

ಇದೇ ಸಮಯದಲ್ಲಿ ಕಲ್ಕತ್ತಾ ಮಹಾನಗರ ಪಾಲಿಕೆ ಚುನಾವಣೆಯ ಸಂದರ್ಭದಲ್ಲಿ ಮತ್ತು ಕಾಂಗ್ರೆಸ್ ಬಂದ್ ಆಚರಿಸಿದ ದಿವಸ ಸಿಪಿಐ(ಎಂ) ಕಾರ್ಯಕರ್ತರು ಕಾಂಗ್ರೆಸ್ ಮುಖಂಡರು ಮತ್ತು ಕಾರ್ಯಕರ್ತರ ಮೇಲೆ ದೌರ್ಜನ್ಯ ನಡೆಸಿದ ಸುದ್ದಿಗಳು ಪ್ರಕಟವಾದಾಗ ಮುಖ್ಯಮಂತ್ರಿ ಜ್ಯೋತಿಬಸು ಅವರು ಅಂಥ ಪ್ರಚಾರಗಳು ಎಷ್ಟು ಸುಳ್ಳು ಎಂಬುದನ್ನು ವಿವರಿಸಿದ ಸಂಗತಿಯನ್ನು ನೆನಪಿಸಿಕೊಳ್ಳುವುದು ಅಗತ್ಯ.

ಪಿ.ಬಿ. ಆತಂಕ
ಪಂಜಾಬ್ ಪರಿಸ್ಥಿತಿ ಚುನಾವಣೆಗೆ ಸೂಕ್ತವಾಗಿಲ್ಲ

ಪಂಜಾಬಿನಲ್ಲಿ ರಾಷ್ಟ್ರಪತಿ ಆಳ್ವಿಕೆಯ ಅವಧಿ ಮುಗಿಯುವ ಹೊತ್ತಿಗೆ ಚುನಾವಣೆ ನಡೆಸಬೇಕೆಂದು ಕೇಂದ್ರ ಸರ್ಕಾರ ನಿರ್ಧರಿಸಿದೆಯೆಂಬ ಸುದ್ದಿ ಆತಂಕಕಾರಿಯೆಂದು ಸಿ.ಪಿ.ಐ(ಎಂ) ಪೊಲಿಟ್ ಬ್ಯೂರೋ ಆತಂಕ ವ್ಯಕ್ತಪಡಿಸಿದೆ. ಖಾಲಿಸ್ತಾನಿಗಳ ಕೊಲೆ-ಸುಲಿಗೆ ಮುಂದುವರಿಯುತ್ತಲೇ ಇದೆ. ಮುಗ್ಧ ಜನರಿಗೆ ಭದ್ರತೆಯಿಲ್ಲ. ರಾಜಕೀಯ ಕಾರ್ಯಕರ್ತರನ್ನು ಪ್ರತಿ ದಿನ ಕೊಲೆ ಮಾಡಲಾಗುತ್ತಿದೆ. ರಾಜ್ಯದ ಅಲ್ಪ ಸಂಖ್ಯಾತರನ್ನಂತೂ ಪೂರ್ಣ ಅಭದ್ರತೆಯ ಭಾವನೆ ಆವರಿಸಿಕೊಂಡಿದೆ. ಗಡಿಯಾಚೆಯಿಂದ ನೆರವು ಪಡೆಯುತ್ತಿರುವ ಭಯೋತ್ಪಾದಕರ ಚಟುವಟಿಕೆಗಳನ್ನು ತಡೆಯುವುದು ಇನ್ನೂ ಆಗಿಲ್ಲ. ಇಂತಹ ಸನ್ನಿವೇಶದಲ್ಲಿ ಚುನಾವಣೆ ನಡೆಸುವುದೆಂದರೆ ಪಂಜಾಬಿನಲ್ಲಿ ಗಂಭೀರ ಪರಿಸ್ಥಿತಿ ಸೃಷ್ಟಿಸಲು ದೇಶ-ವಿರೋಧಿ ಶಕ್ತಿಗಳಿಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ ಎಂದು ಪಿ.ಬಿ. ಹೇಳಿದೆ.

ರಾಜೀವ್-ಲೋಂಗೋವಾಲ್ ಒಪ್ಪಂದದ ಆಧಾರದ ಮೇಲೆ ಪಂಜಾಬೀ ಜನತೆಯ ದೀರ್ಘ ಕಾಲದ ಬೇಡಿಕೆಗಳನ್ನು ಈಡೇರಿಸುವ ರಾಜಕೀಯ ಕ್ರಮಗಳು, ಜೊತೆಗೆ ಪರಿಣಾಮಕಾರಿ ಆಡಳಿತ ಕ್ರಮಗಳು - ಇದರಿಂದ ಮಾತ್ರವೇ ಕೇಂದ್ರಸರಕಾರ ಪಂಜಾಬಿನಲ್ಲಿ ಪ್ರಜಾಸತ್ತಾತ್ಮಕ, ರಾಜಕೀಯ ಪ್ರಕ್ರಿಯೆ ಆರಂಭಿಸಿ, ಸಾಮಾನ್ಯ ಸ್ಥಿತಿ ತರಲು ಸಾಧ್ಯ ಎಂದು ಇನ್ನೊಮ್ಮೆ ಒತ್ತಿ ಹೇಳುವುದಾಗಿ ತಿಳಿಸಿರುವ ಪೊಲಿಟ್‌ಬ್ಯೂರೋ ಹೇಳಿಕೆ ಇತರ ರಾಜಕೀಯ ಶಕ್ತಿಗಳೂ ಈ ಅಭಿಪ್ರಾಯ ಒಪ್ಪಿವೆ ಎಂದು ತಿಳಿಸಿದೆ.

ಆದ್ದರಿಂದ ಪಂಜಾಬಿನಲ್ಲಿ ಚುನಾವಣೆನಡೆಸುವ ಪ್ರಶ್ನೆಯನ್ನು ಗಂಭೀರವಾಗಿ ಪುನರ್ ಪರಿಶೀಲಿಸಬೇಕೆಂದೂ ಪಂಜಾಬ್ ಮತ್ತು ರಾಷ್ಟ್ರೀಯ ಐಕ್ಯತೆಗೆ ಅನಿರೀಕ್ಷಿತ ದುಷ್ಪರಿಣಾಮ ಬೀರಬಹುದಾದ ಯಾವುದೇ ಕ್ರಮವನ್ನು ಕೈಗೊಳ್ಳದಿರಿ ಎಂದು ಪೊಲಿಟ್ ಬ್ಯೂರೋ ಪ್ರಧಾನ ಮಂತ್ರಿಗಳು ಹಾಗೂ ರಾಷ್ಟ್ರೀಯ ರಂಗ ಸರ್ಕಾರವನ್ನು ಆಗ್ರಹ ಪಡಿಸಿದೆ.

ಬಗರ್ ಹುಕುಂ ಸಾಗುವಳಿ ಸಕ್ರಮ: ಸರ್ಕಾರದ ಗೊಂದಲಮಯ ತೀರ್ಮಾನ

ಬಡರೈತರ ಬದುಕುವ ಹಕ್ಕನ್ನೇ ಕಸಿಯುವ ಧೋರಣೆ

ಜನವರಿ 1,1989 ರಿಂದ ಸರಕಾರಿ ಭೂಮಿಯನ್ನು ಅಕ್ರಮ ಸಾಗುವಳಿ ಮಾಡಿದರೆ ಅವರಿಗೆ 5000ರೂ. ದಂಡ ಹಾಗೂ ಶಿಕ್ಷೆ ವಿಧಿಸುವ ಕಠಿಣ ಕ್ರಮವನ್ನು ಜರುಗಿಸಲಾಗುವುದೆಂದು ರಾಜ್ಯ ಪ್ರಸಾರ, ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯಿತಿ ರಾಜ್ಯ ಮಂತ್ರಿ ಎಂ.ವೈ. ಘೋರ್ಪಡೆ ಸರಕಾರದ ನಿರ್ಣಯವನ್ನು ಘೋಷಿಸಿದ್ದಾರೆ. ಇದು ಕೃಷಿಯನ್ನು ಜೀವನಾಧಾರವಾಗಿಟ್ಟುಕೊಂಡಿರುವ ಜನತೆಯ ಬದುಕುವ ಹಕ್ಕನ್ನೇ ಕಿತ್ತುಕೊಳ್ಳುವ ಸರ್ವಾಧಿಕಾರಿ ಧೋರಣೆ ಎಂದು ಕರ್ನಾಟಕ ಪ್ರಾಂತ ಕೃಷಿ ಕಾರ್ಮಿಕ ಸಂಘದಪ್ರಧಾನ ಕಾರ್ಯದರ್ಶಿ ಜಿ.ವಿ. ಶ್ರೀರಾಮ ರೆಡ್ಡಿಯವರು ಬಲವಾಗಿ ಖಂಡಿಸಿದ್ದಾರೆ.

ಇನ್ನು ಮುಂದೆ ಸರಕಾರಿ ಭೂಮಿಯ ಅಕ್ರಮ ಸಾಗುವಳಿ ಮಾಡಬಾರದು ಎನ್ನುವ ಸರಕಾರ ಭೂಹೀನರಿಗೆ ಭೂಮಾಲಿಕರ ಹಿಡಿತದಲ್ಲಿರುವ ಹೆಚ್ಚುವರಿ ಭೂಮಿಯನ್ನು ಸಮವಾಗಿ ಹಂಚುವ ತೀರ್ಮಾನ ತೆಗೆದುಕೊಳ್ಳುತ್ತದೆಯೇ ಅಥವಾ ಭೂಮಿಯನ್ನೇ ಜೀವನೋಪಾಯಕ್ಕೆ ಆಧಾರವಾಗಿರುವ ಭೂಹೀನರಿಗೆ ಪರ್ಯಾಯ ವ್ಯವಸ್ಥೆಯನ್ನು ಮಾಡಬಲ್ಲುದೇ ಎಂದು ಅವರು ಪ್ರಶ್ನಿಸಿದ್ದಾರೆ.

ಇಂತಹ ಯಾವುದೇ ಕಾರ್ಯಕ್ರಮವಿಲ್ಲದ ಸರಕಾರದ ಈ ಘೋಷಣೆ ಜನವಿರೋಧಿ ಮತ್ತು ಪ್ರಜಾತಂತ್ರ ವಿರೋಧಿ, ಇದನ್ನು ಕೃಷಿ ಕಾರ್ಮಿಕರ ಸಂಘಟನೆ ತೀವ್ರವಾಗಿ ವಿರೋಧಿಸುತ್ತದೆ ಎಂದು ಕಾಂ. ಶ್ರೀರಾಮರೆಡ್ಡಿ ತಿಳಿಸಿದ್ದಾರೆ.

> ಇನ್ನು ಮುಂದೆ ಸರಕಾರಿ ಭೂಮಿಯ ಅಕ್ರಮ ಸಾಗುವಳಿ ಮಾಡಬಾರದು ಎನ್ನು ವ ಸರಕಾರ ಭೂಹೀನರಿಗೆ ಭೂಮಾಲಿಕರ ಹಿಡಿತದಲ್ಲಿರುವ ಹೆಚ್ಚುವರಿ ಭೂಮಿಯನ್ನು ಸಮವಾಗಿ ಹಂಚುವ ತೀರ್ಮಾನ ತೆಗೆದುಕೊಳ್ಳುತ್ತದೆಯೇ ಅಥವಾ ಭೂಮಿಯನ್ನೇ ಜೀವನೋಪಾಯಕ್ಕೆ ಆಧಾರವಾಗಿರುವ ಭೂಹೀನರಿಗೆ ಪರ್ಯಾಯ ವ್ಯವಸ್ಥೆಯನ್ನು ಮಾಡಬಲ್ಲುದೇ

ಈ ಸರಕಾರ ಬಗರ್ ಹುಕುಂ ಸಾಗುವಳಿ ಭೂಮಿಯನ್ನು ಸಕ್ರಮಗೊಳಿಸುತ್ತೇನೆಂದು ಹೇಳಿ ಅಧಿಕಾರಕ್ಕೆ ಬಂತು. ಆದರೆ ಈಗ ಅದು ಜನವರಿ 1,1989 ರವರಿಗೆ ಅಕ್ರಮ ಸಾಗುವಳಿಯನ್ನು ಸಕ್ರಮಗೊಳಿಸುತ್ತೇವೆಂದು ಹೇಳಿದರೂ, ಇದಕ್ಕೆ ಸಂಬಂಧಪಟ್ಟ ಸರಕಾರದ ತೀರ್ಮಾನ ಬಹಳ ಗೊಂದಲಮಯವಾಗಿದೆ. 'ಸಿ' ಮತ್ತು 'ಡಿ' ವರ್ಗದ ಭೂಮಿಯನ್ನು ಹಿಂದೆ ಅರಣ್ಯ ಇಲಾಖೆಯವರಿಗೆ ಅರಣ್ಯ ಬೆಳೆಸಲು ಕೊಡಲಾಗಿತ್ತು. ಆದರೆ ಇಷ್ಟು ವರ್ಷಗಳಾಗಿದ್ದರೂ ಈ ಭೂಮಿಯ 90ಶೇ. ಭಾಗದಲ್ಲಿ ಅರಣ್ಯ ಬೆಳೆಯಲೇ ಇಲ್ಲ. ಇಂತಹ ಸಿ ಮತ್ತು ಡಿ ಭೂಮಿಯನ್ನೇ ಭೂಹೀನ ಬಡಜನರು 10-15 ವರ್ಷಗಳಿಂದ ಸಾಗುವಳಿ ಮಾಡಿಕೊಂಡು ಜೀವನ ನಡೆಸುತ್ತಿದ್ದಾರೆ. ಈಗ ಲಕ್ಷಾಂತರ ಬಡಕುಟುಂಬಗಳ ಬದುಕಿಗೆ ಇದು ಏಕೈಕ ಆಧಾರ. ಇಂತಹ ಸನ್ನಿವೇಶದಲ್ಲಿ ಅವರು ಸಾಗುವಳಿ ಮಾಡಿಕೊಂಡು ಬಂದ ಭೂಮಿಯನ್ನು ಸಾಗುವಳಿದಾರರಿಗೇ ಹಕ್ಕಿನ ಹಂಚುವ ಕ್ರಮ ರೂಪಿಸದೆ ಅದಕ್ಕಾಗಿ ಒಂದು ಸಮಿತಿ ನೇಮಿಸಲಾಗುವುದು ಎಂದು ಸರಕಾರ ಹೇಳಿರುವುದು ಬಡಭೂಹೀನರ ಬದುಕನ್ನೇ ನೇಣುಗಂಬಕ್ಕೆ ಹಾಕುವ ತಂತ್ರ ಎಂದು ಕಾಂ. ಶ್ರೀರಾಮರೆಡ್ಡಿ ಅಭಿಪ್ರಾಯ ಪಟ್ಟಿದ್ದಾರೆ. ಸಾಗುವಳಿ ಭೂಮಿಯನ್ನು ಸಕ್ರಮಗೊಳಿಸುವಾಗ ಅಸೆಸ್‌ಮೆಂಟ್ ಆಧಾರದ ಮೇಲೆ ದಂಡ ವಸೂಲಿ ಮಾಡಲಾಗುತ್ತದೆಂಬ ಸರಕಾರದ ತೀರ್ಮಾನವನ್ನು ಕರ್ನಾಟಕ ಪ್ರಾಂತ ಕೃಷಿಕೂಲಿಗಾರರ ಸಂಘ ವಿರೋಧಿಸಿದೆ.

ಅಕ್ರಮ ಸಾಗುವಳಿಯನ್ನು ಸಕ್ರಮಗೊಳಿಸಿ ಹಂಚುವಾಗ ತಾಲೂಕು ಮಟ್ಟದಲ್ಲಿ ಭೂಮಂಜೂರು ಮಾಡುವ ಸಮಿತಿಗಳನ್ನು ರಚಿಸಲು ಯೋಚಿಸುತ್ತಿರುವ ಸರಕಾರ ಈ ಸಮಿತಿಗಳಲ್ಲಿ ಕೃಷಿ ಕಾರ್ಮಿಕ ಸಂಘಗಳ ಹಾಗೂ ರೈತಸಂಘಗಳ ಪ್ರತಿನಿಧಿಗಳನ್ನು ಸೇರಿಸಬೇಕೆಂದು ಶ್ರೀರಾಮರೆಡ್ಡಿಯವರು ಒತ್ತಾಯಿಸಿದ್ದಾರೆ.

ಮಂಡಲ ಪಂಚಾಯಿತಿ ಮತ್ತು ಜಿಲ್ಲಾ ಪರಿಷತ್ ಮಸೂದೆಗೆ ತಿದ್ದುಪಡಿಯನ್ನು ತರುವ ಪ್ರಯತ್ನವನ್ನು ಕೂಡಾ ಕರ್ನಾಟಕ ಪ್ರಾಂತ ಕೃಷಿ ಕೂಲಿಗಾರರ ಸಂಘ ತೀವ್ರವಾಗಿ ಖಂಡಿಸುವುದೆಂದು ಕಾಂ. ಶ್ರೀರಾಮರೆಡ್ಡಿ ಯವರು ತಮ್ಮ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಅದ್ವಾಣಿ ರಥಯಾತ್ರೆ: ಛಿದ್ರಕಾರೀ ಕ್ರಮ

ಗುಜರಾತದ ಸೋಮನಾಥ ದೇವಸ್ಥಾನದಿಂದ ಅಯೋಧ್ಯೆಗೆ ಬಿ.ಜೆ.ಪಿ. ಅಧ್ಯಕ್ಷ ಎಲ್.ಕೆ. ಅದ್ವಾಣಿಯವರ ಹತ್ತು ಸಾವಿರ ಕಿ.ಮೀ. ಗಳ ರಥಯಾತ್ರೆಗೆ ಸಿ.ಪಿ.ಐ(ಎಂ) ಪೊಲಿಟ್ ಬ್ಯೂರೋ ತನ್ನ ತೀವ್ರ ಅಸಮ್ಮತಿ ವ್ಯಕ್ತಪಡಿಸಿದೆ. ಇದು ಮಾತುಕತೆಯ ಮೂಲಕ ಇತ್ಯರ್ಥದ ಅಥವಾ ನ್ಯಾಯಾಲಯದ ನಿರ್ಣಯದ ಸಾಧ್ಯತೆಗಳನ್ನು ತೊಡಲೇ ಇಲ್ಲಗೊಳಿಸುವ ಪ್ರಯತ್ನವಿದು ಎಂದು ಪಿ.ಬಿ. ಹೇಳಿದೆ. ವಿವಾದಗ್ರಸ್ತ ಜಾಗದಲ್ಲಿ ರಾಮದೇವಸ್ಥಾನ ಕಟ್ಟುವ ವಿಶ್ವ ಹಿಂದೂ ಪರಿಷತ್ತಿನ ಕರೆಗೆ ಹೊಂದಿಕೊಳ್ಳುವಂತೆ ಈ ಕಾರ್ಯಕ್ರಮವನ್ನು ಬಿ.ಜೆ.ಪಿ. ರೂಪಿಸಿದೆ. ಈ ಮೂಲಕ ಸೂಕ್ಷ್ಮ ಕೋಮು ಪ್ರಶ್ನೆಯ ಮೇಲೆ ಭಾವೋದ್ರೇಕ ಎಬ್ಬಿಸುವ ನೇರ ಪ್ರಯತ್ನ ನಡೆಸಿದೆ. ಇದೊಂದು ಉದ್ರೇಕಕಾರಿ ಕ್ರಮ. ಒಂದೆಡೆ ಬಿ.ಜೆ.ಪಿ. ಅಧ್ಯಕ್ಷರು ರಾಷ್ಟ್ರೀಯ ರಂಗ ಸರ್ಕಾರಕ್ಕೆ ಬೆಂಬಲ ವ್ಯಕ್ತಪಡಿಸಿದ್ದಾರೆ. ಅದೇ ವೇಳೆಗೆ ಇನ್ನೊಂದೆಡೆ ಕೋಮು ಸೌಹಾರ್ದ ಕೆಡಿಸುವ ಕ್ರಮ ಕೈಗೊಂಡು, ಅದೇ ಸರ್ಕಾರದ ಎದುರು ತಿಕ್ಕಾಟದ ನಿಲುವು ತಳೆದಿದೆ. ಇಂತಹ ತಂತ್ರಗಳನ್ನು ಎಲ್ಲಾ ದೇಶಪ್ರೇಮಿ, ಜಾತ್ಯತೀತ ಶಕ್ತಿಗಳು ಖಂಡಿಸಬೇಕೆಂದು ಪೊಲಿಟ್ ಬ್ಯೂರೋ ಹೇಳಿದೆ. ಇಂತಹ ಛಿದ್ರಕಾರೀ ಹೆಜ್ಜೆಯನ್ನು ಕೈಬಿಡುವಂತೆ ಬಿ.ಜೆ.ಪಿ.ಗೆ ಮನವರಿಕೆ ಮಾಡಲು ಕೇಂದ್ರ ಸರ್ಕಾರ ಮತ್ತು ಜಾತ್ಯತೀತತೆಗೆ ಬದ್ಧವಾದ ಎಲ್ಲಾ ರಾಜಕೀಯ ಪಕ್ಷಗಳು ಒಂದಾಗಬೇಕೆಂದು ಪಿ.ಬಿ. ಕರೆನೀಡಿದೆ.

ಅಂತರಾಷ್ಟ್ರೀಯ ಗೊಂಬೆಯಾಟ ಉತ್ಸವ

ಭಾರತ ಗೊಂಬೆಯಾಟಕ್ಕೆ ಬೇಕಿದೆ ಹೊಸ ದೃಷ್ಟಿ

'ಐಕ್ಯರಂಗ' ಪ್ರತಿನಿಧಿಯಿಂದ

ದೆಹಲಿಯಲ್ಲಿ ಮೊಸಲು ವಿರೋಧಿ ಗೊಂಬೆಯಾಟ ತಾರಕಕ್ಕೇರುತ್ತಿದ್ದಂತೆಯೇ ವಿಶ್ವದ 40 ರಾಷ್ಟ್ರಗಳಿಂದ ಆಗಮಿಸಿದ ವಿವಿಧ ಗೊಂಬೆಯಾಟ ತಂಡಗಳು. ನವದೆಹಲಿಯ ವಿವಿಧ ಸ ಭಾಂಗಣಗಳಲ್ಲಿ ಕಿಕ್ಕಿರಿದಿದ್ದ ಪ್ರೇಕ್ಷಕರೆದುರು ತಾವು ಪರಂಪರೆಯಿಂದ ಉಳಿಸಿಕೊಂಡು ಬಂದ ಗೊಂಬೆಯಾಟವನ್ನು ಪ್ರದರ್ಶಿಸುತ್ತಿದ್ದವು.

ಗೊಂಬೆಯಾಟದ ಇತಿಹಾಸವನ್ನು ಸಾರುವ ಹಲವಷ್ಟು ದಾಖಲೆಗಳು ನಮ್ಮ ಸಾಹಿತ್ಯದಲ್ಲಿ ಸಿಕ್ಕಿವೆ. ನೇಮಿನಾಥ ಪುರಾಣದಲ್ಲಿ ಬಸವೇಶ್ವರರ'ಸೂತ್ರದಗೊಂಬೆಗೆ ಪ್ರಾಣವುಂಟೆ' ಎನ್ನುವ ಸಾಲುಗಳು ಕರ್ನಾಟಕದಲ್ಲಿನ ಅದರ ಪ್ರಾಚೀನತೆಯನ್ನು ಸಾರುತ್ತದೆ.

ಭಾರತ ಇಡೀ ವಿಶ್ವದಲ್ಲಿ ಗೊಂಬೆಯಾಟದಲ್ಲಿ ಮೇಲುಗೈ ಪಡೆದಿದೆ. ಇಡೀ ವಿಶ್ವಕ್ಕೆ ಗೊಂಬೆಯಾಟ ವಲಸೆ ಹೋದದ್ದೇ ಭಾರತ ಮತ್ತು ಚೀನಾದಿಂದ. ಚೀನಾ ತೊಗಲುಗೊಂಬೆಯಾಟಕ್ಕೆ ಹೆಸರಾದರೆ ಭಾರತ ಉಳಿದ ಪ್ರಕಾರಗಳಾದ ಸೂತ್ರ, ಸಲಾಕೆ ಗೊಂಬೆಯಾಟಗಳಿಗೆ ಪ್ರಸಿದ್ಧಿ. ಭಾರತದ ಈ ಸ್ಥಾನವನ್ನು ಪುನಃ ನೆನಪಿಸಲು ಮತ್ತು ಈ ಮೂಲಕ ವಿಶ್ವ ಭ್ರಾತೃತ್ವವನ್ನು ಕಾಪಾಡಲು ಮತ್ತು ವಿಶ್ವದ ಗೊಂಬೆಯಾಟ ಸ್ಥಿತಿಯನ್ನು ಪರಿಚಯಿಸಲು 'ಭಾರತ ವಿಶ್ವ ಗೊಂಬೆಯಾಟ ಉತ್ಸವ'ವನ್ನು ಕೇಂದ್ರ ಸಂಗೀತ ನಾಟಕ ಅಕಾಡೆಮಿ ಮತ್ತು ಭಾರತ ಸಾಂಸ್ಕೃತಿಕ ಸಂಬಂಧಗಳ ಪರಿಷತ್ತುಗಳು ಹಮ್ಮಿಕೊಂಡಿದ್ದವು.

ಉತ್ಸವದಲ್ಲಿ ಸೋವಿಯತ್ ದೇಶ, ವಿಯಟ್ನಾಂ, ಚಿಲಿ,ಚೀನಾ ರೋಮೇನಿಯಾ, ಇರಾನ್, ಜರ್ಮನಿ, ಟರ್ಕಿ, ಫ್ರಾನ್ಸ್, ಜಪಾನ್ ಹಾಗೂ ಇತರೆ ದೇಶಗಳು ಭಾಗವಹಿಸಿದ್ದವು.

ಇಡೀ ಉತ್ಸವವನ್ನು ವೀಕ್ಷಿಸಿದಾಗ ಕಂಡುಬಂದ ಅಂಶ ಇಷ್ಟು...ಭಾರತದ ಸಾವಿರಾರು ವರ್ಷಗಳ ಪರಂಪರೆ ಹಾಗೂ ಇತರೆ ದೇಶಗಳ ಪ್ರಯೋಗ ಶೀಲತೆಗಳು ಎದುರು ಬದುರಾಗಿ ನಿಂತಿದ್ದವು.

ಭಾರತ ಸಾವಿರಾರು ವರ್ಷಗಳಿಂದ ಗೊಂಬೆಯಾಟ ಮೈಗೂಡಿಸಿಕೊಂಡಿದ್ದರೂ ಪರಂಪರೆಯ ದೃಷ್ಟಿಕೋನದಿಂದ ಈಚೆ ಸರಿದಿಲ್ಲದಿರುವುದು ಸ್ಪಷ್ಟವಾಗಿತ್ತು. ಆದರೆ ವಿದೇಶಿ ತಂಡಗಳಿಗೆ ಹೆಚ್ಚೇನೂ ಪರಂಪರೆಯ ಚೌಕಟ್ಟು ಇಲ್ಲದಿದ್ದರೂ ಸಹ ಅವು ಗೊಂಬೆಯಾಟದಲ್ಲಿ ಮಾಡಿರುವ ಪ್ರಯೋಗಗಳು ಪರಂಪರೆಯ ಆಟಗಳನ್ನು ಮೀರಿಸಿತ್ತಲ್ಲದೆ ಇಂದಿನ ಪೀಳಿಗೆಗೆ ಮುಖ್ಯವಾದ ರಹದಾರಿ ಒದಗಿಸಿದ್ದವು. ಆ ಗೊಂಬೆಯಾಟಗಳು ನಾಳಿನ ಗೊಂಬೆಯಾಟದ ಬಗೆಗಿನ ಮುನ್ಸೂಚಿಯೂ ಆಗಿದ್ದವು.

ಕರ್ನಾಟಕದಲ್ಲಿ ಗೊಂಬಿರಾಮರು ಅಥವಾ ಕಿಳ್ಳೇಕ್ಯಾತರೆಂದೇ ಕರೆಯಲ್ಪಡುವ ತೊಗಲು ಗೊಂಬೆಯಾಟ ತಂಡಗಳು ಹಲವಷ್ಟಿವೆ. ಅಂತರಾಷ್ಟ್ರೀಯ ಮಟ್ಟದಲ್ಲೂ ಸುದ್ದಿಮಾಡಿರುವ ತಂಡಗಳು ಅನೇಕ. ಈ ಸಲದ ಉತ್ಸವದಲ್ಲಿ ರಾಯಚೂರಿನ ದೊಡ್ಡ ಬಾಳಪ್ಪ ಕಿಳ್ಳೇಕ್ಯಾತರ ತಂಡ ಕರ್ನಾಟಕವನ್ನು ಪ್ರತಿನಿಧಿಸಿತು. ತೊಗಲು ಗೊಂಬೆಯಾಟದವರ ಪೈಕಿ ಅತ್ಯಂತ ಹಳೆಯ ಗೊಂಬೆಗಳನ್ನು ಹೊಂದಿರುವ ಈ ತಂಡ ಇಂದಿಗೂ ಆಟದ ಶೈಲಿ, ರಂಗಮಂಟಪ, ಮೇಳಕ್ಕೂ ಹಳತನದ ಲೇಪವನ್ನೇ ನೀಡುತ್ತದೆ.

ಉತ್ಸವದಲ್ಲಿ ಹಲವು ಪ್ರ ದರ್ಶನ ನೋಡಿದಾಗ ಭಾರತದ ಗೊಂಬೆಯಾಟಕ್ಕೆ ಹೊಸ ಆಯಾಮ ಅಥವಾ ಷಾಕ್ ಟ್ರೀಟ್‌ಮೆಂಟ್ ನೀಡಬೇಕಾದ ಅವಶ್ಯಕತೆ ಇದೆ ಎನಿಸುತ್ತದೆ. ಹೊಸ ಪ್ರಯೋಗಗಳ ಮೂಲಕ ಭಾರತದ ಗೊಂಬೆಯಾಟವನ್ನು ಇಂದಿನ ವೇಗದ ಯುಗಕ್ಕೆ ತರಬೇಕಾಗಿದೆ. ಕಂಪ್ಯೂಟರ್ ಯುಗದತ್ತ ಧಾವಿಸುತ್ತಿರುವ ದೇಶ ಹಾಗೂ ಪುರಾತನ ಪರಂಪರೆಗೇ ಜೋತುಬಿದ್ದಿರುವ ತಂಡಗಳ ನಡುವೆ ಎಲ್ಲಿಯೂ ಸಾಮರಸ್ಯವೇ ಇಲ್ಲದ ಕಾರಣದಿಂದಾಗಿಯೇ ಅದ್ಭುತ ಕಲೆಗಾರಿಕೆ ಹೊಂದಿರುವ ತಂಡಗಳು ನಶಿಸಿಹೋಗುವ ಹಂತದಲ್ಲಿವೆ. ಕಲ್ಕತ್ತದಲ್ಲಿ, ಕಲ್ಕತ್ತ ಪಪ್ಪೆಟ್ ಥಿಯೇಟರ್, ದೆಹಲಿಯಲ್ಲಿ ದಾದಿ ಪದಂಜೀ ಅವರುಗಳು ಗೊಂಬೆಯಾಟಕ್ಕೆ ಹೊಸ ಆಯಾಮ ನೀಡಲು ಪ್ರಯತ್ನಿಸುತ್ತಿದರೂ ಸಹ ಈ ನಿಟ್ಟಿನಲ್ಲಿ ನಾವು ಸಾಗಬೇಕಾದ ದಾರಿ ಬಹುದೂರವಿದೆ.

ಸೋವಿಯತ್ ದೇಶದ ಗೊಂಬೆಯಾಟ ಹೊಸ ಪ್ರಯೋಗಕ್ಕೆ ಉತ್ತಮ ಉದಾಹರಣೆ. ಉಜ್ಬೆಕ್ ರಾಷ್ಟ್ರೀಯ ಗೊಂಬೆಯಾಟ ತಂಡ 'ಕಮ್ಮಾರ ಮತ್ತು ರಾಜಕುಮಾರಿ' ಎಂಬ ಮಕ್ಕಳ ಕಥೆಗೆ ಗೊಂಬೆಯಾಟದ ರೂಪು ನೀಡಿತು. ಮುಖ್ಯವಾಗಿ ಈ ತಂಡದ ಯಶಸ್ಸಿದ್ದದ್ದು ಕಥೆಯ ಆಯ್ಕೆಯಲ್ಲಿ. ಪಾತಾಳಲೋಕದ ದುಷ್ಟ ರಾಣಿಯ ಮಗಳನ್ನು ಕಮ್ಮಾರ ಪ್ರೀತಿಸುವುದರೊಂದಿಗೆ ಆರಂಭವಾಗುವ ಕಥೆ ದುಡಿಮೆ, ಒಳಿತು-ಕೆಡುಕು, ಶ್ರಮಕ್ಕೆ ಜಯ, ಒಗ್ಗಟ್ಟಿನಲ್ಲಿ ಬಲವಿದೆ ಎನ್ನುವ ಅಂಶಗಳು ಎಲ್ಲಿಯೂ ಘೋಷಣೆಯಾಗದಂತೆ ಸರಳವಾಗಿ ಪ್ರೇಕ್ಷಕರಿಗೆ ನೀಡುತ್ತದೆ. ಈ ಮಧ್ಯೆ ರಂಗ ಸಜ್ಜಿಕೆ, ಬೆಳಕಿನ ಅಂಶಗಳ ಮೂಲಕ ಪ್ರಯೋಗದ ಅಪಾರ ಪರಿಣಾಮವನ್ನು ತರಲುಶ್ರಮಿಸಲಾಯಿತು.

ಭಾರತದ ತಂಡಗಳು ಪ್ರದರ್ಶಿಸುವ ಬಹುತೇಕ ವಸ್ತು ರಾಮಾಯಣ, ಮಹಾಭಾರತದ ಆಯ್ದ ಪ್ರಸಂಗಗಳು. ಆದರೆ ಇದರಲ್ಲಿಯೂ ಇಂದಿನ ಬದುಕಿನ ಜೊತೆ ಸಮೀಕರಿಸಬಹುದಾದ ಹಲವು ಪ್ರಸಂಗಗಳಿವೆ ಅಥವಾ ಈಗ ಅಭಿನಯಿಸುತ್ತಿರುವ ಪ್ರಸಂಗಗಳಿಗೇಈ ಆಯಾಮ ನೀಡುವ ಸಾಧ್ಯತೆಯಿದೆ. ಆದರೆ ಗಣಪತಿ, ಸರಸ್ವತಿ ಪೂಜೆಯಿಂದ ಆರಂಭವಾಗಿ ಮಂಗಳ ಪದ್ಯದವರೆಗೆ ಅದೇ ಶೈಲಿಯನ್ನೇ ಉಳಿಸಿಕೊಂಡಿರುವುದುಆಟದ ಪದಗಳಲ್ಲಿ, ಅರ್ಥಗಳಲ್ಲಿ ಹೊಸತನ ತುಂಬಲು ದೈವಿಕ ಕಾರಣ ನೀಡಿ ಹಿಂದೇಟು ಹಾಕುವುದು ನಮ್ಮ ಗೊಂಬೆಯಾಟ ಸ್ಥಗಿತವಾಗಲು ಕಾರಣವಾಗಿದೆ. ಪ್ರಯೋಗಗಳ ಮೂಲಕ ಇದಕ್ಕೆ ಹೊಸ ಚಾಲನೆ ನೀಡದಿದ್ದ ಪಕ್ಷದಲ್ಲಿ 'ಪರಂಪರೆ' ಮಾತ್ರ ನಮ್ಮ ಹೆಮ್ಮೆಯಾಗಿ ಬಿಡುತ್ತದೆ.

ನಿಮ್ಮ ರಕ್ತದಾನ—ವಿದೇಶಿ ಕಂಪನಿಗಳಿಗೆ ಲಾಭ

ವಿಜ್ಞಾನ-ತಂತ್ರಜ್ಞಾನ

ಹೌದು! ಸಧ್ಯಕ್ಕೆ ಇದೇ ಆಗುತ್ತಿರುವುದು. ನೀವು ದಾನ ಮಾಡುತ್ತಿರುವ ರಕ್ತ ಇಡಲು ಬೇಕಾದ ರಕ್ತಚೀಲಗಳ ಮೇಲೆಬಹುರಾಷ್ಟ್ರೀಯ ಕಂಪನಿಗಳು ಭಾರಿ ಲಾಭ ಹೊಡೆಯುತ್ತವೆ. ಭಾರತೀಯ ಕಂಪನಿಗಳು ಮಾಡುತ್ತಿರುವ ರಕ್ತಚೀಲಗಳಿಗೆ ಪ್ರೋತ್ಸಾಹ ಸಿಗದಿದ್ದರೆ, ಇದು ಶಾಶ್ವತವಾಗಬಹುದು. ನಿಮ್ಮ ರಕ್ತದ ಜತೆ ವಿದೇಶಿ ಕಂಪನಿಗಳು ಲಾಭವನ್ನು ಹೀರುತ್ತಿವೆ. ರಕ್ತ ಕೊಡುವುದು ಈಗಿನ ವೈದ್ಯಕೀಯ ವಿಜ್ಞಾನದಲ್ಲಿ ಜೀವ ಉಳಿಸುವ ಪ್ರಮುಖ ವಿಧಾನ. ಇದಕ್ಕಾಗಿ ರಕ್ತದಾನಿಗಳು ಕೊಟ್ಟಿರುವ ರಕ್ತವನ್ನು ರಕ್ತಚೀಲಗಳಲ್ಲಿ ಶೇಖರಿಸಿ ಇಡಬೇಕಾಗುತ್ತದೆ. ಇದನ್ನು ವಿಶಿಷ್ಟ ಪಿವಿಸಿ ಪದಾರ್ಥಗಳಲ್ಲಿ ಮಾಡಲಾಗುತ್ತದೆ. ಇತ್ತೀಚಿನವರೆಗೆ ಇದನ್ನು ಜಪಾನು, ದ.ಕೋರಿಯಾಗಳಿಂದ ಆಮದು ಮಾಡಿಕೊಳ್ಳಲಾಗುತ್ತಿತ್ತು. ರಕ್ತಚೀಲವೊಂದಕ್ಕೆ 50 ರಿಂದ 100 ರೂ.ವರೆಗೆ ತಗಲುತ್ತಿತ್ತು. ಮೂರು ವರ್ಷಗಳ ಹಿಂದೆ,ತಿರುವನಂತಪುರದ ಪೆನಿನ್ಸುಲಾ ಪೊಲಿಮರ್ ಲಿಮಿಟೆಡ್ ಇದರ ತಯಾರಿಕೆ ಆರಂಭಿಸಿತು. ಇದಕ್ಕೆ ಬೇಕಾದ ತಂತ್ರಜ್ಞಾನವನ್ನು ಶ್ರೀ ಚಿತ್ರಾ ತಿರುನಾಳ್ ಇನ್ಸ್‌ಟಿಟ್ಯೂಟ್ ಒದಗಿಸಿತು. ಈ ಕಂಪನಿಗೆ ಈ ಚೀಲಗಳನ್ನು 25 ರಿಂದ3 0ರೂ.ಗಳ ಒಳಗೆ ಮಾರಲು ಸಾಧ್ಯವಾಯಿತು.

ದೇಶಿಯ ಕಂಪನಿಯಿಂದ ಬಂದ ಈ ಸವಾಲನ್ನು ಬಹುರಾಷ್ಟ್ರೀಯ ಕಂಪನಿಗಳು , ಸುಮ್ಮನೆ ಕೂರುತ್ತಾ ನೋಡಲಿಲ್ಲ. ಅವು ಬೆಲೆಯನ್ನು 14 ರೂ.ಗೆ ಇಳಿಸಿದವು. ಹೆಚ್ಚು ಕಡಿಮೆ ಹಿಂದಿನ ಬೆಲೆಯ ಆರನೆ ಒಂದು ಭಾಗಕ್ಕೆ ಬೆಲೆ ಕಡಿಮೆ ಮಾಡಿದ್ದು ಭಾರತದ ರೋಗಿಗಳ ಬಿಲ್ಲು ಕಡಿಮೆಯಾಗಲಿ ಎಂದಲ್ಲ. ಪೆನಿನ್ಸುಲಾ ಪಾಲಿಮರ್(ತಿರುವನಂತಪುರ) ನ್ನು ಈ ತಯಾರಿಕೆಯ ಸ್ಪರ್ಧೆಯಿಂದ ಹೊರಹಾಕಲು, ಸಾಧ್ಯವಾದರೆ ಅದನ್ನು ದಿವಾಳಿ ಎಬ್ಬಿಸಲು.ದ.ಕೋರಿಯಾದ ಕಂಪನಿಯು ಈಗಿನ ಬೆಲೆ, ಅವರ ದೇಶದಲ್ಲೇ ಮಾರುತ್ತಿರುವ ಬೆಲೆಯ ಮೂರನೇ ಎರಡು ಭಾಗ. ಇದರಿಂದ 'ಪೆನಿನ್ಸುಲಾ' ಕಂಪನಿ ಹೆಚ್ಚುಕಡಿಮೆಮುಚ್ಚುವ ಹಂತಕ್ಕೆ ಬಂದಿತ್ತು. 1989 -90 ರಲ್ಲಿ ಅದು ತನ್ನ ಉತ್ಪಾದನಾ ಸಾಮರ್ಥ್ಯದ ಅರ್ಧದಷ್ಟು ರಕ್ತಚೀಲಗಳನ್ನು ಮಾರಲು ಸಾಧ್ಯವಾಯಿತು. ಆದರೆ ಈಗ ಕೇರಳ ಮತ್ತು ಪಶ್ಚಿಮ ಬಂಗಾಳ ಸರಕಾರಗಳು 'ಪೆನಿನ್ಸುಲಾ' ಕಂಪನಿಯಿಂದಲೇ ರಕ್ತಚೀಲಗಳನ್ನು ತೆಗೆದುಕೊಳ್ಳಬೇಕೆಂದು ಆಜ್ಞೆ ಮಾಡಿದ್ದು, ಅದರ ಮಾರಾಟ ಉತ್ಪಾದನಾ ಸಾಮರ್ಥ್ಯದ ಶೇಕಡಾ 80ಕ್ಕೆ ಏರುವ ಸಾಧ್ಯತೆ ಇದೆ. ಬಹುರಾಷ್ಟ್ರೀಯ ಕಂಪನಿಗಳ ಆಟ ನಡೆಯಲಿಲ್ಲ.

ಪ್ರತಿಭಾ ಪಲಾಯನ

ಪ್ರತಿವರ್ಷ ಅಮೇರಿಕದ ಶೈಕ್ಷಣಿಕ ವರ್ಷ ಆರಂಭವಾಗುತ್ತಿದ್ದಂತೆ, ಭಾರತದ ಸುಮಾರು ಹತ್ತು ಸಾವಿರ ಇಂಜನೀಯರುಗಳು, ವಿಜ್ಞಾನಿಗಲು, ಡಾಕ್ಟರುಗಳು ಅಮೇರಿಕನ್ ವಿಶ್ವವಿದ್ಯಾನಿಲಯಗಳಲ್ಲಿ ಉನ್ನತ ಅಧ್ಯಯನಕ್ಕಾಗಿ ಚಾತಕ ಪಕ್ಷಿಗಳಂತೆ ಕಾದಿರುತ್ತಾರೆ. ಇವರಲ್ಲಿ 1000 ದಿಂದ1500, ಉನ್ನತ ಅಧ್ಯಯನಕ್ಕೆ ಸೀಟುಗಳನ್ನು ಗಿಟ್ಟಿಸುತ್ತಾರೆ. ಇಂತಹ ಪ್ರತಿಭಾ ಪಲಾಯನ, ಮೂರನೆಯ ಜಗತ್ತಿನ ದೇಶಗಳಿಂದ, ಸಾಮ್ರಾಜ್ಯಶಾಹಿ ಪಾಶ್ಚಿಮಾತ್ಯ ದೇಶಗಳು ಸುಲಿಗೆ ಮಾಡುವ ಇನ್ನೊಂದು ವಿಧಾನ.

80ಕೋಟಿ ಜನಸಂಖ್ಯೆಯಲ್ಲಿ, ಕೇವಲ ಒಂದು ಸಾವಿರ ಯಾವ ಮಹಾನಷ್ಟ ಎಂದಿರಾ? ಆದರೆ ಈ ಒಂದು ಸಾವಿರ ವಿಜ್ಞಾನ, ತಂತ್ರಜ್ಞಾನಗಳ ವಿಶಿಷ್ಟ ವಿಭಾಗಳಲ್ಲಿ ಪರಿಣಿತಿ ಹೊಂದಿರುವ ಜನ, ಈ ವಿಭಾಗಳಲ್ಲಿ ದೇಶದ ವಿಜ್ಞಾನ-ತಂತ್ರಜ್ಞಾನವನ್ನು ಮುಂದಕ್ಕೊಯ್ಯಬೇಕಾದವರು. ದೇಶಕ್ಕೆ ಶಾಶ್ವತವಾಗಿ ಇಲ್ಲವಾಗುತ್ತಾರೆ. ಭಾರತದಿಂದ ಅಮೇರಿಕಕ್ಕೆ ನಡೆಯುತ್ತಿರುವ ಪ್ರತಿಬಾ ಪಲಾಯನದ ಒಟ್ಟು ಪ್ರಮಾಣ ಲೆಕ್ಕ ಹಾಕಿದಂತೆ, 1966 ರಿಂದೀಚೆಗೆ ಸುಮಾರು 40 ಸಾವಿರದಷ್ಟು. ಭಾರತ ಈ ವಿಜ್ಞಾನಿಯನ್ನು ತರಬೇತು ಮಾಡಲು ಸುಮಾರು 50 ಲಕ್ಷ ಖರ್ಚುಮಾಡುತ್ತದೆ. ಈ ಪ್ರಮಾಣದಲ್ಲಿ ಸುಮಾರು 50 ಕೋಟಿ ಡಾಲರು ಖರ್ಚುಮಾಡಿ ತಯಾರಿಸಿದ ಪರಿಣತರನ್ನು ಪುಕ್ಕಟೆ ಅಮೇರಿಕಕ್ಕೆ ದಾನ ಮಾಡಿದ್ದೇವೆ. ಯಾವುದೇ ರಿತಿಯಲ್ಲಿ ಪ್ರಯೋಜನ ವಾಪಸು ಪಡೆಯದೆ ನಮಗಾದ ನಷ್ಟ ಅಮೇರಿಕಕ್ಕೆ ಲಾಭ ಮಾತ್ರವಲ್ಲ, ಅವರ ಲಾಭ ಇನ್ನೂ ಹೆಚ್ಚಿನದು. ಯಾಕೆಂದರೆ ಅಮೇರಿಕದಲ್ಲಿ ತರಬೇತಿ ವೆಚ್ಚ ಇನ್ನೂ ಹೆಚ್ಚಿನದು. ಸುಮಾರು 1000 ವಿಜ್ಞಾನಿಗಳನ್ನು ತರಬೇತು ಮಾಡಬೇಕಾದರೆ 1000-1200 ಕೋಟಿ ಡಾಲರುಗಳಾಗುತ್ತವೆ.

1970 ಒಂದೇ ವ ರ್ಷದಲ್ಲಿ ಅಂಕ್ಟಾಡ್ ಎಂಬ ವಿಶ್ವಸಂಸ್ಥೆ ಅಂಗ ಸಂಸ್ಥೆ ನಡೆಸಿದ ಅಧ್ಯಯನದ ಪ್ರಕಾರ ಅಮೇರಿಕಾ ಅಭಿವೃದ್ಧಿ ಹೊಂದುತ್ತಿರುವ ದೇಶಗಳಿಗೆ 310 ಕೋಟಿ ಡಾಲರುಗಳನ್ನು ಸಹಾಯಧನವಾಗಿ ಕೊಟ್ಟರೆ, ಪ್ರತಿಭಾ ಪಲಾಯನದಿಂದ 370 ಕೋಟಿ ಡಾಲರುಗಳನ್ನು ಗಳಿಸಿತು. ಅಂದರೆ 60 ಕೋಟಿ ಡಾಲರುಗಳ ನಿವ್ವಳ ಲಾಭ ಗಳಿಸಿತು. ಇದು ತರಬೇತಿ ವೆಚ್ಚ ತೆಗೆದುಕೊಂಡು ಮಾಡಿದ ಲೆಕ್ಕಾಚಾರ. ಇಂತಹ ವಿಜ್ಞಾನಿಗಳು ಅಲ್ಲಿಯ ಆರ್ಥಿಕತೆಗೆ ಮಾಡುತ್ತಿರುವ ಕೊಡುಗೆ ಮತ್ತು ಇಲ್ಲಿ ಅದರ ಕೊರತೆಯಿಂದ ಆಗುತ್ತಿರುವ ನಷ್ಟ ಒಟ್ಟಾರೆಯಾಗಿ ಊಹಿಸಲಾಗದಷ್ಟು ದೊಡ್ಡದು.

ಊರ್ವಶಿಯ ಶಾಪ: ಕಮ್ಯುನಿಸ್ಟರಿಗೆ ವರವೇ?

(ಹಿಂದಿನ ಸಂಚಿಕೆಯಿಂದ)

ಬಂಗಾಳದಲ್ಲಿನ ಭೀಕರ ಕ್ಷಾಮ-ಹಸಿವಿನೆದುರು ಕಮ್ಯುನಿಸ್ಟರ ಪರಿಶ್ರಮ ಅಮೋಘವಾದುದು. ಒಂದೊಂದು ಜಿಲ್ಲೆಗಳಲ್ಲಿಯೂ ಒಂದೊಂದು ಬಗೆಯದಾಗಿತ್ತು. ಹೂಗ್ಲಿ ಜಿಲ್ಲೆಯಲ್ಲಿಮಲೇರಿಯಾದಿಂದಾಗಿ ಸಾವಿರಾರು ಜನರು ಸಾವಿನದವಡೆಯಲ್ಲಿ ಸಿಕ್ಕಿ ನರಳುತ್ತಿದ್ದರು. ಕಮ್ಯುನಿಸ್ಟ್ ಕಾರ್ಯಕರ್ತರು ಔಷಧಿಗಳನ್ನು ಸಂಗ್ರಹಿಸಿ ರೋಗಿಗಳಿಗೆ ವಿತರಿಸುವುದು, ಮುಂತಾದ ಉಪಚಾರಗಳನ್ನು ಮಾಡುತ್ತಿದ್ದರು. ಕಾರ್ಯಕರ್ತರ ಕಾರ್ಯವೈಖರಿಯು ಹಲವಾರು ಜನರನ್ನು ತೊಡಗಿಸಿಕೊಳ್ಳಲು ಪ್ರೇರೇಪಿಸಿತ್ತು. ಕೆಲವು ವೈದ್ಯರುಗಳಿಗೂ ಸ್ಫೂರ್ತಿ ನೀಡಿತು. ಅಂತಹವರಲ್ಲೊಬ್ಬ ವೈದ್ಯ ಡಾ.ಬಿದನ್ ಚಂದ್ರ ರಾಯ್. ಆ ಕಾಲದಲ್ಲಿ ಮೂರು ಲಕ್ಷ ರೂಪಾಯಿಗಳ ಮೌಲ್ಯದ ಔಷಧಿಗಳನ್ನು ನೀಡಿದರಲ್ಲದೇ ಕಮ್ಯುನಿಸ್ಟ್ ಕಾರ್ಯಕರ್ತರೊಂದಿಗೆ ಸೇವೆಗೆ ನಿಂತರು.

ಎಲ್ಲೆಡೆ ಜನ ಆಹಾರಕ್ಕಾಗಿ ಹಾಹಾಕಾರ ಪಡುತ್ತಿದ್ದರು. ಜಮೀನ್ದಾರರುಗಳ ಕಣಜದಲ್ಲಿ ಭತ್ತ ಅಕ್ರಮವಾಗಿ ಕೊಳೆಯುತ್ತಿತ್ತು. ಈ ಅಕ್ರಮ ಭತ್ತವನ್ನು ವಶಪಡಿಸಿಕೊಂಡು ಜನರಿಗೆ ಹಂಚಲಾಯಿತು. ಜಮೀನ್ದಾರರುಗಳು ಮೊಕದ್ದಮೆ ಹೂಡಿದರು. ಆದರೆ ಸ್ಥಿತಿ ಎಷ್ಟು ಭೀಕರವಿತ್ತೆಂದರೆ ನ್ಯಾಯಾಧೀಶರು, ಪೋಲೀಸರು ಕ್ರಮ ಕೈಗೊಳ್ಳಲು ಹಿಂದೇಟು ಹಾಕಿದರು.

ಈ ಅವಧಿಯಲ್ಲಿ ಸ್ವಾತಂತ್ರ್ಯ ಹೋರಾಟ ಬಿರುಸುಗೊಳ್ಳುತ್ತಿತ್ತು. ಬ್ರಿಟೀಷರು ಲಾಠಿ, ಬಂದೂಕಗಳಿಂದ ಹಾಗೂ ಸಾಮೂಹಿಕ ದಂಡಗಳನ್ನು ವಿಧಿಸಿ ಹೋರಾಟವನ್ನು ಛಿದ್ರಗೊಳಿಸಲು ಯತ್ನಿಸುತ್ತಿದ್ದು. ಪ.ಬಂಗಾಳದಲ್ಲೆಲ್ಲಾ ಕಾಳಸಂತೆಕೋರರು, ಸೈನ್ಯಾಧಿಕಾರಗಳು, ಕಂಟ್ರಾಕ್ಟರುದಾರರುಗಳು, ಶ್ರೀಮಂತರಾಗುತ್ತಾ ಅವರ ಸ್ವರ್ಗವಾಯಿತು. ಸ್ತ್ರೀಯರನ್ನು ವ್ಯಾಪಾರ ಮಾಡುತ್ತಿರುವವರು ಸಮಾಜದಲ್ಲಿ ಪ್ರತಿಷ್ಠಿತ ಸ್ಥಾನಗಳನ್ನು ಆಕ್ರಮಿಸತೊಡಗಿದರು. ಬ್ರಿಟೀಷರ ಈ ವ್ಯವಸ್ಥೆ ಸಮಾಜದಲ್ಲಿ ಭೀಕರತೆಯ ಸೃಷ್ಟಿಗೆ ಕಾರಣವಾಗಿತ್ತು. ಕಮ್ಯುನಿಸ್ಟರು ಈ ಸ್ಥಿತಿಯ ವಿರುದ್ಧ ರಾಜಿಇಲ್ಲದೇ ದೃಢತೆಯಿಂದ ಹೋರಾಟ ನಡೆಸಿದರು. ಬ್ರಿಟೀಷರ ದಬ್ಬಾಳಿಕೆಯೆದುರು ಅಲುಗಾಡಲಿಲ್ಲ. ಸಂಕುಚಿತ ರಾಷ್ಟ್ರೀಯವಾದಿಗಳು ಕಮ್ಯುನಿಸ್ಟರ ವಿರುದ್ಧ ಅದೆಷ್ಟೇ ಅಪಪ್ರಚಾರ ನಡೆಸಿದರೂ ಕಾರ್ಮಿಕರು,ಕೃಷಿಕರು,ಪ್ರಗತಿಪರ ಚಿಂತಕರು ಕಮ್ಯುನಿಸ್ಟರತ್ತ ಆಕರ್ಷಿತರಾದರು.

ಇಂತಹ ಸ್ಥಿತಿಯಲ್ಲಿ ಫ್ಯಾಸಿಸ್ಟ್ ವಿರೋಧಿ ಜನರನ್ನು ಕಮ್ಯುನಿಸ್ಟ್ ಪಕ್ಷ ವ್ಯಾಪಕವಾಗಿ ಸೆಳೆಯಿತು. ಪ.ಬಂಗಾಳದಪಾರ್ಟಿ ಘಟಕದ ಸದಸ್ಯತ್ವ 1938ರಲ್ಲಿ 500 ಇದ್ದದ್ದು1943-ರಲ್ಲಿ 3000ಕ್ಕೇರಿತು. ಒಂದು ಗುಂಪಾಗಿದ್ದ ಪಕ್ಷ ಸಾಮೂಹಿಕ ನೆಲೆಯಲ್ಲಿನ ಪಕ್ಷವಾಗಿ ಬೆಳೆಯತೊಡಗಿತು.

1943 ಮಾರ್ಚ್ 18ರಿಂದ 21 ರವರೆಗೆ ಕಲ್ಕತ್ತದಲ್ಲಿ ಪಕ್ಷದ 3ನೇ ರಾಜ್ಯ ಸಮ್ಮೇಳನ ಸೇರಿತು. ಇದು ಬಂಗಾಳದಲ್ಲಿ ಮೊದಲ ಬಹಿರಂಗ ಸಮ್ಮೇಳನವಾಗಿತ್ತು. ನೆರೆದಿದ್ದ ಪ್ರತಿನಿಧಿಗಳ ಮುಂದೆ ಕಾಂ.ಸೋಮನಾಥ ಲಹರಿಯವರು ಆವೇಶದಿಂದ ಮಾತನಾಡತೊಡಗಿದರು.

'ಸಂಗಾತಿಗಳೇ, 22 ವರುಷಗಳ ಹಿಂದೆ ಒಬ್ಬ ಯುವಕ ಅಸಾಧಾರಣ ಧೀರತೆಯಿಂದ ಪ್ರೇರಣೆ, ಉತ್ಸಾಹದಲ್ಲಿ ಒಂದು ಕೆಂಪು ಬಾವುಟ ಹಿಡಿದು ಬೀದಿಗಳ ಮೂಲೆಗಳಲ್ಲಿ ಹಾಡು ಹಾಡಿ-ಭಾಷಣ ಮಾಡಿ ಕಮ್ಯುನಿಸ್ಟ್ ವಿಚಾರ ಗಳನ್ನು ಪ್ರಚಾರಪಡಿಸುತ್ತಿದ್ದ. ಅಂದು ಆತನಿಗೆ ಸಹಾಯ ಮಾಡುತ್ತಿದ್ದುದು ಕೇವಲ 3 ಅಥವಾ 4ಜನ ಮಾತ್ರ. ಅವರಿಗೆ ಕೆಲಸ-ಕಾರ್ಯಗಳ ಪರಿಚಯವಿರಲಿಲ್ಲ. ರಾಜಕೀಯ ಅನುಭವವೂ ಅಷ್ಟಕಷ್ಟೆ. ಆದರೆ ಅವರೆದುರು ಅಪಾರ ಜನಸಂಪತ್ತೆ ಇತ್ತು. ರಶಿಯನ್ ಮಹಾ ಕ್ರಾಂತಿಯು ಅವರಿಗೆ ಪ್ರಚೋದನೆ, ಸ್ಫೂರ್ತಿ ನೀಡಿತ್ತು. ಅದಾಗಿ ಒಂದು ಕಾಲು ಶತಮಾನ ಕಳೆದಿದೆ. ಹಾಡುಹಾಡಿ-ಭಾಷಣ ಮಾಡಿದ ಆ ಯುವಕನೇ ಕಾಂ. ಮುಝಫರ್ ಅಹ್ಮದ್. ಅಂದು ಧ್ವಜ ಎತ್ತಿಹಿಡಿದ ಕೈಗಳು ವಯಸ್ಸಾಗಿರುವುದರಿಂದಾಗಿ ದುರ್ಬಲವಾಗಿರಬಹುದು. ಆದರೆ ಇಂದು ಆ ಬಾವುಟವನ್ನು ಎತ್ತಿ ಹಿಡಿದು ಸಾವಿರ ಸಾವಿರ ಬಲಿಷ್ಠ ಕೈಗಳು ಅವರಿಗೆ ಬಲನೀಡುತ್ತಿವೆ. ತನ್ನಲ್ಲಿ ಹಲವಾರು ಜನ, ಕಾಂಗ್ರೆಸ್ ಪಕ್ಷದಿಂದ, ರೈತ- ಕಾರ್ಮಿಕ, ವಿದ್ಯಾರ್ಥಿ ಯುವಜನರ ಮಧ್ಯದಿಂದ ಆಯುಧ ಹೋರಾಟದಿಂದ ಬಂದವರಿದ್ದೀರಿ. ಎಲ್ಲರ ಅನುಭವ ಇಂದು ಪಕ್ಷದಲ್ಲಿ ಕೇಂದ್ರೀಕೃತವಾಗಿದೆ. ಕಮ್ಯುನಿಸ್ಟರು ದೇಶದಲ್ಲಿನ ಅಮೂಲ್ಯ ಸಂಪತ್ತಾಗಿದ್ದಾರೆ. ತ್ಯಾಗ- ಬಲಿದಾನಗಳನ್ನು ಮರೆದ ನಮ್ಮ ಪಕ್ಷ ಒಂದು ಬೃಹತ್ ಶಕ್ತಿಯಾಗಿ ಬೆಳೆಯುವ ದಿನಗಳು ಬಹಳ ದೂರವಿಲ್ಲ! ಎಂದು ಹೆಮ್ಮೆಯಿಂದ ನುಡಿದರು. ಮುಂದಿನ ದಿನಗಳು ಈ ವಸ್ತುನಿಷ್ಠ ವಿಶ್ಲೇಷಣೆಯನ್ನು ಸಾಬೀತುಪಡಿಸಿದವು.

ಎಸ್.ವೈ.ಗುರುಶಾಂತ್
ಇ.ಕೆ.ಎನ್. ರಾಜನ್

2500 ರೂ.ಗಾಗಿ ರೈತನನ್ನು ಬಂಧಿಸಿದ ರಾಷ್ಟ್ರೀಕೃತ ಬ್ಯಾಂಕ್

ಕೇಂದ್ರದಲ್ಲಿ ಕಾಂಗ್ರೆಸ್ ಸರಕಾರ ಹೋಗಿ ರಾಷ್ಟ್ರೀಯ ರಂಗ ಸರಕಾರ ಬಂದಿರುವ ಹಿನ್ನೆಲೆಯಲ್ಲಿ , ರಾಷ್ಟ್ರವ್ಯಾಪಿಯಾಗಿ, ರೈತರ 10,000 ರೂ ವರೆಗಿನ ಸಾಲ ಮನ್ನಾ, ರಾಷ್ಟ್ರದ ಸಂಪನ್ಮೂಲದ ಅರ್ಧ ಭಾಗ ಗ್ರಾಮೀಣ ಅಭಿವೃದ್ಧಿಗೆ ವೆಚ್ಚ ಮಾಡುವಾಗಲೇ ಭಾರಿ ಪ್ರಚಾರ ನಡೆದಿರುವಾಗಲೇ ರಾಯಚೂರು ಜಿಲ್ಲೆಯ ಕುಷ್ಟಗಿ ನಗರದ ಭರಮಪ್ಪ ಎಂಬ ಬಡರೈತನನ್ನು ಪಡೆದ ಎರಡು ಸಾವಿರದ ಐದು ನೂರು ರೂಪಾಯಿ ವಸೂಲಿಗಾಗಿ ಕೋರ್ಟಿನಿಂದ ಡಿಕ್ರಿಯಾಗಿ, ಅದರ ಜಾರಿಗಾಗಿ ಬಂಧನ ನಡೆಯಿತು.

ಸುದ್ದಿ ತಿಳಿದಾಕ್ಷಣ ಪ್ರಾಂತ ರೈತಸಂಘದ ಕುಷ್ಟಗಿ ಘಟಕ ಭರಮಪ್ಪನು ವಾಸಿಸುವ ಪ್ರದೇಶದಲ್ಲಿರುವ ಪುರುಷ ಮತ್ತು ಮಹಿಳಾ ರೈತರನ್ನು ಸಂಘಟಿಸಿ ಬ್ಯಾಂಕನ್ನು ಘೇರಾಯಿಸತೊಡಗಿದರು. ಮೊದಮೊದಲು ಜರುಗಿದ ಮ್ಯಾನೇಜರ್ ಹೆಚ್ಚೆಚ್ಚು ಜನರು ಸ್ಥಳದಲ್ಲಿ ಸೇರುವಾಗ ಸ್ವತ: ತಾನೇ ಕೋರ್ಟಿಗೆ ಹೋಗಿ ಭರಮಪ್ಪನನ್ನು ಬಿಡಿಸಿಹೊರತಂದ. ಈ ಸುದ್ದಿ ತಾಲೂಕಿನಲ್ಲಿ ಹರಡಿತು . ಹಾಗೆಯೇ ರೈತರಲ್ಲಿ ಚರ್ಚೆ ನಡೆಯಿತು.

ಜುಲೈ 30 ರಂದು ರಾಜ್ಯವ್ಯಾಪಿ ಬ್ಯಾಂಕ್‌ಗಳ ಮುಂದೆ ಧರಣಿ ಮಾಡಿ ಬೇಷರತ್ತಾಗಿ 10,000 ರೂ.ವರೆಗಿನ ರೈತರ ಸಾಲ ಮನ್ನಾ ಮಾಡಲು ಕರೆಕೊಟ್ಟ ಹಿನ್ನೆಲೆಯಲ್ಲಿ ಕುಷ್ಟಗಿ ತಾಲೂಕು ಘಟಕ ಕರಪತ್ರ ಹಾಕಿ ಪ್ರಚಾರ ಮಾಡಿತ್ತು. 30-7-90ರಂದು ಪ್ರಾಂತ ರೈತ-ಸಂಘದ ಮುಂಖಂಡರಿಗೆ ಹೊಸ ಅನುಭವವಾಯಿತು. ಅದೇನೆಂದರೆ . ನೂರಾರು ರೈತರನ್ನು ಬಂಧಿಸಲು ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾದ ನರೇಗಲ್ ಶಾಖೆ ಪ್ರಯತ್ನಿಸುತ್ತಿದೆಯೆಂದು ಧರಣಿಗೆ ಬಂದ ರೈತರಿಂದ ತಿಳಿಯಿತು. ಕೂಡಲೇ ಆ ರೈತರನ್ನು ಭೇಟಿಮಾಡಲು ಪ್ರಾಂತ ರೈತ ಸಂಘದ ರಾಯಚೂರು ಜಿಲ್ಲಾ ಅಧ್ಯಕ್ಷ ಕಾಂ. ಆರ್.ಕೆ. ದೇಸಾಯಿ, ಪ್ರಾಂತ ಕೃಷಿ ಕೂಲಿಗಾರರ ಸಂಘದ ಜಿಲ್ಲಾ ಸಂಚಾಲಕರಾದ ಕಾಂ. ವಿರೂಪಾಕ್ಷಯವರು, ಆ ರೈತರನ್ನು ಸಂಪರ್ಕಿಸಲು ಹಳ್ಳಿಗೆ ಹೋದಾಗ ದೇಶಕ್ಕೆ ರಾಜಕೀಯ ಸ್ವಾತಂತ್ರ್ಯ ಬಂದರೂ ರೈತರನ್ನು ಓಬಿರಾಯನ ಕಾಲದಲ್ಲಿ ನಡೆಯುವ ಪಾಳೆಯಗಾರಿ ಬಡ್ಡಿ ವ್ಯವಹಾರಕ್ಕೆ ಹೇಗೆ ವಸೂಲಿ ಮಾಡಲಾಗುತ್ತದೆಯೋ ಅದೇ ರೀತಿಯಲ್ಲಿ 300 ಜನ ರೈತರು ಬ್ಯಾಂಕಿನ ಸಾಲ ವಸೂಲಿಗೆ ಯಾವುದೇ ಸಮಯದಲ್ಲಿ ಬಂಧನವಾಗುವ ಹೆದರಿಕೆಯ ನೆರಳಲ್ಲಿ ತತ್ತರಿಸುತ್ತಿರುವುದು ಕಂಡು ಬಂದಿತು.

1969-70ರ ಕಾಲ ಘಟ್ಟದಲ್ಲಿ ರೈತರಿಗೆ ಇನ್ನು ಸಾಲ ಪಡೆಯುವ ಅನುಭವವಿರಲಿಲ್ಲ. ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ ನರೇಗಲ್ ಶಾಖೆ ಕುಷ್ಟಗಿ ತಾಲೂಕಿನ 300 ಜನ ರೈತರಿಗೆ ಬಾವಿ ತೋಡಲು ಹಾಗೂ ಪಂಪ್ ಸೆಟ್‌ಗಳನ್ನು ಒದಗಿಸಲು 2500 ರಿಂದ 3500ರೂಗಳವರೆಗೆ ಸಾಲ ನೀಡಿದ ದಾಖಲಾತಿಯನ್ನು ಬಳಸಿ ಈಗ ಅದರ ಬಡ್ಡಿ ಸೇರಿಸಿ 20000 ದಿಂದ 25000ರೂವರೆಗ ಸಾಲ ತೋರಿಸಿ ಕೋರ್ಟಿನಿಂದ ಡಿಕ್ರಿ ಪಡೆದು ಅದರ ಜಾರಿಗಾಗಿ ಬಂಧನ ಮಾಡಲು ಕ್ರಮ ಕೈಗೊಳ್ಳಲಾಗಿದೆ.

ವಸ್ತು ಸ್ಥಿತಿ ಬೇರೆಯೇಯಿದೆ. 69 ರಲ್ಲಿ ಪಂಪ್‌ಸೆಟ್ ಸಾಲ ಪಡೆದ ರೈತರು ಇರುವ ಹಳ್ಳಿಗೆ 1980ರಲ್ಲಿ ವಿದ್ಯುತ್ ಸೌಕರ್ಯವೇ ಇರಲಿಲ್ಲ. ಬಾವಿಗೆ ಸಾಲ ನೀಡಿದಲ್ಲಿ ಬಾವಿಯೇ ಇಲ್ಲ. ಅಂದಿನ ನರೇಗಲ್ ಸೆಂಟ್ರಲ್ ಬ್ಯಾಂಕ್ ಮ್ಯಾನೆಜರ್ ಮತ್ತು ಮಧ್ಯವರ್ತಿಗಳು ಸೇರಿ ರೈತರಿಗೆ ಮೋಸ ಮಾಡಿದ್ದಾರೆ. ಮೊದಲು ಸಾಲ ಮಂಜೂರು ಮಾಡಿಸಲು ಸಹಿ ಪಡೆದಿದ್ದಾರೆ. ಆದರೆ ಹಣ ಎತ್ತಿಹಾಕಿ ರೈತರಿಗೆ ಹಣ ನೀಡಲಿಲ್ಲ. ರೈತರು ತಮ್ಮ ಪಾಡಿಗೆ ತಾವು ಬೇರೆ ವ್ಯವಸ್ಥೆ ಮಾಡಿಕೊಂಡಿರುವಾಗ ಸಾಲವಿಲ್ಲವೆಂದು ದಾಖಲಾತಿ ಪಡೆಲು

ಅರ್ಜಿಹಾಕಿ ಎಂದು ರೈತರನ್ನು ಮೋಸಮಾಡಿ ಸಾಲ ಪಡೆದದ್ದಕ್ಕೆ ಧೃಢೀಕರಣಗೊಳಿಸಿಕೊಂಡರು. ಈಗ ಅದು ಎಂಟು ಹತ್ತು ಪಟ್ಟು ಆಗಿದ್ದು ರೈತರನ್ನು ಬಂಧನ ಮಾಡಿ ಅವರ ಭೂಮಿಯನ್ನು ಮಾರಾಟ ಮಾಡಿ ವಶೀಲಿ ಮಾಡಲು ಪ್ರಯತ್ನಿಸಲಾಗುತ್ತಿದೆಯೆಂದು ತಿಳಿದು ಬಂತು.

ಆ ರೈತರ ಸಭೆಯನ್ನು ನಡೆಸಿ ಒಂದು ಹೋರಾಟ ಸಮಿತಿಯನ್ನು ರಚಿಸಲಾಯಿತು. 6-8 -90ರಂದು ಟ್ರಾಕ್ಟರ್ ಜಾಥಾ ನಡೆಸಿ ನೂರಾರು ರೈತರು ನರೇಗಲ್ ಬ್ಯಾಂಕಿನ

ಮುಂದೆ ಧರಣಿ ನಡೆಸಿದರು. ಈಗಿರುವ ಮ್ಯಾನೇಜರ್ ಅವ್ಯವಹಾರ ನಡೆದದ್ದನ್ನು ಒಪ್ಪಿದರಾದರೂ ಬ್ಯಾಂಕ್ ದಾಖಲಾತಿಗಳಲ್ಲಿ ಸಹಿ ಇರುವುದರಿಂದ ತನಿಖೆ-

ಗಾಗಿ ಸರಕಾರಕ್ಕೆ ಮನವಿ ಮಾಡಲು ತಿಳಿಸಿದರು. ಅಲ್ಲಿಯವರೆಗೆ ರೈತರನ್ನು ಬಂದಿಸುವುದಿಲ್ಲವೆಂದು ತಿಳಿಸಿದರು. ಆದರೆ ಬಂಧನ ಮಾಡುವ ಕಿರುಕುಳವೇನು ತಪ್ಪಿಲ್ಲ. ಈಗಾಗಲೇ ಪ್ರಧಾನ ಮಂತ್ರಿ ಸೇರಿದಂತೆ , ರಾಜ್ಯ ಸರಕಾರ, ಸೆಂಟ್ರಲ್ ಬ್ಯಾಂಕ್ ಚೇರ್‌ಮನ್‌ರಿಗೂ ಮನವಿ ಕಳಿಸಲಾಗಿದೆಯಾದರೂ ಪ್ರಯೋಜನವಾಗಿಲ್ಲ.

1985ರ ನಂತರ ರಾಷ್ಟ್ರವ್ಯಾಪಿ ರೈತ--ಕಾರ್ಮಿಕರ ಪ್ರಜಾಸತ್ತಾತ್ಮಕ ಶಕ್ತಿಗಳ ಹೋರಾಟದ ಪ್ರತಿಫಲವಾಗಿಯೇ ಜನವಿರೋಧಿ ಕಾಂಗ್ರೆಸ್ಸನ್ನು ಸೋಲಿಸಿ ರಾಷ್ಟ್ರೀಯ ರಂಗ ಸರಕಾರವನ್ನು ಅಧಿಕಾರಕ್ಕೆ ತರಲು ಸಾಧ್ಯವಾಯಿತು.

ರಾಷ್ಟ್ರೀಯ ರಂಗ ಸರಕಾರವು ಮೂಲತ: ಬಂಡವಾಳಶಾಹಿ ಭೂಮಾಲಿಕ ಸರಕಾರವಾಗಿದ್ದರೂ ಜನತೆಯ ಚಳುವಳಿಯ ಪರಿಣಾಮವಾಗಿ ಜನರ ಬೇಡಿಕೆಗಳನ್ನು ಈಡೇರಿಸುವ ಆಶಯ ತೋರಿಸುತ್ತಿದೆ. ಅಂತಹ ಹಲವಾರು ಕಾರ್ಯಕ್ರಮದಲ್ಲಿ ಸಾಲಮನ್ನಾ ಒಂದಾಗಿದೆ. ಭೂಮಾಲಿಕ ಶಕ್ತಿಗಳು ಮೇಲುಗೈ ಪಡೆಯಲು ಬಾರಿ ಪ್ರಯತ್ನ ನಡೆಸಿರುವ ಹಿನ್ನಲೆಯಲ್ಲಿ, ರಾಷ್ಟ್ರೀಯ ರಂಗ ಸರಕಾರ ಚುನಾವಣೆ ಆಶ್ವಾಸನೆಗಳು ಜಾರಿಗೆ ಬರಬೇಕಾದಲ್ಲಿ ಹೋರಾಟವು ತೀವ್ರತೆಯನ್ನು ಪಡೆಯಬೇಕಾಗಿದೆ.

ಈ ಹಿನ್ನೆಲೆಯಲ್ಲಿ 14-10-90ರಂದು ಪ್ರಾಂತ ರೈತ ಸಂಘ ರಾಜ್ಯ ಸಮಿತಿಯು ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾದ ರೀಜನಲ್ ಕಛೇರಿ ಬೆಂಗಳೂರಿನಲ್ಲಿದ್ದು ಅವರ ಮುಂದೆ ಬೃಹತ್ ಧರಣಿ ನಡೆಸಲು ತೀರ್ಮಾನಿಸಲಾಗಿದೆ.

ಬಲಾತ್ಕಾರದ ಸಾಲ ವಸೂಲಾತಿಗೆ ಪ್ರತಿಭಟಿಸಲು ಕರೆ.

ಕೆಮ್ರಾಲ್ ಮಧ್ಯಗ್ರಾಮದ ರೈತರ ಸಭೆ 18-990ರಂದು ಕೊರಗ ಶೆಟ್ರ ಅಧ್ಯಕ್ಷತೆಯಲ್ಲಿ ಬ್ಯಾಂಕ್ ಅಧಿಕಾರಿಗಳು 10,000 ರೂ. ವರೆಗಿನ ಸಾಲ ವಸೂಲಾತಿಗೆ ರೈತರಿಗೆ ಹಾಗೂ ಕೃಷಿಕೂಲಿಗಾರರಿಗೆ ಜಪ್ತಿ ನೋಟಿಸ್ ಕಳುಹಿಸಿರುವುದನ್ನು ಪ್ರತಿಭಟಿಸಿದೆ.ಚುನಾವಣೆಯಲ್ಲಿ ಅಶ್ವಾಸನೆ ನೀಡಿದಂತೆ ರಾಜ್ಯ ಹಾಗೂ ಕೇಂದ್ರ ಸರಕಾರಗಳು ಸಾಲವನ್ನು ಮನ್ನಾ ಮಾಡಬೇಕೆಂದು ಅದು ಒತ್ತಾಯಿಸಿದೆ. ಅಕ್ರಮ ಭೂಮಿಯನ್ನು ಸಕ್ರಮಗೊಳಿಸಿ ರೈತರಿಗೆ ಪಟ್ಟಾ ನೀಡಬೇಕೆಂದು ಸರಕಾರವನ್ನು ಒತ್ತಾಯಿಸಬೇಕೆಂದು ತೀರ್ಮಾನಿಸಲಾಯಿತು. ರೈತರ ಮುಂದಿನ ಚಟುವಟಿಕೆ ನಡೆಸಲು 15 ಜನರುಳ್ಳ ಹೊಸ ಸಮಿತಿಯನ್ನು ಆಯ್ಕೆ ಮಾಡಲಾಯಿತು. ಅಧ್ಯಕ್ಷರಾಗಿ , ಶಂಕರ ಶೆಟ್ಟಿ, ಉಪಾಧ್ಯಕ್ಷರಾಗಿ ವೆಂಕಪ್ಪ ಶ್ರೀಯಾನ್, ಕಾರ್ಯದರ್ಶಿಯಾಗಿ ಕೊರಗಶೆಟ್ಟಿ ಮತ್ತು ಬೈಲಗುತ್ತು. ಉಪ-ಕಾರ್ಯದರ್ಶಿಯಾಗಿ ಬಾಬು ದೇವಾಡಿಗ, ಖಜಾಂಚಿಯಾಗಿ ಜಯ ಎಂ. ಶೆಟ್ಟಿಯವರನ್ನು ಆರಿಸಲಾಯಿತು.

ವಿದ್ಯುತ್ ದರ ಏರಿಕೆಗೆ ಖಂಡನೆ


ಎಲ್ಲಾ ವರ್ಗಗಳ ವಿದ್ಯುತ್ ಬಳಕೆ ಮೇಲೆ ಶೇಕಡ 30 ಕ್ಕಿಂತ ಅಧಿಕ ಪ್ರಮಾಣದಲ್ಲಿ ದರ ಏರಿಸಿರುವ ಕಾಂಗ್ರೆಸ್(ಐ) ಸರಕಾರ ಜನವಿರೋಧಿ ನೀತಿಯನ್ನು ಹಿಮ್ಮೆಟ್ಟಿಸಲು ನಗರದ ಕಾರ್ಮಿಕ ವರ್ಗ, ರೈತಾಪಿ ಜನತೆ ಹಾಗೂ ಸಮಸ್ತ ನಾಗರೀಕ ಬಂಧುಗಳು ಉಗ್ರ ಸ್ವರೂಪದ ಚಳುವಳಿಗೆ ಸಿದ್ದರಾಗಬೇಕೆಂದು ಸಿಪಿಐ(ಎಂ) ಬೆಂಗಳೂರು ಜಿಲ್ಲಾ ಸಮಿತಿ ಕರೆ ನೀಡಿದೆ . ಗೃಹ ಬಳಕೆ ವಿದ್ಯುತ್ ಮತ್ತು ಎ.ಇ.ಎಚ್. ದರಗಳನ್ನು ವಿಪರೀತವಾಗಿ ಏರಿಸಲಾಗಿದ್ದು ಹಾಗೂ ಕೈಗಾರಿಕೆ ಬಳಕೆಯ ವಿದ್ಯುತ್ ದರಗಳನ್ನು ಸಹ ಗಣನೀಯವಾಗಿ ಹೆಚ್ಚಿಸಿರುವುದರಿಂದ ಸಣ್ಣ ಹಾಗೂ ಮಧ್ಯಮ ವರ್ಗದ ರೈತರು ಮತ್ತು ಸಣ್ಣಕೈಗಾರಿಕೋದ್ಯಮಿಗಳಿಗೂ ಸಹ ಬಿಸಿ ತಾಗುವುದರಿಂದ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಮತ್ತಷ್ಟು ಬೆಲೆ ಏರಿಕೆಗೆ ಕಾರಣವಾಗಲಿದೆಯೆಂದು ತಿಳಿಸಿದೆ.

ಇದು ನಿಮಗೆ ಗೊತ್ತೇ?

"ಮುವತ್ತು ವರ್ಷಗಳ ಹಿಂದೆ ಝುವ್-ಎನ್‌ಲೈ ನೆಹರೂ ಮಾತುಕತೆಗಳ ಸಂದರ್ಭದಲ್ಲಿ ನೆಹರೂರವರು ಭಾರತ ಚೀನಾ ಗಡಿ ಬಗ್ಗೆ ಆರು ಅಂಶಗಳ ಚೀನೀ ವಿಶ್ಲೇಷಣೆಗೆ ಒಪ್ಪಿದ್ದರು. ಆದರೆ ನಂತರ ಮಾತಿಗೆ ತಪ್ಪಿದರು".

ಹೀಗೆಂದಿರುವವರು ಚೀನಿ ಪರ ಪಕ್ಷಪಾತಿಗಳಲ್ಲ. ಸಿ.ಪಿ.ಐ(ಎಂ) ನವರೂ ಅಲ್ಲ, ಸ್ಟೇಟ್ಸ್‌ಮನ್ ಪತ್ರಿಕೆಯ ಒಬ್ಬ ಅಂಕಣಕಾರ. ಸಪ್ಟೆಂಬರ್ 10, 1990 ರ ಸಂಚಿಕೆಯಲ್ಲಿ "1990ರ ಚೀನಾದ ಬಗ್ಗೆ ನಮಗೆ ಏನೂ ಗೊತ್ತಿಲ್ಲ, ಅಮೆರಿಕನ್ನರು, ಬ್ರಿಟಿಷರು, ಯುರೋಪಿಯನ್ನರು ಅವರ ಬಗ್ಗೆ ಏನು ಬರೆಯುತ್ತಾರೆಯೋ ಅದನ್ನೇ ನಾವು ನಂಬುತ್ತೇವೆ. ನೆಹರೂರವರು ಚೀನಾದ ಬಗ್ಗೆ ಗಂಭೀರ ಕ್ರಾಂತಿಯ ಬಗ್ಗೆ, 1949 ರಲ್ಲಿ ತಪ್ಪು ಮಾಡಿದರು. ಏಕೆಂದರೆ ಅವರಿಗೂ ಚೀನಾದ ಬೈಜಿಂಗ ನ್ನು ವಶಪಡಿಸಿಕೊಂಡ ಕಮ್ಯುನಿಸ್ಟ್ ಮುಖಂಡರ ಬಗ್ಗೆ ತಿಳಿದಿದ್ದದ್ದು ಬಹಳ ಕಡಿಮೆ" ಎಂದಿದ್ದಾರೆ ಈ ಅಂಕಣಕಾರ. ಈಗಿನ ವಿದೇಶಾಂಗ ಮಂತ್ರಿ ಮೂವತ್ತು ವರ್ಷಗಳ ಹಿಂದಿನ ಆ ಕಡತವನ್ನು ನೋಡುವುದು ಒಳ್ಳೆಯದು ಎನ್ನುತ್ತಾರೆ ಅವರು. ಆಗ ಚೀಣೀ ಪ್ರಶ್ನೆಯ ನಿರ್ವಹಣೆಯಲ್ಲಿ ತೊಡಗಿದ್ದ ಪ್ರತಿಯೊಬ್ಬ ಹಿರಿಯ ಅಧಿಕಾರಿಯೂ ನಾವು ಈ ವಿಷಯದಲ್ಲಿ ನಿರ್ಣಾಯಕ ತಪ್ಪುಗಳನ್ನು ಮಾಡಿದ್ದೇವೆ ಎಂದು ಖಾಸಗಿಯಾಗಿ ಒಪ್ಪಿಕೊಳ್ಳುತ್ತಾರೆ, ಆದರೆ ಸಾರ್ವಜನಿಕವಾಗಿ ನಾವೇ ತಪ್ಪುಗಳನ್ನು ಒಪ್ಪಿಕೊಂಡಿಲ್ಲ ಎಂದು ಮುಂದುವರಿದು ಅದೇ ಅಂಕಣಕಾರ ಹೇಳಿದ್ದಾರೆ.

ಮುವತ್ತು ವರ್ಷಗಳ ಹಿಂದೆ ಭಾರತ-ಚೀನಾ ಘರ್ಷಣೆ ಆರಂಭವಾದಾಗ ನಾವು-ನಂತರ ಸಿ.ಪಿ.ಐ(ಎಂ) ಎನಿಸಿಕೊಂಡವರು ಮಾತುಕತೆಗಳ ಮೂಲಕ ಸಮಸ್ಯೆ ಬಗೆ ಹರಿಸಿಕೊಳ್ಳಿ ಎಂದಾಗ ಚೀಣೀ ಏಜೆಂಟರೆಂದು, ದೇಶದ್ರೋಹಿಗಳೆಂದು ಹಣೆ ಪಟ್ಟಿಸಹಿತ್ಯ ಜರೆಯಲಾಯಿತು, ಕಿರುಕುಳ ಕೊಡಲಾಯಿತು. ಆಗ ಸಂಕುಚಿತ ಭಾವೋದ್ವೇಗ ಬಡಿದೆಬ್ಬಿಸಿದ ಕಾಂಗ್ರೆಸ್ಸಿಗರು, ಮತ್ತಿತರ ರಾಜಕಾರಣಿಗಳು, ಪತ್ರಕರ್ತರು ಗಳೇ ಈಗ ಅದೇ ಪ್ರತಿಪಾದನೆಯನ್ನು ಮಾಡುತ್ತಿದ್ದಾರೆ!



ಸೆಪ್ಟೆಂಬರ್ 20 ರಂದು ತಮ್ಮ ಬೇಡಿಕೆಗಳನ್ನು ಒತ್ತಾಯಿಸಿ ಬಳ್ಳಾರಿ ಜಿಲ್ಲೆ ಅರಣ್ಯ ಇಲಾಖೆ ದಿನಗೂಲಿ ಕಾರ್ಮಿಕರು ಯಶಸ್ವೀ ವಿಧಾನ ಸೌಧ ಚಲೋ ನಡೆಸಿದರು

ಸಿಐಟಿಯು ರಾಜ್ಯ ಸಮಿತಿಯ ಕರೆಯ ಮೇರೆಗೆ 23-8-90ರಂದು ಎಂ.ಎಸ್.ಕೆ.-ಮಿಲ್ಸ್ ಕಾರ್ಮಿಕರ ಸಂಘ, ಗೇಟ್ ಮೀಟಿಂಗ್ ಮಾಡಿ ಕೇಂದ್ರ ಸರಕಾರದ ಬೆಲೆಯೇರಿಕೆಯ ನೀತಿಯ ವಿರುದ್ಧ ದಿನಾಚರಣೆ ಮಾಡಲಾಯಿತು.

ಸಭೆಯನ್ನುದ್ದೇಶಿಸಿ ಮಾತನಾಡಿದ ಜಂಟಿ ಕಾರ್ಯದರ್ಶಿ ತಿಮ್ಮಣ್ಣಾ.ಡಿ. ರಾಷ್ಟ್ರೀಯ ರಂಗ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ಮೇಲೆ ದೇಶದ ರೈತರು ಕಾರ್ಮಿಕರು, ಜನಸಾಮಾನ್ಯರು, ದಿನನಿತ್ಯ ಬಳಕೆಯ ವಸ್ತುಗಳ ಬೆಲೆಯೇರಿಕೆಯಿಂದ ತತ್ತರಿಸುತ್ತಿದ್ದಾರೆ. ಕೇಂದ್ರ ಹಾಗೂ ರಾಜ್ಯ ಸರಕಾರಗಳು ದೇಶದ ದುಡಿಯುವ ವರ್ಗದ ಜನ ಸಾಮಾನ್ಯರ ಮೇಲೆ ಬೆಲೆಗಳ ಹೊರೆ ಹಾಕಿದರೆ ಅದರ ವಿರುದ್ಧ ಕಾರ್ಮಿಕರು ಹೋರಾಟ ಮಾಡುತ್ತಾರೆಂದು ಹೇಳಿದರು.

ಸಾಮೂಹಿಕವಾಗಿ ಕಾರ್ಮಿಕ ಸಂಘಟ-

ಉಡುಪಿ

ಇತ್ತೀಚೆಗೆ ಸಿಐಟಿಯು ಕರ್ನಾಟಕ ರಾಜ್ಯ ಮಂಡಳಿ ಸಭೆಯು ಕುಂದಾಪುರದಲ್ಲಿ ಸಭೆ ಸೇರಿ ನೀಡಲಾದ ಕರೆಯಂತೆ ಉಡುಪಿ ತಾಲೂಕು ಸಿಐಟಿಯುವಿಗೆ ಸೇರಿದ ಕಾರ್ಮಿಕ ಸಂಘಗಳು 5 ಕಡೆಗಳಲ್ಲಿ ಕೆ.ಇ.ಬಿ. ಕಛೇರಿಗಳ ಎದುರು ಪ್ರದರ್ಶನ ನಡೆಸಿದರು. ಏರಿಸಿದ ವಿದ್ಯುತ್ ದರವನ್ನು ರದ್ದು ಪಡಿಸುವಂತೆ ಕೋರುವ ಮನವಿಯನ್ನು ಅಧಿಕಾರಿಗಳ ಮುಖಾಂತರ ರಾಜ್ಯ ಸರಕಾರ ಮತ್ತು ಕೆ.ಇ.ಬಿ. ಮಂಡಳಿಯ ಆಡಳಿತ ವರ್ಗಗಳನ್ನು ಒತ್ತಾಯಿಸಿದರು.

ಉಡುಪಿ, ಪಡುಬಿದ್ರಿ, ಮಲ್ಪೆ,ಪುತ್ತೂರು ಅಂಬಾಗಿಲು, ಕಲ್ಯಾಣ ಪುರಗಳಲ್ಲಿ ನೂರಾರು ಕಾರ್ಮಿಕರು ಭಾಗವಹಿಸಿ ವಿದ್ಯುತ್ ದರ ಏರಿಕೆಯನ್ನು ವಿರೋಧಿಸಿದರು.

ನಂತರ ನಡೆದ ಬೃಹತ್ ಮೆರವಣಿಗೆಯು ಕಲ್ಯಾಣಪುರ ಸಂತೆಕಟ್ಟೆ ದಾರಿಯಾಗಿ ಹಾದು ಮೂಡುತೋಣ ಗ್ರಾಮದ ನೇಜಾರು ಎಂಬಲ್ಲಿ ಶ್ರೀ ಪೂಜಾರಿಯವರ ಅಧ್ಯಕ್ಷತೆಯಲ್ಲಿ ಬಹಿರಂಗ ಸಭೆಯನ್ನು ನಡೆಸಲಾಯಿತು. ಸಭೆಯಲ್ಲಿ ಸಿಐಟಿಯು ಮುಖಂಡರಾದ ದೇವಿದ್ ಎ. ಕರ್ಕಡ, ಎಸ್.ಸಾಧು ಅಮೀನರು ಮಾತನಾಡಿದರು. ಪ್ರಾರಂಭದಲ್ಲಿ ಸಂಜೀವ ನಾಯಕ್ ಸ್ವಾಗತಿಸಿ ಕೊನೆಯಲ್ಲಿ ಗೋಪಾಲ ಪೂಜಾರಿ ವಂದಿಸಿದರು.

ಬೆಂಗಳೂರು

ಕೆ.ಆರ್.ಪುರ ಪ್ರದೇಶದಲ್ಲಿರುವ ಕೆ.ಇ.ಬಿ. ಕಛೇರಿಯ ಮುಂದೆ 200 ಜನ ಕಾರ್ಮಿಕರು ಪ್ರತಿಭಟನೆಯನ್ನು ನಡೆಸಿ ಮನವಿಯನ್ನು ಸಲ್ಲಿಸಿದರು. ಇದರ ನಾಯಕತ್ವವನ್ನು ಜಾನ್ ವಿನ್ಸೆಂಟ್, ನಾರಾಯಣ ರಾವ್ ಬಾನು, ಗೋಪಾಲಗೌಡ, ಕುಂಜಪ್ಪನ್ ವಹಿಸಿದ್ದರು.

ಮಾಗಡಿ ರಸ್ತೆಯಲ್ಲಿರುವ ಕೆಇಬಿ ಕಛೇರಿಯ ಮುಂದೆ ಸುಮಾರು 100 ಕಾರ್ಮಿಕರು 1 ಗಂಟೆ ಕಾಲ ಪ್ರದರ್ಶನ ನಡೆಸಿದರು. ಮಿನರ್ವ ಮಿಲ್ಲಿನ ಪದಾಧಿಕಾರಿಗಳು ಮತ್ತು ಉಪಾಧ್ಯಕ್ಷರಾದ ಎಸ್.ಆರ್. ಆರಾಧ್ಯರವರು ಮತ್ತು ವಿ.ಕೋದಂಡರಾಮುರವರು ಈ ಪ್ರದರ್ಶನದ ನೇತೃತ್ವ ವಹಿಸಿದ್ದರು.

ಸುಮಾರು 100 ಜನ ಕಾರ್ಮಿಕರು ಕಾಂ. ಪಿ.ಕೆ.ಸುಬ್ರಮಣಿ ರವರ ನಾಯಕತ್ವದಲ್ಲಿ ಪ್ರತಿಭಟನೆ ನಡೆಸಿ ಕಾಕ್ಸ್‌ಟೌನ್ ಕೆಇಬಿ ಕಛೇರಿಯಲ್ಲಿ ಮನವಿ ಪತ್ರವನ್ನು ಸಲ್ಲಿಸಿದರು.

ಯಶವಂತಪುರ ಪ್ರದೇಶದಲ್ಲಿರುವ ಕೆಇಬಿ ಕಛೇರಿಯ ಮುಂದೆ 100 ಜನ ಕಾರ್ಮಿಕರನ್ನೊಳಗೊಂಡ ತಂಡವು ಪ್ರತಿಭಟನಾ ಪ್ರದರ್ಶನ ನಡೆಸಿ ಮನವಿ ಪತ್ರವನ್ನು ,ಸಲ್ಲಿಸಿದರು. ಕಾಂ. ಮಾರುತಿದಾಸ್, ಕಾಂ. ಸುಬ್ಬಯ್ಯ ರವರು ಈ ಪ್ರದರ್ಶನಕ್ಕೆ ನೇತೃತ್ವ ಕೊಟ್ಟಿದ್ದರು.

ಮಂಗಳೂರು

ಕರ್ನಾಟಕ ಸರಕಾರ ಏರಿಸಿರುವ ವಿದ್ಯುಚ್ಛಕ್ತಿ ದರವನ್ನು ಇಳಿಸಲು ಒತ್ತಾಯಿಸಿ ಸೆ.2 4 ರಂದು ಸಿಐಟಿಯು ನೇತೃತ್ವದ ಕಾರ್ಮಿಕರು ಮೆರವಣಿಗೆ ನಡೆಸಿ, ಅತ್ತಾವರದಲ್ಲಿರುವ ಕೆಇಬಿ ಎಕ್ಸಿಕ್ಯುಟಿವ್ ಇಂಜಿನೀಯರ್‌ರ ಕಛೇರಿಯ ಮುಂದೆ ಬೃಹತ್ ಪ್ರತಿಭಟನಾ ಪ್ರದರ್ಶನವನ್ನು ನಡೆಸಿದರು. ಪ್ರದರ್ಶನಕಾರರ ಪರವಾಗಿ ಸಿಐಟಿಯು ಜಿಲ್ಲಾ ಸಮಿತಿ ಅಧ್ಯಕ್ಷ ಕೆ.ಮುಣಪ್ಪ, ಉಪಾಧ್ಯಕ್ಷ ಕೆ.ಶಂಕರ್, ಪ್ರಧಾನ ಕಾರ್ಯದರ್ಶಿ ಬಿ.ಮಾಧವ, ಕಾರ್ಯದರ್ಶಿ ಪಿ.[illegible] ಭಂಡಾರಿ ಮತ್ತು , ಸಮಿತಿಯ ಸದಸ್ಯರಾದ ಜೆ.ಬಾಲಕೃಷ್ಣ ಶೆಟ್ಟಿ ಮತ್ತು ಕೆ.ಬಾಬು [illegible] ನಿಯೋಗದಲ್ಲಿ [illegible] ಎಕ್ಸಿಕ್ಯುಟಿವ್ ಇಂಜಿನಿಯರನ್ನು [illegible] ಮನವಿ [illegible].

ಗುಲ್ಬರ್ಗಾ, ಬೀದರ್

ಅತಿವೃಷ್ಟಿಯ ಅನ



ಅತಿವೃಷ್ಟಿಯಿಂದ ಬಂತ ನೆರೆ— ಹಾಳಾದ ಬೆಳೆ

ಗುಲ್ಬರ್ಗಾ ಜಿಲ್ಲೆಯ ಹತ್ತರಲ್ಲಿ ಆರು ತಾಲೂಕುಗಳನ್ನು ತಟ್ಟಿರುವ ಗುಲ್ಬರ್ಗಾ ಜಿಲ್ಲೆಗಳಲ್ಲಿ ಒಟ್ಟು 20 ಸಾವಿರಕ್ಕೂ ಹೆಚ್ಚು ಮನೆಗಳು ಬಿದ್ದಿ ಪ್ರಕಾರವೇ ಎರಡು ಲಕ್ಷ ಎಕರೆಯಲ್ಲಿ ನಿಂತಿದ್ದ 16 ಕೋಟಿ ರೂ. ಗಳಷ್ಟು ಪ್ರಕಾರ ಎರಡು ಜಿಲ್ಲೆಗಳಲ್ಲಿ ಸೇರಿ 100 ಕೋಟಿ ರೂ.ಗಳಷ್ಟು ಬೆಳೆ ನಷ್ಟ

ಆರು ದಿನಗಳ ಕಾಲ ಸತತವಾಗಿ ಹಕ್ಕಿಗಳಂತೆ ಬದುಕಿದರು ಅವರು. ಮನೆ ಬಿಟ್ಟು ಹೊರಹೋಗುವಂತಿಲ್ಲ. ಮನೆಯೊಳಗೂ ನೀರು. ಎಲ್ಲೆಡೆಯೂ ಸೋರುವ ಮನೆಗಳು(ಕೆಲವೆಡೆ ಛಾವಣಿಯವರೆಗೂ ನೀರು). ಹೊರಗಡೆ ಕೆಲಸವಿಲ್ಲ. ಆದ್ದರಿಂದ ಮನೆಯೊಳಗೆ ಉಣ್ಣಲೂ ಏನಿಲ್ಲ. ಇದ್ದ ಅಲ್ಪಸ್ವಲ್ಪವನ್ನ ಕಾಯಿಸಿಕೊಳ್ಳಲು ಒಣ ಸೌದೆಯಿಲ್ಲ.

ಆಗಸ್ಟ್ ತಿಂಗಳಲ್ಲಿ ಅತಿವೃಷ್ಟಿ ಕಂಡ ಕಲ್ಬುರ್ಗಿ, ಬೀದರ್ ಜಿಲ್ಲೆಗಳ ಕೃಷಿ ಕಾರ್ಮಿಕರ, ರೈತರ ಪರಿಸ್ಥಿತಿಯಿದು. ಶ್ರೀಮಂತ ರೈತರನ್ನು ಇದು ತಟ್ಟಲಿಲ್ಲ.

ಜೂನ್ ಸಾಮಾನ್ಯವಾಗಿ ಮಳೆಬಾರದ ಸಮಯ ಈ ಜಿಲ್ಲೆಗಳಿಗೆ. ಸಾಮಾನ್ಯ ಮಳೆ 10 6 ಸೆಂ.ಮಿ. ಆದರೆ ಈ ಬಾರಿ 315.6 ಸೆಂ.ಮಿ. ಮಳೆ ಹೊಡೆಯಿತು. ರಸ್ತೆ, ಸೇತುವೆ ಒಡೆದು ಅಲ್ಲಲ್ಲಿ ಮನೆಗಳೂ ಬಿದ್ದವು. ಮುಂಗಾರಿಗೆ ಸಿದ್ಧವಾಗಬೇಕಿದ್ದ ರೈತರು ಈ ಅನಿರೀಕ್ಷಿತ ಮಳೆಯ ಹಾವಳಿ ಎದುರಿಸಲು ಸಿದ್ಧರಾಗಿರಲಿಲ್ಲ. ಆದರೆ ಅತಿವೃಷ್ಟಿ ಇಷ್ಟಕ್ಕೆ ನಿಲ್ಲಲಿಲ್ಲ. ಆಗಸ್ಟ್ ತಿಂಗಳಲ್ಲಿ ಇಲ್ಲಿ ಸಾಮಾನ್ಯ ಮಳೆ 157 ಸೆಂ.ಮಿ. ಆದರೆ ಈಬಾರಿ ಈ ಅದೇ ತಿಂಗಳಲ್ಲಿ 336 ಸೆಂ.ಮಿ. ಮಳೆ ಸುರಿಯಿತು

ಗುಲ್ಬರ್ಗಾ ಜಿಲ್ಲೆಯ 10 ರಲ್ಲಿ 6 ತಾಲೂಕುಗಳನ್ನು ಇದು ತಟ್ಟಿದೆ- ಆಳಂದ, ಅಫಜಲಪುರ, ಕಲ್ಬುರ್ಗಿ, ಜೇವರ್ಗಿ, ಚಿತಾಪುರ ಮತ್ತು ಚಿಂಚೋಳಿ. ಅದರಲ್ಲೂ ಆಳಂದ ಹಾಗೂ ಅಫಜಲಪುರ ತಾಲೂಕುಗಳಲ್ಲಿ ಆದ ನಷ್ಟ ಅಪಾರ.

ಗಂಡಹೋರಿ ನಾಲಾದ ನೀರು ದಮ್ಮೂರು ಹರಿಜನ ಬಸ್ತಿಯನ್ನು ಮುಳುಗಿಸಿತು. ಅಫಜಲಪುರದ ಒಂದು ಸಾವಿರ ಜನಸಂಖ್ಯೆಯ ಒಂದು ಹಳ್ಳಿಯಲ್ಲಿ 52 ಮನೆಗಳು ಬಿದ್ದವು. ಇನ್ನೊಂದು ಹಳ್ಳಿಯಲ್ಲಿ 75 ಮನೆಗಳು ಬಿದ್ದವು. ಹಳ್ಳಿಗಳು9ಂಸೋರುತ್ತಿದ್ದವು.

ಕಲ್ಬುರ್ಗಿ ಜಿಲ್ಲೆಯಲ್ಲಿ ಒಟ್ಟು 15 ಸಾವಿರ ಮನೆಗಳು, ಬೀದರ್‌ನಲ್ಲಿ ಐದು ಸಾವಿರ ಮನೆಗಳುಎಂದು ಅಂದಾಜು ಮಾಡಲಾಗಿದೆ. ಆರ್.ಸಿ.ಸಿ. ಮನೆಗಳಿಗೆ ತೊಂದರೆಯಾಗಿಲ್ಲ. ಸ್ವಲ್ಪ ಎತ್ತರದ ಅಡಿಪಾಯದ ಮನೆಗಳಿಗೆ ನಷ್ಟ ಸ್ವಲ್ಪ ಕಡಿಮೆ. ಆದರೆ ಬಡ ರೈತರ, ಕೃಷಿಕೂಲಿಗಾರರ ಮನೆಗಳಿಂದ 19 ಜನರು ಸತ್ತಿದ್ದಾರೆ. ಸರಕಾರದ ಪ್ರಕಾರವೇ ಎರಡು ಲಕ್ಷ ಎಕರೆಯಲ್ಲಿ ನಿಂತಿದ್ದ ಹದಿನಾರು ಕೋಟಿ ರೂ.ನಷ್ಟು ಬೆಳೆ ನಷ್ಟವಾಗಿದೆ. ಆಳಂದ ತಾಲೂಕೊಂದರಲ್ಲೆ 3. 9 ಕೋಟಿ ರೂ. ವಾಸ್ತವವಾಗಿ ಒಟ್ಟು ನಷ್ಟ 66 ಕೋಟಿ ರೂ.ನಷ್ಟು.ಸಣ್ಣ ನೀರಾವರಿಗಳು, ಒಡ್ಡುಗಳು, ಗಲಿಪ್ಲಗ್‌ಗಳು ದೊಡ್ಡ ಪ್ರಮಾಣದಲ್ಲಿ ಹಾಳಾಗಿವೆ. ಸರಕಾರಿಅಂದಾಜಿನ ಪ್ರಕಾರ ಈ ಸಾರ್ವಜನಿಕ ಕಾಮಗಾರಿಗಳ ನಷ್ಟ ಇಪ್ಪತ್ತು ಕೋಟಿ ರೂ. ಹೆಸರು, ಎಳ್ಳು, ಬೆಳೆಗೆ ವಿಪರೀತ ಹಾನಿಯಾಗಿದೆ. ಹಿಪ್ಪನೇರಳೆ ಬೆಳೆ ಹಾಳಾಗಿ ರೇಶ್ಮೆ ಹುಳುಗಳು ಸತ್ತು 33 ಲಕ್ಷ ರೂ. ನಷ್ಟವಾಗಿದೆ ಎಂದು ಇನ್ನೊಂದು ಅಂದಾಜು.

ಮಂತ್ರಿಗಳು ಬಂದರು ಹೋದರು

ಆ ಎರಡು ಜಿಲ್ಲೆಗಳ ಬಡರೈತರು, ಕೃಷಿ ಕೂಲಿಗಾರರು ಅತಿವೃಷ್ಟಿಯಿಂದ ನರಳುತ್ತಿದ್ದಾಗ ಜಿಲ್ಲಾ ಆಡಳಿತದ ಮತ್ತು ರಾಜ್ಯ ಸರಕಾರದ ಪ್ರತಿಕ್ರಿಯೆ - ಜನಪರ ನಿಲುವನ್ನಂತೂ ತೋರಲೇ ಇಲ್ಲ. ನಿರ್ಲಕ್ಷತನ ಎದ್ದು ಕಾಣುತ್ತಿತ್ತು. ಜಿಲ್ಲಾ ಪರಿಷತ್ತಿನ ಅಧ್ಯಕ್ಷರು, ಉಪಾಧ್ಯಕ್ಷ ಏನೇನೂ ಮುತುವರ್ಜಿ ವಹಿಸಲಿಲ್ಲ. ಜಿಲ್ಲಾಧಿಕಾರಿಗಳಂತೂ ಜನರು ಬವಣೆ ಪಡುತ್ತಿಲ್ಲ, ಎಲ್ಲಾ ಪತ್ರಿಕೆಗಳದ್ದೇ ಅತಿಶಯೋಕ್ತಿ ಎಂಬ ಬೇಜವಾಬ್ದಾರಿ ನಿಲುವು ತೋರ್ಪಡಿಸಿದರು. ರಾಜ್ಯದ ಕಾಮಗಾರಿ ಮಂತ್ರಿಗಳು ಎರಡು ಸಾರಿ ಭೇಟಿ ನೀಡಿ ಹೋದರು. ಕೃಷಿ ಮಂತ್ರಿ ಬಂಗಾರಪ್ಪನವರೂ ಹೆಲಿಕಾಪ್ಟರ್ ಸರ್ವೆ ನಡೆಸಿದರು. ನಂತರ ಪತ್ರಿಕಾಗೋಷ್ಠಿ ನಡೆಸಿ ಪರಿಹಾರಕ್ಕೆ ಹಣದ ತೊಂದರೆಯೇನೂ ಇಲ್ಲ ಎಂದು ಘೋಷಿಸಿದರು.ಆದರೆ ಸರಕಾರಿ ಅಧಿಕಾರಿಗಳು ವ್ಯಕ್ತಪಡಿಸಿದ ತೊಂದರೆ ಇದೇ ಪತ್ರಿಕಾ ಸಮ್ಮೇಳನದ ಮೊದಲು ನಡೆದ ಅಧಿಕಾರಿಗಳ ಸಭೆಯಲ್ಲಿ ಈ ಪ್ರಶ್ನೆ ಬಂದಾಗ ಹೊರಗಡೆಯೇನಾದರೂ ಈ ಪ್ರಶ್ನೆ ಎತ್ತಿದರೆ ಅಂತಹ ಅಧಿಕಾರಿಯನ್ನು ಸಸ್ಪೆಂಡ್ ಮಾಡುವುದಾಗಿ ಮಾನ್ಯ ಕೃಷಿ ಮಂತ್ರಿಗಳು ಗುಡುಗಿದರಂತೆ.

ಮನೆ ಬಿದ್ದವರಿಗೆ ಪರಿಹಾರ ಕನಿಷ್ಠ ಒಂದು ಮನೆಗೆ ಸರಕಾರವೇ ಹೇಳಿದ 300 ರೂ. ನೀಡಿದರೂ 75 ಲಕ್ಷ ರೂ.ಬೇಕು. ಆದರೆ ಸರಕಾರ ಇದುವರೆಗೆ ಬಿಡುಗಡೆ ಮಾಡಿದ ಹಣ ಕೇವಲ 15 ಲಕ್ಷ ರೂ. ಅದರಲ್ಲೂ ಮನೆ ಕಳಕೊಂಡವರಿಗೆ ಸಿಕ್ಕಿರುವುದು 100 -150 ರೂ. ಅಷ್ಟೆ. ಹಿಂದಿನ ಸರಕಾರ ಇಂತಹ ಪರಿಸ್ಥಿತಿಯಲ್ಲಿ ಮಿನಿ ಕಿಟ್ಸ್(ಬೇಸಾಯದ ಕನಿಷ್ಠ ಅಗತ್ಯಗಳನ್ನೊಳಗೊಂಡ ಪೊಟ್ಟಣಗಳು) ಕೊಟ್ಟಿತ್ತು. ಈಗಿನ ಸರಕಾರ ಅದನ್ನೂ ಮಾಡಿಲ್ಲ.

ಮಂತ್ರಿಗಳೇನೋ ಬಂದು ಹೋದರು. ಆದರೆ ಅತಿವೃಷ್ಟಿಯಿಂದ ಕಂಗಾಲಾದ ಜನರ ಬವಣೆ ಇನ್ನೂ ಕಡಿಮೆಯಾಗಿಲ್ಲ.



ಆಳಂದ ತಾಲೂಕಿನಲ್ಲೊಂದು ಬಹಿರಂಗ ಸಭೆ. ಕಾಂ. ಚಂದ್ರಶೇಖರ ಬಾಳೆ ಮಾತನಾ

ಕಂಗಾಲಾದ ಜನರ ನೆರವಿಗೆ ರೈತ ಸಂಘ

ಅತಿವೃಷ್ಟಿಯಿಂದ ರೈತರಿಗಾಗಿರುವ ಅಪಾರ ಹಾನಿಯತ್ತ ರಾಜ್ಯ, ಕೇಂದ್ರ ಸರಕಾರಗಳ, ಜಿಲ್ಲಾ ಆಡಳಿತಗಳ ಗಮನ ಸೆಳೆಯಲು ಕರ್ನಾಟಕ ಪ್ರಾಂತ ರೈತ ಸಂಘದ ಗುಲ್ಬರ್ಗಾ ಮತ್ತು ಬೀದರ್ ಜಿಲ್ಲಾ ಸಮಿತಿಗಳು ಜೂನ್ ತಿಂಗಳಿಂದಲೇ ಪ್ರಯತ್ನ ಆರಂಭಿಸಿದ್ದವು. ಗುಲ್ಬರ್ಗಾ ಜಿಲ್ಲಾ ಸಮಿತಿ ಸದಸ್ಯ ಹಾಗೂ ಪ್ರಾಂತ ರೈತ ಸಂಘದ ಮುಖಂಡರಾದ ಮಾರುತಿ ಮಾನಪಡೆಯವರು ಜೂನ್ ತಿಂಗಳಲ್ಲೇ ಒಂದು ಪತ್ರಿಕಾ ಹೇಳಿಕೆ ನೀಡಿ ರಾಜ್ಯದ ನಾಗರೀಕರ ಮತ್ತು ಸರಕಾರದ ಗಮನವನ್ನು ಜಿಲ್ಲೆಯ ಬಡರೈತರ, ಕೃಷಿ ಕಾರ್ಮಿಕರ ಪರಿಸ್ಥಿತಿಯತ್ತ ಸೆಳೆಯಲು ಪ್ರಯತ್ನಿಸಿದರು. ಆಗಸ್ಟ್‌ನಲ್ಲಿ ಮತ್ತೆ ಅತಿವೃಷ್ಟಿಯ ಪ್ರಕೋಪದ ನಂತರ ಅಂಬರಲಗಾದಲ್ಲಿ 500 ಸಹಿ ಸಂಗ್ರಹಿಸಿ ಮನವಿ ಪತ್ರ ಸಲ್ಲಿಸಲಾಯಿತು. ಜಿಲ್ಲಾ ಪರಿಷತ್ ಸದಸ್ಯರ ನಿಯೋಗವೊಂದು ಸರಕಾರವನ್ನು ಭೇಟಿ ಮಾಡಿತು. ಪತ್ರಕರ್ತರನ್ನು ಕರೆಸಿ ಅವರಿಗೆ ನಿಜ ಸ್ಥಿತಿಯ ಪರಿಚಯ ದೊರೆಯುವಂತೆ ಮಾಡಲಾಯಿತು. ಟೈಂಸ್ ಆಫ್ ಇಂಡಿಯಾ , ಪ್ರಜಾವಾಣಿ ಹಾಗೂ ಯು.ಎನ್.ಐ. ವಾರ್ತಾ ಸಂಸ್ಥೆಯ ಪತ್ರಕರ್ತರು ಸುಮಾರು 50 ಹಳ್ಳಿಗಳ ಪ್ರವಾಸ ಮಾಡಿದರು. ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು.

ಆಗಸ್ಟ್ 31 ರಂದು ಪ್ರಾಂತ ರೈತ ಸಂಘದ ಗುಲ್ಬರ್ಗಾ ಜಿಲ್ಲಾ ಸಮಿತಿ ರಾಜ್ಯ ಸರಕಾರದ, ಜಿಲ್ಲಾ ಆಡಳಿತದ ನಿಧಾನ ಪ್ರತಿಕ್ರಿಯೆ ಬಗ್ಗೆ ಮತ್ತೊಂದು ಹೇಳಿಕೆ ನೀಡಿತು. ಈ ನಡುವೆ ಪ್ರಾಂತ ರೈತ ಸಂಘದ ನಿಯೋಗವೊಂದು ತೊಂದರೆಗೀಡಾದ ಪ್ರದೇಶಗಳಿಗೆ ಭೇಟಿನೀಡಿ ನಿಜಸಂಗತಿ ತಿಳಿಯಲು ಪ್ರಯತ್ನಿಸಲಾಯಿತು. ಸಂಘದ ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ ಬಾಳೆ ಯವರ ನೇತೃತ್ವದ ಈ ತಂಡ ಎರಡು ಜಿಲ್ಲೆಗಳಲ್ಲೂ ಸಂಚರಿಸಿತು. ಎರಡೂ ಜಿಲ್ಲೆಗಳಲ್ಲಿ ಬೆಳೆಗಾಗಿರುವ ನಷ್ಟವೇ 100 ಕೋಟಿ ರೂ.ಗಳಷ್ಟು ಎಂದು ಅಂದಾಜು ಮಾಡಿದೆ. ರೈತ ಸಂಘದ ಗುಲ್ಬರ್ಗಾ ಜಿಲ್ಲಾ ಸಮಿತಿ ಮುಖ್ಯ ಮಂತ್ರಿಗಳಿಗೂ ಒಂದು ಮನವಿ ಪತ್ರ ಸಲ್ಲಿಸಿ ಶೀಘ್ರ ಹಾಗೂ ಪರಿಣಾಮಕಾರಿ ಪರಿಹಾರ ಕ್ರಮಗಳನ್ನು ಕೈಗೊಳ್ಳುವಂತೆ ಒತ್ತಾಯಿಸಿತು.

ಈ ದಿಕ್ಕಿನಲ್ಲಿ ಜನರನ್ನು ಅಣಿನೆರೆಸುವ ಕೆಲಸವನ್ನು ರೈತ ಸಂಘ ಆರಂಭಿಸಿದೆ. ಸೆಪ್ಟೆಂಬರ್ 14 ರಂದು ಎರಡು ಜಿಲ್ಲೆಗಳಲ್ಲಿ ಹಲವೆಡೆ ಧರಣೆಗಳು , ಮತ ಪ್ರದರ್ಶನ ನಡೆದವು. ಆಳಂದದಲ್ಲಿ 600,



ಅತಿವೃಷ್ಟಿಯಿಂದ

ನಷ್ಟಗೊಂಡ ಬೆಳೆ



ಅತಿವೃಷ್ಟಿ ಹಾಳುಗೆಡವಿದ

ಬೆಳೆಯ ಮಧ್ಯೆ

ರೈತ ಸಂಘದ ಮುಖಂಡರು

ಲ್ಲೆಗಳಲ್ಲಿ

ಪಿತ

ಲೆಯಿದು. ಬೀದರ್ ಮತ್ತು
ಸತ್ತಿದ್ದಾರೆ. ಸರಕಾರದ ಅಂದಾಜಿನ
ಶವಾಗಿದೆ. ರೈತ ಸಂಘದ ಅಂದಾಜಿನ

ಗುಲ್ಬರ್ಗಾದಲ್ಲಿ 100, ಶಹಪುರದಲ್ಲಿ 100 , ಕಮಲಾಪುರದಲ್ಲಿ 60, ಶಹಾಬಾದಿನಲ್ಲಿ 150 ಮಂದಿ ಧರಣಿಯಲ್ಲಿ ಭಾಗವಹಿಸಿದರು. ಜೇವರ್ಗಿಯಲ್ಲಿ ಜನತಾದಳದ ಮುಖಂಡರಾದ ಕೇದಾರಲಿಂಗಯ್ಯ ಹಾಗೂ ಸಿಪಿಐ(ಎಂ) ಸ್ಥಳೀಯ ಕಾರ್ಯದರ್ಶಿ ನಿಂಗಣ್ಣ ಮಂದರಗಿ ಕಂಗಾಲಾದ ಜನಕ್ಕೆ ಶೀಘ್ರ ಪರಿಹಾರ ನೀಡಬೇಕೆಂದು ಒತ್ತಾಯಿಸಿ ಅಮರಣ ಉಪವಾಸ ನಡೆಸುತ್ತಿದ್ದಾರೆ.

ರೈತ ಸಂಘಟನೆ ಇರುವ ಹಳ್ಳಿಗಳಲ್ಲಿ ಬಹಿರಂಗ ಸಭೆಗಳು ನಡೆದವು.

ಸೆಪ್ಟೆಂಬರ್‌ನಲ್ಲಿ ನಡೆದ ಗುಲ್ಬರ್ಗಾ ಜಿಲ್ಲಾ ಪರಿಷತ್ ಸಭೆಯಲ್ಲಿ ಸಿಪಿಐ(ಎಂ) ಸದಸ್ಯ ಮಾರುತಿ ಮಾನಪಡೆಯವರು ಅತಿವೃಷ್ಟಿಯಿಂದ ಆದ ನಷ್ಟದ ವ್ಯಕ್ತಿವಾರು ಅಂದಾಜು ಮಾಡಲೇಬೇಕೆಂದು, ಶೀಘ್ರ ಪರಿಹಾರ ನೀಡಲೇಬೇಕೆಂದು ಮುಖ್ಯ ಮಂತ್ರಿಗಳನ್ನು ಮನವಿ ಮಾಡಿಕೊಳ್ಳುವ ನಿರ್ಣಯ ಮಂಡಿಸಿದರು. ಜಿಲ್ಲಾ ಪರಿಷತ್ತು ಅದನ್ನು ಅಂಗೀಕರಿಸಿತು. ಪರಿಹಾರ ಹಣವನ್ನು ಜಿಲ್ಲಾ ಪರಿಷತ್‌ಗಳ ಮೂಲಕ ಕೊಡಬಾರದೆಂಬ ಕಾಂಗ್ರೆ ಮಂತ್ರಿಗಳ ಹೇಳಿಕೆಗಳನ್ನು ಖಂಡಿಸುವ ನಿರ್ಣಯವನ್ನು ಮಾನಪಡೆಯವರು ಮಂಡಿಸಿದರೂ ಅದು ಅಂಗೀಕೃತಗೊಳ್ಳಲಿಲ್ಲ.

ಕರ್ನಾಟಕ ಪ್ರಾಂತ ರೈತ ಸಂಘ ಈ ದಿಸೆಯಲ್ಲಿ ತನ್ನ ಹೋರಾಟದ ಮುಂದಿನ ಹಂತವಾದ ಅಕ್ಟೋಬರ್ 1 ರಂದು 'ವಿಧಾನ ಸೌಧ ಚಲೋ' ಸಂಘಟಿಸುತ್ತಿದೆ. ಎರಡೂ ಜಿಲ್ಲೆಗಳ ಸುಮಾರು ಹತ್ತು ಸಾವಿರ ರೈತರು ಅಂದು ಬೆಂಗಳೂರಿಗೆ ಬಂದು ರೈತರ ನಾಶವಾದ ಬೆಳೆಗೆ, ಭೂಮಿ ಒಡ್ಡು ನಾಶಕ್ಕೆ, ಬಿದ್ದ ಮನೆಗಳಿಗೆ ಪರಿಹಾರ ಒದಗಿಸಲು ಕಾಂಗ್ರೆ ಸರಕಾರವನ್ನು ಹಾಗೂ ರಾಷ್ಟ್ರೀಯ ರಂಗ ಕೇಂದ್ರ ಸರಕಾರವನ್ನು ಒತ್ತಾಯಿಸಿ ವಿಧಾನ ಸೌಧದ ಮುಂದೆ ಮತ ಪ್ರದರ್ಶನ ನಡೆಸಲಿದ್ದಾರೆ.



ಪಂಜಾಬಿನಲ್ಲಿ ಚುನಾವಣೆಗೆ ಸನ್ನಿವೇಶ ಅನುಕೂಲವಾಗಿಲ್ಲ

ಆದರೆ ಸೂಕ್ತ ವಾತಾವರಣದ ನಿರ್ಮಾಣ ಸಾಧ್ಯ

ಪಂಜಾಬಿನಲ್ಲಿ ನವಂಬರ್ 11ರ ಮೊದಲೇ ಚುನಾವಣೆ ನಡೆಸುವುದಕ್ಕೆ ಸಿ.ಪಿ.ಐ. (ಎಂ) ಸಮ್ಮತಿಯಿಲ್ಲ ಏಕೆ. ಆದರೂ ಬೇಗನೇ ಚುನಾವಣೆ ನಡೆಸಲು ಏನುಮಾಡಬೇಕು?-ಸಿ.ಪಿ.ಐ. (ಎಂ)ಪೊಲಿಟ್‌ಬ್ಯೂರೋ ಸದಸ್ಯ ಕಾಂ.ಸುರ್ಜಿತ್‌ವಿವರಿಸುತ್ತಾರೆ.

-ಹರ್ಕಿಶನ್ ಸಿಂಗ್ ಸುರ್ಜಿತ್

ಪಂಜಾಬಿನಲ್ಲಿ ರಾಷ್ಟ್ರಪತಿ ಆಳ್ವಿಕೆ ನವಂಬರ್11 ರಂದು ಮುಗಿಯಲಿದೆ. ಆದ್ದರಿಂದ ಅಲ್ಲಿ ಚುನಾವಣೆ ನಡೆಸುವ ಬಗ್ಗೆ ತೀವ್ರ ಚರ್ಚೆ ನಡೆಯುತ್ತಿದೆ. ಒಂದೋ ಆ ದಿನದ ಮೊದಲು ಚುನಾವಣೆ ನಡೆಯಬೇಕು. ಅದಕ್ಕೆ 35 ದಿನಗಳ ಮೊದಲು ಸಿದ್ಧತೆ ನಡೆಯಬೇಕು. ಇಲ್ಲವೇ ರಾಷ್ಟ್ರಪತಿ ಆಳ್ವಿಕೆಯನ್ನು ಇನ್ನೂ ಸ್ವಲ್ಪ ಸಮಯ ವಿಸ್ತರಿಸಲು ಸಂವಿಧಾನ ತಿದ್ದುಪಡಿಯನ್ನು ಸಂಸತ್ತು ಅಂಗೀಕರಿಸಬೇಕು.

ಪ್ರಧಾನಮಂತ್ರಿಗಳು ವಿವಿಧ ರಾಜಕೀಯ ಪಕ್ಷಗಳೊಂದಿಗೆ ಈ ಬಗ್ಗೆ ಸಮಾಲೋಚನೆ ನಡೆಸುತ್ತಿದ್ದಾರೆ. ಅಭಿಪ್ರಾಯ ಭೇದಗಳು ಕಂಡು ಬಂದಿವೆ. ಆದರೆ ಸರಕಾರ ಚುನಾವಣೆ ನಡೆಸುವತ್ತ ಒಲವು ತೋರಿದಂತಿದೆ.

ಭಯೋತ್ಪಾದಕ ಚಟುವಟಿಕೆಗಳು ತೀವ್ರಗೊಂಡಿರುವುದರಿಂದ ಜನ ತಮ್ಮ ಮತದಾನದ ಹಕ್ಕನ್ನು ಮುಕ್ತವಾಗಿ ಪ್ರಯೋಗಿಸಲು ಸಾಧ್ಯವಿಲ್ಲ ಎಂದು ಎಡ ಪಕ್ಷಗಳು ಮತ್ತು ಬಿ.ಜೆ.ಪಿ. ಅಭಿಪ್ರಾಯ ಪಟ್ಟರೆ, ರಾಜೀವಗಾಂಧಿ ಒಂದು ಸ್ಪಷ್ಟ ನಿಲುವೇ ತಳೆಯುತ್ತಿಲ್ಲ. ಬದಲಿಗೆ ಕಳೆದ ಆರು ತಿಂಗಳಲ್ಲಿ ರಾಷ್ಟ್ರೀಯ ರಂಗ ಸರ್ಕಾರ ಏನು ಮಾಡಿತು-ಮಾಡಿಲ್ಲ ಎಂಬುದರ ಲಾಭ ಪಡೆಯುವಲ್ಲಿ ಮಗ್ನರಾಗಿದ್ದಾರೆ. ಜನತಾದಳಕ್ಕೆ ಪಂಜಾಬಿನಲ್ಲಿ ಸಾಕಷ್ಟು ನೆಲೆಯಿಲ್ಲ, ಆದ್ದರಿಂದ ಕಳೆಕೊಳ್ಳುವಂತದ್ದೂ ಏನಿಲ್ಲ. ಆದರಿಂದ ರಾಜ್ಯದ ಪರಿಸ್ಥಿತಿ ಏನು ಎಂಬುದರ ಸರಿಯಾದ ಚಿತ್ರಣ ಸರ್ಕಾರಕ್ಕೆ ತನ್ನ ಮುಖ್ಯ ಅಂಗ ಪಕ್ಷದಿಂದ ದೊರೆತಿಲ್ಲ.

ಅಕಾಲಿಗಳಂತೂ ದೊಡ್ಡ ಬಿರುಕುಬಿಟ್ಟಿರುವ ಮನೆ. ಅವರ ಪರಿಸ್ಥಿತಿ ಎರಡು ವರ್ಷಗಳ ಹಿಂದಿದ್ದಕ್ಕಿಂತಲೂ ಹದಗೆಟ್ಟಿದೆ. ಬಾದಲ್, ಬರ್ನಾಲಾ ಅಕಾಲಿದಳ ಬಹುತೇಕ ಮಂದಿಗೆ ಚುನಾವಣೆಗಳು ಬೇಡವಾದರೂ ಅವರೂ ಚುನಾವಣೆ ನಡೆಸಬೇಕೆಂದು ಒತ್ತಾಯಿಸುತ್ತಿವೆ. ಭಯೋತ್ಪಾದನೆ, ಪ್ರತ್ಯೇಕತಾವಾದದ ಬಗ್ಗೆ ಅವರ ನಿಲುವು ಕಂಡರೆ

ಪ್ರಜಾಪ್ರಭುತ್ವದಲ್ಲಿ ನಂಬಿಕೆಯಿರುವ ಪ್ರತಿಯೊಬ್ಬರೂ ರಾಜ್ಯದಲ್ಲಿ ಚುನಾವಣೆ ನಡೆಯಬೇಕೆಂದು ಬಯಸುತ್ತಾರೆ. ಆದರೆ ಚುನಾವಣೆಗಳು ಪ್ರಜಾಪ್ರಭುತ್ವ ಪ್ರಕ್ರಿಯೆಯನ್ನು ಬಲಪಡಿಸಲು ನೆರವಾಗುವಂತಿರಬೇಕು. ಜನ ಮುಕ್ತವಾಗಿ ನಿರ್ಭಯವಾಗಿ ತಮ್ಮ ಮತಚಲಾಯಿಸುವಂತಹ ಪರಿಸ್ಥಿತಿ ನಿರ್ಮಾಣವಾಗಬೇಕು.

ಚುನಾವಣೆ ಆ ಮುಖಂಡರಿಗೆ ಏಕೆ ಬೇಕು ಎಂಬುದನ್ನು ಅರಿಯಬಹುದು. ಪ್ರತ್ಯೇಕತಾವಾದಿಗಳಿಗೆ, ಭಯೋತ್ಪಾದಕರಿಗೆ ಪಂಜಾಬನ್ನು ಅರ್ಪಿಸಲೆಂದೇ ಅವರು ಚುನಾವಣೆ ಬೇಕೆನ್ನುತ್ತಿದ್ದಾರೆ. ರಾಷ್ಟ್ರೀಯ ಐಕ್ಯತೆ, ಪಂಜಾಬೀ ಜನರ ಐಕ್ಯತೆಯ ಬಗ್ಗೆ ಅವರಿಗೆ ಸ್ವಲ್ಪವೂ ಗಮನವಿಲ್ಲ.

ಪ್ರಜಾಪ್ರಭುತ್ವದಲ್ಲಿ ನಂಬಿಕೆಯಿರುವ ಪ್ರತಿಯೊಬ್ಬರೂ ರಾಜ್ಯದಲ್ಲಿ ಚುನಾವಣೆ ನಡೆಯಬೇಕೆಂದು ಬಯಸುತ್ತಾರೆ. ಆದರೆ ಚುನಾವಣೆಗಳು ಪ್ರಜಾಪ್ರಭುತ್ವ ಪ್ರಕ್ರಿಯೆಯನ್ನು ಬಲಪಡಿಸಲು ನೆರವಾಗುವಂತಿರಬೇಕು. ಜನ ಮುಕ್ತವಾಗಿ ನಿರ್ಭಯವಾಗಿ ತಮ್ಮ ಮತಚಲಾಯಿಸುವಂತಹ ಪರಿಸ್ಥಿತಿ ನಿರ್ಮಾಣವಾಗಬೇಕು. ಚುನಾವಣೆಗಳಿಂದ ರಾಜ್ಯದಲ್ಲಿ ಸಾಮಾನ್ಯ ಪರಿಸ್ಥಿತಿ ನೆಲೆಸುವಂತಾಗಬೇಕು, ರಾಷ್ಟ್ರೀಯ ಐಕ್ಯತೆಗೆ ಬೆದರಿಕೆಯನ್ನುತಡೆಯುವಂತಾಗಬೇಕು.

ಪಂಜಾಬಿನ ಪರಿಸ್ಥಿತಿ ತುಂಬಾ ಕ್ಲಿಷ್ಟವಾಗಿದೆ ಪಾಂಥಿಕ್ ಸಮಿತಿಯ ಎರಡು ಬಣಗಳು ಪಾಕಿಸ್ತಾನದ ಮಣ್ಣಿನಿಂದ ಕೆಲಸ ನಿರ್ವಹಿಸುತ್ತಿವೆ. ಆದರಲ್ಲೊಂದು ಮನೋಚಹಲ್ ನೇತೃತ್ವದ ಸಮಿತಿ ಮಾನ್ ಅಕಾಲಿದಳದೊಂದಿಗೆ ಒಪ್ಪಂದ ಮಾಡಿಕೊಂಡು ಚುನಾವಣೆಯಲ್ಲಿ ಅದನ್ನು ಬೆಂಬಲಿಸುವ ಮಾತುಕೊಟ್ಟಿದೆ. ಚುನಾವಣೆಯ ನಂತರ ಚುನಾಯಿತ ಶಾಸಕರಲ್ಲಿ ಬಹುಮಂದಿ ಮಾನ್ ಗುಂಪಿನವರಾದರೆ ವಿಧಾನಸಭೆಯಲ್ಲಿ ಖಾಲಿ ಸ್ಥಾನದ ಬಗ್ಗೆ ಒಂದು ನಿರ್ಣಯ ಅಂಗೀಕರಿಸಿ ಇದನ್ನು ಅಂತರಾಷ್ಟ್ರೀಯ ಸಮಸ್ಯೆಯನ್ನಾಗಿಸಬಹುದೆಂಬ ಲೆಕ್ಕಾಚಾರ ಅವರದ್ದು.

ಹಾಗಾದಾಗ ಪರಿಸ್ಥಿತಿ ಕಾಶ್ಮೀರಕ್ಕಿಂತಲೂ ಹದಗೆಡಲಿದೆ. ಆಡಳಿತ ಪೂರ್ಣ ಹದಗೆಟ್ಟು, ರಾಷ್ಟ್ರೀಯ ಐಕ್ಯತೆಗಾಗಿ ಹೋರಾಡುವವರು ದಾಳಿಯ ಮುಖ್ಯ ಗುರಿಯಾಗಿ ಪಾಕಿಸ್ತಾನಕ್ಕೆ ಅನುಕೂಲಕರ ಪರಿಸ್ಥಿತಿ ನಿರ್ಮಾಣವಾಗುತ್ತದೆ.

ಚುನಾವಣೆ ನಡೆಯುವಾಗ ರಂಗದಿಂದ ಮೊದಲು ಓಡಿಹೋಗುವವರು ಈಗ ಚುನಾವಣೆ ಬೇಕೆಂದು ಮಾತನಾಡುತ್ತಿರುವವರೇ. ತಮ್ಮ ಮುಖಂಡರೇ ಭಯೋತ್ಪಾದಕರ ಆಕ್ರಮಣಗಳಿಗೆ ಒಳಗಾಗುತ್ತಿದ್ದರೂ ಅವರನ್ನೆದುರಿಸುವ ಧೈರ್ಯವಿಲ್ಲದವರು ಚುನಾವಣಾ ಸಮಯದಲ್ಲಿ ಪ್ರಚಾರನಡೆಸಲು ಶಕ್ತರಾಗುವರೇ? ಅಂದರೆ ರಂಗವನ್ನು ಆಗ ಉಗ್ರಗಾಮಿಗಳಿಗೆ, ಅವರ ಬೆಂಬಲಿಗರಿಗೆ ತೆರೆದಿಟ್ಟಂತಾಗುತ್ತದೆ.

ಇಂತಹ ಪರಿಸ್ಥಿತಿ ಬಂದರೆ ಕೇಂದ್ರ ಸರ್ಕಾರ ಪಂಜಾಬ್ ವಿಧಾನ ಸಭೆಯನ್ನು ವಿಸರ್ಜಿಸಬಹುದೆಂದು ವಾದಿಸಲಾಗುತ್ತಿದೆ. "ಜನತೆಯ ತೀರ್ಮಾನ" ನಂತರ ಉಗ್ರಗಾಮಿಗಳ ಕೈಗಳನ್ನು ಮತ್ತಷ್ಟು ಬಲಪಡಿಸಿದಂತಾಗುತ್ತದೆ. ಅವರಿಗೇಕೆ ಅರ್ಥವಾಗುವುದಿಲ್ಲವೋ ತಿಳಿಯದು!

ಇನ್ನೊಂದು ಮುಖ್ಯ ಅಂಶ ಮರೆಯಲಾಗುತ್ತಿದೆ. ಪಂಜಾಬೀ ಸಮಸ್ಯೆ ಸಿಖ್ ಸಮಸ್ಯೆಯೆಂದೇ ಕಾಣಲಾಗುತ್ತಿದೆ. ಆದರೆ ಪಂಜಾಬಿನ ಜನರಲ್ಲಿ 46% ಹಿಂದೂಗಳು ಎಂಬುದನ್ನೇ ಮರೆಯಲಾಗುತ್ತಿದೆ. ಈ ದೊಡ್ಡ ಸಂಖ್ಯೆಯ ಅಲ್ಪ ಸಂಖ್ಯಾತರೀಗ ಭಯದ ನೆರಳಲ್ಲಿ ವಾಸಿಸುತ್ತಿದ್ದಾರೆ. ಸರಕಾರ ಅವರಿಗೆ ಭದ್ರತೆ, ವಿಶ್ವಾಸ ಮೂಡಿಸಲು ವಿಫಲವಾಗಿದೆ. ಇಂತಹ ಸಂದರ್ಭದಲ್ಲಿ ಚುನಾವಣೆಯನ್ನು ಘೋಷಿಸಿದರೆ ಪಂಜಾಬಿನಿಂದ ದೊಡ್ಡ ಪ್ರಮಾಣದಲ್ಲಿ ಬೇರೆ ರಾಜ್ಯಗಳಿಗೆ ವಲಸೆ ಆರಂಭವಾಗುತ್ತದೆ. ಇದರ ಪ್ರಭಾವ ಬೇರೆ ರಾಜ್ಯಗಳಲ್ಲಿರುವ ಸಿಖ್ ಸಮುದಾಯದ ಮೇಲೂ ಬೀಳುತ್ತದೆ. ಇದರಿಂದ ಪರಿಸ್ಥಿತಿ ಮತ್ತಷ್ಟು ಉಲ್ಬಣಗೊಳ್ಳುತ್ತದೆ.

ಕೇಂದ್ರ ಸರಕಾರ ತನ್ನ ಹೊಣೆ ನಿರ್ವಹಿಸಿದ್ದರೆ ಮುಕ್ತ ಹಾಗೂ ನ್ಯಾಯ ಚುನಾವಣೆ ನಡೆಸಲು ಸೂಕ್ತವಾದ ವಾತಾವರಣ ನಿರ್ಮಿಸಬಹುದಾಗಿತ್ತು. ಆದರೆ ಅದು ಆಡಳಿತದಲ್ಲಿನ ದೌರ್ಬಲ್ಯಗಳನ್ನು, ಭ್ರಷ್ಟಾಚಾರವನ್ನು, ಜನರಲ್ಲಿ ಅದರ ಬಗ್ಗೆ ಹೆಚ್ಚುತ್ತಿರುವ ಅಪನಂಬಿಕೆಯನ್ನು ತೊಡೆಯಲು ಕೂಡಾ ಯಾವ ಕ್ರಮವನ್ನೂ ಕೈಗೊಳ್ಳಲಿಲ್ಲ. ಇತ್ತೀಚೆಗೆ ಆಗಸ್ಟ್ 27ರಂದು ಸಿ.ಪಿ.ಐ. (ಎಂ), ಸಿ.ಪಿ.ಐ. ಕರೆಯ ಮೇರೆಗೆ ಪಂಜಾಬಿನಿಂದ 30 ಸಾವಿರ ಮಂದಿ ಬಂದು ಪಂಜಾಬ್ ಸಮಸ್ಯೆಯ ಪರಿಹಾರದ ತುರ್ತನ್ನು ಮನಗಾಣಿಸಿದರೂ ಸರಕಾರ ಏನೂ ಮಾಡಿಲ್ಲ. ಉಗ್ರಗಾಮಿಗಳ ವಿರುದ್ಧ ಹೋರಾಡುವ ಬದಲು ಅವರನ್ನು ಸುಪ್ರೀತಗೊಳಿಸಲು ಅವರೆದುರು ಶರಣಾಗುವ ಆಟ ಆಡುತ್ತಿದೆ. ಸಿಖ್ ಮನೋಭಾವದ ಹೆಸರಿನಲ್ಲಿ ತನ್ನ ಸಧ್ಯದ ರಾಜಕೀಯ ನಡೆಸುತ್ತಿದೆ.

ಈ ಕೆಳಗಿನ ಕ್ರಮಗಳನ್ನು ಕೈಗೊಂಡರೆ ಈಗಲೂ ಕೆಲವೇ ತಿಂಗಳುಗಳಲ್ಲಿ, ಪ್ರಜಾಪ್ರಭುತ್ವ ಪ್ರಕ್ರಿಯೆ ಆರಂಭಿಸಿ ಚುನಾವಣೆ ನಡೆಸಬಹುದಾದ ವಾತಾವರಣ ನಿರ್ಮಿಸಲು ಸಾಧ್ಯ.

ಚುನಾವಣೆ ನಡೆಯುವಾಗ ರಂಗದಿಂದ ಮೊದಲು ಓಡಿಹೋಗುವವರು ಈಗ ಚುನಾವಣೆ ಬೇಕೆಂದು ಮಾತನಾಡುತ್ತಿರು ವವರೇ. ತಮ್ಮ ಮುಖಂಡರೇ ಭಯೋತ್ಪಾದಕರ ಆಕ್ರಮಣಗಳಿಗೆ ಒಳಗಾಗುತ್ತಿ ದ್ದರೂ ಅವರನ್ನೆದುರಿಸುವ ಧೈರ್ಯವಿಲ್ಲ ದವರು ಚುನಾವಣಾ ಸಮಯದಲ್ಲಿ ಪ್ರಚಾರ ನಡೆಸಲು ಶಕ್ತರಾಗುವರೇ? ಅಂದರೆ ರಂಗವನ್ನು ಆಗ ಉಗ್ರಗಾಮಿಗಳಿಗೆ, ಅವರ ಬೆಂಬಲಿಗರಿಗೆ ತೆರೆದಿಟ್ಟಂತಾಗುತ್ತದೆ.

1. ಆಡಳಿತವನ್ನು ದಕ್ಷಗೊಳಿಸಿ ಆಡಳಿತ ಮತ್ತು ಜನರ ನಡುವೆ ಕಂದಕ ನಿರ್ಮಿಸುತ್ತಿರುವವರನ್ನೂ ತೆಗೆದು ಹಾಕಿ ದಕ್ಷ, ಪ್ರಾಮಾಣಿಕ ಅಧಿಕಾರಿಗಳಿಗೆ ಜವಾಬ್ದಾರಿ ಸ್ಥಾನಗಳನ್ನು ಕೊಡಬೇಕು.

2. ರಾಜೀವ್-ಲೋಂಗೋವಾಲ್ ಒಪ್ಪಂದ ಈಗಲೂ ಸಮಸ್ಯೆ ಪರಿಹಾರಕ್ಕೊಂದು ಆಧಾರವಾಗಬಲ್ಲದು. ವಿವಿಧ ವಿವಾದಗಳನ್ನು ಕುರಿತಂತೆಸೂಚಿಸಿರುವ ಪಂಜಾಬ್ ಪ್ಯಾಕೇಜ್‌ನ ಜ್ಯಾರಿ ಕೂಡಾ ರಾಜ್ಯದ ಜನರಲ್ಲಿ ವಿಶ್ವಾಸ ಮೂಡಿಸಬಲ್ಲದು.

ಈಗಲೂ ಸರ್ಕಾರ ಕೆಲವು ಪ್ರಮುಖ ಕ್ರಮಗಳನ್ನು ಕೈಗೊಂಡರೆ ಕೆಲವೇ ತಿಂಗಳಲ್ಲಿ ಪ್ರಜಾಪ್ರಭುತ್ವ ಪ್ರಕ್ರಿಯೆ ಆರಂಭಿಸಿ ಚುನಾವಣೆ ನಡೆಸಬಹುದಾದ ವಾತಾವರಣ ನಿರ್ಮಿಸಲು ಸಾಧ್ಯ.

3. ಉಗ್ರಗಾಮಿಗಳ ಪ್ರಚಾರವನ್ನು, ಅಕ್ಕಾಲಿದಳಗಳದೇಶ-ವಿರೋಧಿ ಚಟುವಟಿಕೆಗಳನ್ನು ಎದುರಿಸವಲ್ಲಿಯೂ ಸರ್ಕಾರ ಸೋತಿದೆ. ರೇಡಿಯೋ, ಟಿ.ವಿ. ಕೂಡಾ ಈ ಪಾಕಿಸ್ತಾನೀ ತರಬೇತಿ ಪಡೆದ ಉಗ್ರಗಾಮಿಗಳು ಸಾವಿರಾರು ವಯಸ್ಕರ ಅಮಾನುಷ ಕೊಲೆ ಮಾಡಿರುವುದನ್ನು ತೋರಿಸುತ್ತಿಲ್ಲ. ದೇಶದ ಐಕ್ಯತೆಯ ಸರ್ವಪಕ್ಷ ಪ್ರಕ್ಷೋಭೆಗೆ ಇನ್ನು ಹೆಚ್ಚಿನ ಮಹತ್ವ ನೀಡಬೇಕು. ಕೇವಲ ಕೆಲವೊಮ್ಮೆ ಅಲ್ಲಲ್ಲಿ ರ್‍ಯಾಲಿನಡೆಸಿ ಸಂತುಷ್ಟರಾಗದೆ ಇದೊಂದು ಸತತ ಕ್ರಿಯೆಯಾಗಬೇಕು.

4. ಆಡಳಿತದ ಮೇಲೆ ಸೂಕ್ತ ಹತೋಟಿ ಇರಲು ವಿವಿಧ ರಾಜಕೀಯ ಶಕ್ತಿಗಳಿರುವ ಸಲಹಾ ಸಮಿತಿಗಳನ್ನು ರಚಿಸಬೇಕು. ಇದಕ್ಕೆ ಸಂವಿಧಾನದಲ್ಲಿ ಅವಕಾಶವಿಲ್ಲ. ಆದ್ದರಿಂದ ಸೂಕ್ತ ಕ್ರಮ ಕೈಗೊಂಡು ಈ ಅವಕಾಶ ಕಲ್ಪಿಸಬೇಕು.

ಈಗ ಎಲ್ಲಾ ದೇಶಪ್ರೇಮಿ ಶಕ್ತಿಗಳು ಒಂದಾಗಿ ಸರಕಾರ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳುವಂತೆ, ಸಾಧ್ಯವಾದಷ್ಟು ಬೇಗನೇ ರಾಜ್ಯದಲ್ಲಿ ಚುನಾವಣೆ ನಡೆಸಲು ಅನುಕೂಲ ವಾತಾವರಣ ನಿರ್ಮಿಸಲು ಪ್ರಯತ್ನಿಸುವಂತೆ ಮಾಡಬೇಕು. ಈಗಿನ ಪರಿಸ್ಥಿತಿಯಲ್ಲಿ ಚುನಾವಣೆನಡೆಸಿ ಪರಿಸ್ಥಿತಿಯನ್ನು ಉಲ್ಬಣಗೊಳಿಸುವ ಅಪಾಯವನ್ನು ಸರಕಾರ ತಪ್ಪಿಸುವಂತೆ ಮೇಲೆ ಒತ್ತಾಯ ತರಬೇಕು.

ಮೀಸಲಾತಿಗೆ ವಿರೋಧ: ಅವಿವೇಕದ ಕೃತ್ಯಗಳು

ಉದ್ಯೋಗಗಳಲ್ಲಿ ಹಿಂದುಳಿದ ವರ್ಗದವರಿಗೆ ಶೇ 27 ಮೀಸಲಾತಿ ಸೌಲಭ್ಯ ಕಲ್ಪಿಸುವ ಕುರಿತಾದ ಮಂಡಲ್ ಆಯೋಗದ ವರದಿಯ ಶಿಫಾರಸ್ಸುಗಳನ್ನು ಜಾರಿ ಮಾಡುವ ಪ್ರಧಾನಿ ವಿ.ಪಿ. ಸಿಂಗ್‌ರ ಘೋಷಣೆಯಿಂದ ದೇಶದಲ್ಲಿ ಭಾರಿ ಉದ್ರೇಕಕಾರಿ ವಾತಾವರಣ ಸೃಷ್ಟಿಯಾಗಿದೆ.

ಸಾವಿರಾರು ವರ್ಷಗಳಿಂದ ತುಳಿತಕ್ಕೊಳಗಾದ ಜನರಿಗೆ ಮೀಸಲಾತಿ ಒಂದು ತಾತ್ಕಾಲಿಕ ಪರಿಹಾರ ಎಂಬ ಸಾಮಾಜಿಕ ನ್ಯಾಯವನ್ನು ಒಪ್ಪಿಕೊಳ್ಳದ ಒಂದು ವಿಭಾಗ, ಮೀಸಲಾತಿಯಿಂದಲೇ ನಿರುದ್ಯೋಗ ಸಮಸ್ಯೆ ತಾಂಡವವಾಡುತ್ತಿದೆ, ದಕ್ಷತೆ ಕುಂದುತ್ತದೆ ಎಂದು ಹುಯಿಲೆಬ್ಬಿಸಿದೆ. ಇನ್ನೊಂದೆಡೆ, ಮೀಸಲಾತಿ ಯೇ ಹಿಂದುಳಿದವರ ಉದ್ಧಾರಕ್ಕೆ ರಾಮಬಾಣ ಎಂಬ ಭ್ರಮೆಯಲ್ಲಿ ಇನ್ನೊಂದು ವಿಭಾಗದವರಿದ್ದಾರೆ.

ಮೊದಲಿನ ವಿಭಾಗ, ಬಹುತೇಕ ಯುವಜನರಲ್ಲಿರುವ ಅತೃಪ್ತಿಯನ್ನು ಕೆರಳಿಸಿ ಬೀದಿಗೆ ಇಳಿಸಿದೆ. ದೇಶದ ವಿವಿಧ ಭಾಗಗಳಲ್ಲಿ ವಿವಿಧ ರೀತಿಯ ಮೀಸಲಾತಿ ವಿರೋಧಿ ಚಟುವಟಿಕೆಗಳು ನಡೆದಿವೆ. ಮಾಮೂಲಿನಂತೆ ರಸ್ತೆ ಸಂಚಾರ, ರೈಲು ಸಂಚಾರ ತಡೆ, ಬಂದ್‌ಗಳು ಮೀಸಲಾತಿಯನ್ನು ಪ್ರತಿಭಟಿಸಲು ಕೆಲವರು ಆತ್ಮಹತ್ಯೆಗೆ ಮುಂದಾಗುತ್ತಿರುವುದರಿಂದ ಈ ಚಳುವಳಿ ಅಪಾಯಕಾರಿ ಆಯಾಮ ಪಡೆಯ ತೊಡಗಿದೆ.

ಮೀಸಲಾತಿ ಪರ-ವಿರೋಧಿ ಚಳುವಳಿಗಳು ಉದ್ರೇಕದ ಸ್ಥಿತಿಯನ್ನು ತಲುಪಿದಾಗ ಅಲ್ಲಲ್ಲಿ ನಡೆದ ಗೋಲಿಬಾರ್‌ಗಳಲ್ಲಿ ಈಗಾಗಲೇ ಹಲವಾರು ಜನರು ಮೃತಪಟ್ಟಿದ್ದಾರೆ. ಈಗ ಈ ಆತ್ಮಾಹುತಿ ಎಂಬ ಪ್ರತಿಭಟನಾ ಕಾರ್ಯಕ್ರಮದ ಸರದಿ ಶುರುವಾಗಿದೆ.

ಕಳೆದ ವಾರ (ಸೆ. 18), ರಾಜೀವ್‌ಗೋಸ್ವಾಮಿ ಎಂಬ ವಿದ್ಯಾರ್ಥಿಯೊಬ್ಬ, ದೆಹಲಿಯಲ್ಲಿ ಮೈಗೆ ಬೆಂಕಿ ಹಚ್ಚಿಕೊಳ್ಳುವ ಮೂಲಕ ಪ್ರಸ್ತುತ ಚಳುವಳಿಯಲ್ಲಿ ಕೆಟ್ಟ ಪರಂಪರೆಗೆ ನಾಂದಿ ಹಾಕಿದ. ಅದರ ನಂತರ ಬೇರೆ ಬೇರೆ ರಾಜ್ಯಗಳಿಂದಲೂ ಇಂಥ ವರದಿಗಳು ಬರುತ್ತಿವೆ. ಸಾಮಾನ್ಯ ವಿಚಾರಕ್ಕಾಗಿ (ಮನೆಜಗಳ ಇತ್ಯಾದಿ) ಆತ್ಮಹತ್ಯೆಗೆ ನಡೆದ ಪ್ರಯತ್ನಗಳು ಕೂಡ ಮೀಸಲಾತಿ ವಿರೋಧಿ ಪ್ರತಿಭಟನೆ ಎಂಬ ಹಣೆಪಟ್ಟಿ ಹೊಂದತೊಡಗಿದೆ.

ಅಮಾನವೀಯತೆ:

ರಾಜೀವ್‌ಗೋಸ್ವಾಮಿ ಆತ್ಮಹತ್ಯೆಗೆ ಯತ್ನಿಸುತ್ತಿರುವುದನ್ನು ತಡೆಯಲು ಹೋದ ಪೋಲೀಸರ ಮೇಲೆ ಚಳುವಳಿಕಾರರು ಕಲ್ಲುಗಳನ್ನು ತೂರಿದರು. ಸೆ. 24 ರಂದು ಇನ್ನೊಬ್ಬ ವಿದ್ಯಾರ್ಥಿ ಎಸ್.ಎಸ್. ಚೌಹಾಣ್ ತನ್ನ ಬೈಕಿನಿಂದ ತೆಗೆದ ಪೆಟ್ರೋಲ್ ಸುರಿದು ಕೊಂಡು ಬೆಂಕಿ ಹಚ್ಚಿಕೊಳ್ಳಲು ಪ್ರಯತ್ನ ನಡೆಸಿದ. ಆಗಲೂ ಕೂಡ ಪೋಲೀಸರು ಆತನ ಹತ್ತಿರ ಸುಳಿಯದಂತೆ ಮೀಸಲಾತಿ ವಿರೋಧಿಗಳು ತಡೆದರೆಂದು ಸುದ್ದಿ ಸಂಸ್ಥೆ ವರದಿಗಳು ತಿಳಿಸಿವೆ.

ಈ ಆತ್ಮಾಹುತಿ ಯತ್ನದ ಘಟನೆಗಳು ಮತ್ತು ಪತಿ ಸತ್ತ ಪತ್ನಿಯನ್ನು ಚಿತೆಗೆ ದೂಡುವ ಮನಸ್ಸುಗಳ ಚಿಂತನೆ ಒಂದೇ ರೀತಿಯಾಗಿರಬಹುದು. ಮನುಷ್ಯನೊಬ್ಬ ಸಾವನ್ನು ತಂದುಕೊಳ್ಳುವಸಿದ್ಧತೆಯಲ್ಲಿರುವಾಗ ಅದನ್ನು ತಡೆಯದಿರುವ 'ಹೃದಯ' ಎಂಥದ್ದು?

ಕಾ॥ ಇ. ಪದ್ಮನಾಭನ್ ನಿಧನ

ಸಿ.ಐ.ಟಿ.ಯು. ಕಾರ್ಯಕಾರಿ ಸಮಿತಿ ಸದಸ್ಯ ಹಾಗೂ ಅಖಿಲ ಭಾರತ ರಸ್ತೆ ಸಾರಿಗೆ ಕಾರ್ಮಿಕರ ಫೆಡರೇಶನ್‌ನ ಪ್ರಧಾನ ಕಾರ್ಯದರ್ಶಿ ಕಾ॥ ಇ. ಪದ್ಮನಾಭನ್ ಅವರು ಸೆಪ್ಟೆಂಬರ್ 18 ರಂದು ಹೊಸ ದಿಲ್ಲಿಯ ರಾಮಮನೋಹರ ಲೋಹಿಯಾ ಆಸ್ಪತ್ರೆಯಲ್ಲಿ ಹೃದಯಾಘಾತದಿಂದ ನಿಧನರಾದರು. ಅವರಿಗೆ 58 ವರ್ಷವಾಗಿತ್ತು.

ದಿಲ್ಲಿಯಲ್ಲಿ ನಡೆಯುವ ಕೋಮುವಾದ ವಿರುದ್ಧ ಅಖಿಲ ಭಾರತ ಟ್ರೇಡ್ ಯೂನಿಯನ್ ಸಮಾವೇಶದಲ್ಲಿ ಭಾಗವಹಿಸಲಿಕ್ಕಾಗಿ ಪದ್ಮನಾಭನ್ ದಿಲ್ಲಿಗೆ ಬಂದಿದ್ದರು.

ಕಾ॥ ಪದ್ಮನಾಭನ್ ಅವರು ಕೇರಳದಲ್ಲಿ ಸರಕಾರಿ ನೌಕರರ ಚಳುವಳಿಯಲ್ಲಿ ಒಂದು ಪ್ರಮುಖ ಪಾತ್ರ ವಹಿಸಿದ್ದರು. ಅಖಿಲ ಭಾರತ ರಾಜ್ಯ ಸರಕಾರಿನೌಕರರ ಫೆಡರೇಶನ್‌ನ ಉಪಾಧ್ಯಕ್ಷರಾಗಿದ್ದರು. ಅವರು ತಮ್ಮ ಉದ್ಯೋಗವನ್ನು ಬಿಟ್ಟು ಸಿ.ಐ.ಟಿ.ಯು.ನ ಪೂರ್ಣಾವಧಿ ಕಾರ್ಯಕರ್ತರಾಗಿದ್ದರು. ಕೇರಳ ರಾಜ್ಯ ರಸ್ತೆ ಸಾರಿಗೆ ನಿಗಮದ ನೌಕರರ ಮಧ್ಯೆ ಕೆಲಸ ಮಾಡಿದ ಅವರು ಬಹಳ ಸಣ್ಣ ಅವಧಿಯಲ್ಲಿ ಬಲಿಷ್ಠ ಸಂಘಟನೆ ಕಟ್ಟಿದರು.

ಕಾ॥ ಪದ್ಮನಾಭನ್‌ರ ನಿಧನಕ್ಕೆ ಸಿ.ಐ.ಟಿ.ಯು. ಸಂತಾಪ ವ್ಯಕ್ತಪಡಿಸಿದೆ. ಹಾಗೂ ಅವರ ಕುಟುಂಬ ಸದಸ್ಯರಿಗೆ ಸಹಾನುಭೂತಿ ಸೂಚಿಸಿದೆ.

ನಾಡಿನ ರಾಜಧಾನಿಯಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯಗಳ ಚಿತ್ರಣ

ಮಹಿಳೆಯರ ಮೇಲೆ ದೌರ್ಜನ್ಯ ನಡೆಸುವ ಕ್ರಿಮಿನಲ್‌ಗಳ ಮೇಲೆ ಕ್ರಮಕ್ಕೆಗೊಳ್ಳಬೇಕು. ಸಂತ್ರಸ್ತ ಮಹಿಳೆಯರಿಗೆ ಶೀಘ್ರ ನ್ಯಾಯ ಒದಗಿಸಬೇಕು ಎಂದು ಒತ್ತಾಯಿಸಿ ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆ ರಾಜಧಾನಿಯ ಬೋಟ್‌ಕ್ಲಬ್‌ನಲ್ಲಿ ಆ. 30 ರಂದು ಧರಣಿ ನಡೆಸಿತು.

ರಾಜಧಾನಿ ದಿಲ್ಲಿಯಲ್ಲಿಯೇ ಮಹಿಳೆಯರ ಮೇಲಿನ ಅಪರಾಧ ಪ್ರಕರಣಗಳು ಹೆಚ್ಚುತ್ತಿವೆ. ಈ ವರ್ಷ ಜನವರಿಯಿಂದ ಎಪ್ರಿಲ್ ನಡುವೆ 61 ಅತ್ಯಾಚಾರ ಪ್ರಕರಣಗಳು ನಡೆದಿವೆ. ಇವುಗಳಲ್ಲಿ ಕೆಲವು ಸ್ವತಃ ಪೋಲೀಸ್‌ರಿಂದ ನಡೆದಿರುವಂಥದ್ದು. ಇದೆ ಅವಧಿಯಲ್ಲಿ ಮಹಿಳೆಯರನ್ನು ಸುಟ್ಟು ಕೊಲೆ ಮಾಡಿದ 36 ಪ್ರಕರಣಗಳು ಬೆಳಕಿಗೆ ಬಂದಿವೆ. 1988 ರಲ್ಲಿ 4928 ಇದ್ದ ವರದಕ್ಷಿಣೆ ಪ್ರಕರಣಗಳು 1989 ರಲ್ಲಿ 6164 ಕ್ಕೆ ಏರಿವೆ. ಇವು ಕೇವಲ ದಾಖಲಾದ ಪ್ರಕರಣಗಳಷ್ಟೆ. ಹಲವಾರು ಕಾರಣಗಳಿಂದ ಇನ್ನೂ ಬೆಳಕಿಗೆ ಬಾರದಂಥವು ಅವೆಷ್ಟೊ ಇವೆ. ಮೊಕದ್ದಮೆಗಳ ದಾಖಲಾತಿ ಮತ್ತು ಶಿಕ್ಷೆ ನೀಡುವ ಪ್ರಕರಣಗಳು ಕಡಿಮೆಯಾಗುತ್ತಿವೆ. ಕಳೆದ ಎರಡು ತಿಂಗಳ ಅವಧಿಯಲ್ಲಿ 729 ಇಂಥ ಪ್ರಕರಣಗಳು ದಾಖಲಾಗಿವೆ. ಪೋಲೀಸ್ ಠಾಣೆಗಳಲ್ಲಿ 14 ಅತ್ಯಾಚಾರ ಘಟನೆಗಳು ನಡೆದಿರುವುದು ಬೆಳಕು ಕಂಡಿವೆ. ನ್ಯಾಯ ಸಿಗುವಲ್ಲಿ ವಿಳಂಬವಾಗುವುದರಿಂದ ಸಂತ್ರಸ್ತ ಮಹಿಳೆಯರು ಇನ್ನಷ್ಟು ತೊಂದರೆಗೆ ಒಳಗಾಗುತ್ತಾರೆ. ಪೋಲೀಸ್ ಸಂಶೋಧನಾ ಬ್ಯೂರೋದ ವರದಿಯ ಪ್ರಕಾರವೇ, ಪ್ರತಿ 100 ಪ್ರಕರಣಗಳಲ್ಲಿ ಕೇವಲ ಮೂರರಲ್ಲಿ ಮಾತ್ರವೇ ಅಪರಾಧಿಗಳು ಶಿಕ್ಷೆಗೊಳಗಾಗುತ್ತಾರೆ.

ಪೋಲೀಸರ ನಿಷ್ಕ್ರಿಯತೆಯಿಂದಾಗಿ ತೊಂದರೆಗೊಳಗಾಗಿರುವ ಅನೇಕ ಮಹಿಳೆಯರೂ ಧರಣಿಯಲ್ಲಿ ಪಾಲ್ಗೊಂಡಿದ್ದರು.

ಅತ್ಯಾಚಾರ, ಹಿಂಸೆ ಮತ್ತಿತರ ಅನ್ಯಾಯಕ್ಕೊಳಗಾದ ಮಹಿಳೆಯರಿಗೆ ಶೀಘ್ರ ನ್ಯಾಯ ಒದಗಿಸದಿರುವುದೇ ಅವರಿಗೆ ಆಗುವ ಇನ್ನೊಂದು ಕಿರುಕುಳವಾಗಿದೆ. ಈ ಅನ್ಯಾಯದ ಬಗ್ಗೆ ಪ್ರತಿಭಟಿಸಲಿಕ್ಕಾಗಿ ಅಖಿಲ ಭಾರತ ಮಟ್ಟದಲ್ಲಿ ಉಪವಾಸ ಮುಷ್ಕರ, ಧರಣಿ, ಸಭೆಗಳು ಮೊದಲಾದ ಕಾರ್ಯಕ್ರಮ ನಡೆಸಬೇಕೆಂದು ಎ.ಐ.ಡಿ.ಡಬ್ಲ್ಯು.ಎ. ನೀಡಿದ ಕರೆಗನುಸಾರವಾಗಿ ಈ ಕಾರ್ಯಕ್ರಮ ನಡೆಯಿತು.

ಬೃಂದಾ ಕಾರಟ್, ರಂಜನಾ ನರೂಲಾ, ಪ್ರಮೀಳಾ ಪಂಢೆ ಮತ್ತು ಕಳಿಂದಿ ದೇಶಪಾಂಡೆ ಅವರನ್ನೊಳಗೊಂಡ ನಿಯೋಗವೊಂದು ಗೃಹ ಸಚಿವ ಮುಫ್ತಿ ಮಹಮದ್ ಸಯೀದ್‌ರವರನ್ನು ಭೇಟಿಯಾಗಿ ಮನವಿ ಅರ್ಪಿಸಿತು. ಬೇಡಿಕೆಗಳನ್ನು ಸಹಾನುಭೂತಿಯಿಂದ ಪರಿಶೀಲಿಸುವುದಾಗಿ ಹೇಳಿದ ಸಚಿವರು, ಕೈಗೊಂಡ ಕ್ರಮಗಳ ಬಗ್ಗೆ ಸಂಘಟನೆಗೆ ಮಾಹಿತಿ ಒದಗಿಸುವುದಾಗಿ ತಿಳಿಸಿದರು.

ದಂಪತಿ ಕೊಲೆಯ ಖಂಡನೆ

ತ್ರಿಪುರಾದಲ್ಲಿ ಕಾಂಗ್ರೆಸ್(ಐ) ಟಿ.ಯು.ಜೆ.ಎಸ್. ಕೂಟದ ಬೆಂಬಲಿಗರು ಆ. 30 ರಂದು ರಾಜೇಶ್ವರ ಸಿನ್ಹಾ ಮತ್ತು ಸುಮಿತ್ರಾ ಸಿನ್ಹಾರನ್ನು ಕೊಲೆ ಮಾಡಿರುವುದನ್ನು ವಿವಿಧ ರಾಜಕೀಯ ಪಕ್ಷಗಳ ಸಂಸತ್ ಸದಸ್ಯರು ಖಂಡಿಸಿದ್ದಾರೆ. ಬಿಲೋನಿಯಾದಲ್ಲಿ ಇಬ್ಬರು ಮಕ್ಕಳ ಮುಂದೆಯೇ ಈ ದಂಪತಿಯನ್ನು ಅಮಾನುಷವಾಗಿ ಕೊಲ್ಲಲಾಯಿತು. ಸುಮಿತ್ರಾ ರಾಜ್ಯ ಸರಕಾರದ ನೌಕರರಾಗಿದ್ದರು.

ಖಂಡನಾ ಹೇಳಿಕೆಗೆ ಸಹಿಹಾಕಿದವರು: ಇಂದ್ರಜಿತ್ ಗುಪ್ತಾ, ಲೋಕನಾಥ ಚೌಧುರಿ (ಸಿ.ಪಿ.ಐ.), ಚಿತ್ತ ಬಸು (ಫಾರ್ವರ್ಡ್ ಬ್ಲಾಕ್), ನಾನಿ ಭಟ್ಟಾಚಾರ್ಯ, ಪಿಯುಸ್ ತಿರ್ಕೆ (ಆರೆಸ್ಪಿ), ಸೋಮನಾಥ ಚಟರ್ಜಿ, ಸೈಫುದ್ದಿನ್ ಚೌಧುರಿ, ನಾರಾಯಣರಾವ್ (ಸಿ.ಪಿ.ಐ-ಎಂ), ಸತ್ಯಪ್ರಕಾಶ್ ಮಾಳವೀಯ, ರಾಜಾಮಂಗಲ್ ಪಾಂಡೆ (ಜನತಾದಳ), ಜಸ್ವಂತ್ ಸಿಂಗ್ (ಬಿ.ಜೆ.ಪಿ., ನಂದು ಥಾಪಾ (ಸಿಕ್ಕಿಂ ಸಂಗ್ರಾಮ ಪರಿಷತ್), ಜಿ.ಜಿ. ಸ್ವೆಲ್ (ಎಚ್.ಎಸ್.ಪಿ.ಡಿ.ಪಿ).

ಪತ್ರಿಕೆ ಮುದ್ರಣಕ್ಕೆ ಹೋಗುವ ಹೊತ್ತಿಗೆ ಬಂದ ಸುದ್ದಿಯಂತೆ ಎಸ್.ಎಸ್. ಚೌಹಾಣ್ ಆಸ್ಪತ್ರೆಯಲ್ಲಿ ಮೃತ ಪಟ್ಟಿದ್ದಾನೆ. ಇನ್ನಷ್ಟು ಜನರು ಆತ್ಮಾಹುತಿಗೆ ಪ್ರಯತ್ನಿಸುತ್ತಿರುವ ವರದಿಗಳು ಬರುತ್ತಿವೆ. ಒಂದೆಡೆ ನದಿಗೆ ಹಾರಿ ಪ್ರಾಣ ಕಳೆದು ಕೊಳ್ಳಲು ಯತ್ನಿಸಿದ ಮೀಸಲಾತಿ ವಿರೋಧಿಗಳನ್ನು ಪೋಲೀಸರು ತಡೆದರು.

ಕೋಮು ಸೌಹಾರ್ದತಾ ದಿನಾಚರಣೆ

ಡಿವೈಎಫ್‌ಐನ ವಿರಾಜಪೇಟೆ ತಾಲೂಕು ಸಮಿತಿಯಿಂದ 12-9-90 ರಂದು ಪಾಲಿಬೆಟ್ಟದಲ್ಲಿ ಕೋಮು ಸೌಹಾರ್ದತಾ ದಿನಾಚರಣೆಯನ್ನು ಆಚರಿಸಲಾಯಿತು. ಸಭೆಯ ಅಧ್ಯಕ್ಷತೆಯನ್ನು ಡಿವೈಎಫ್‌ಐನ ಸ್ಥಳೀಯ ಘಟಕದ ಅಧ್ಯಕ್ಷರಾದ ಕಾಂ. ಸದಾಶಿವ ನಾಯಕ್ ರವರು ವಹಿಸಿದ್ದರು. ಸಭೆಯುದ್ದೇಶಿಸಿ ಮಾತನಾಡಿದ ಕಾಂ. ಐ.ಆರ್. ಪ್ರಮೋದ್, ಎನ್.ಡಿ.ಕುಟ್ಟಪ್ಪನ್, ದೇವರಪುರ ಮಂಡಲ ಪಂಚಾಯಿತಿ ಸದಸ್ಯರಾದ ಆರ್. ಕೃಷ್ಣಕುಮಾರ್, ಕರ್ನಾಟಕ ಪ್ರಾಂತ ರೈತ ಸಂಘದ ಎಚ್. ಎಂ. ಕಾಳಯ್ಯ, ಜನತಾ ದಳದ ಫಯಾಜ್ ಅಹ್ಮದ್, ಪ್ರಸ್ತುತ ಭಾರತದ ಪರಿಸ್ಥಿತಿ ಮತ್ತು ಕೋಮು ಸೌಹಾರ್ದತೆಯ ಬಗ್ಗೆ ವಿವರಣೆ ನೀಡುತ್ತಾ, ರಾಷ್ಟ್ರದ ಪ್ರತಿಯೊಬ್ಬ ಪ್ರಜೆಯು ಜಾತಿ, ಮತ, ಭಾಷೆ, ಭೇದ ಭಾವವನ್ನು ಮರೆತು ರಾಷ್ಟ್ರೀಯ ಐಕ್ಯತೆ ಮತ್ತು ಸಮಗ್ರತೆಯನ್ನು 'ರಕ್ಷಿಸಲು'ಮುಂದಾಗಬೇಕೆಂದು ಕರೆಯಿತ್ತರು.

ವಿದ್ಯಾರ್ಥಿಗಳ ಬೇಡಿಕೆ ದಿನಾಚರಣೆ

ಎಸ್.ಎಫ್.ಐ. ರಾಜ್ಯ ಸಮಿತಿ ಕರೆಯ ಮೇರೆಗೆ 29-8-90ರಂದು ಶಹಾಪುರ ತಾಲೂಕು ಸಮಿತಿಯು ಬೇಡಿಕೆ ದಿನಾಚರಣೆಯನ್ನು ಆಚರಿಸಿತು. ಬಸ್‌ಪಾಸ್ ಮೇಲಿನ ನಿರ್ಭಂಧ ತೆಗೆಯುವುದು, ಆದಾಯ ಮಿತಿಯನ್ನು ಹೆಚ್ಚಿಸುವುದು, ಖಾಲಿ ಇರುವ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡುವುದು, ವಿದ್ಯಾರ್ಥಿಗಳಿಗೆ ಹಾಸ್ಟೆಲುಗಳನ್ನು ಪ್ರಾರಂಭಿಸುವುದು, ಪ್ರಯೋಗಾಲಯಗಳನ್ನು ಸುಸಜ್ಜಿತಗೊಳಿಸುವುದು, ಎನ್.ಸಿ.ಸಿ. ವಿಭಾಗವನ್ನು ಪ್ರಾರಂಭಿಸುವುದು. ಈ ಬೇಡಿಕೆಗಳನ್ನು ಪದವಿ ಹಾಗೂ ಕಿರಿಯ ಮಹಾ ವಿದ್ಯಾಲಯದ ವಿದ್ಯಾರ್ಥಿಗಳು ತರಗತಿಗಳನ್ನು ಬಹಿಷ್ಕರಿಸಿ ಪ್ರಮುಖ ಬೀದಿಗಳಲ್ಲಿ ಹಾದು ತಹಶೀಲ್ದಾರರಿಗೆ ಮನವಿ ಪತ್ರವನ್ನು ಸಲ್ಲಿಸಿದರು.

ವಿಜಯನಗರದ ಉಕ್ಕಿನ ಕಾರ್ಖಾನೆಗೆ ಒತ್ತಾಯ

ವಿಜಯನಗರ ಉಕ್ಕಿನ ಕಾರ್ಖಾನೆ ಸ್ಥಾಪಿಸಲು ಒತ್ತಾಯಿಸಿ 15-9-90 ರಂದು 300 ಕ್ಕೂ ಹೆಚ್ಚು ಬಳ್ಳಾರಿ ಡಿವೈಎಫ್‌ಐ ಯುವಕರು ಉಕ್ಕಿನ ಕಾರ್ಖಾನೆ ಶಿಲಾನ್ಯಾಸದ ಬಳಿ ಸಮಾವೇಶಗೊಂಡರು. ಕಬ್ಬಿಣದ ಅದಿರನ್ನು ಸಾಗಿಸುತ್ತಿದ್ದ ಗೂಡ್ಸ್ ಒಂದನ್ನು ಸಾಂಕೇತಿಕವಾಗಿ 20 ನಿಮಿಷ ಗಳ ಕಾಲ ತಡೆಗಟ್ಟಿದರು.

ಸಮಾವೇಶದಲ್ಲಿ ಅದುರಿನ ರಫ್ತನ್ನು ವಿರೋಧಿಸಿ ಅಕ್ಟೋಬರ್ 14 ರಿಂದ 48 ಗಂಟೆಗಳ ಕಾಲ ಮೈನಿಂಗ್ ಟ್ರಾನ್ಸ್‌ಪೋರ್ಟ್ ಸ್ಥಗಿತಗೊಳಿಸಿ ಬಂದ್ ಆಚರಿಸಲು ಹಾಗೂ 8 ನೇ ಯೋಜನೆಯಲ್ಲಿ ಕಾರ್ಖಾನೆ ಸ್ಥಾಪಿಸಲು ಕೇಂದ್ರವನ್ನು ಒತ್ತಾಯಿಸಲು ಹಾಗೂ ಕಾರ್ಖಾನೆಗೆ ವಿದ್ಯುತ್ , ನೀರು ಒದಗಿಸಲು ರಾಜ್ಯ ಸರಕಾರವನ್ನು ಒತ್ತಾಯಿಸಿ ನಿರ್ಣಯ ಅಂಗೀಕರಿಸಲಾಯಿತು.

ಡಿವೈಎಫ್‌ಐ ಜಿಲ್ಲಾ ಅಧ್ಯಕ್ಷ ಕಾಂ. ಜಂಬಯ್ಯ ನಾಯಕ್ ಸಮಾವೇಶದ ಅಧ್ಯಕ್ಷತೆ ವಹಿಸಿದ್ದರು.

ಸಿಂಧನೂರ್

ಎಂಟನೇ ಪಂಚವಾರ್ಷಿಕ ಯೋಜನೆಯಲ್ಲಿ ವಿಜಯನಗರ . ಉಕ್ಕಿನ ಕಾರ್ಖಾನೆಯನ್ನು ಸೇರಿಸಬೇಕೆಂದು ಒತ್ತಾಯಿಸಿ ಡಿವೈಎಫ್‌ಐ ಸಿಂಧನೂರ್ ತಾಲೂಕು ಸಮಿತಿ 15-9-90 ರಂದು ಮೆರವಣಿಗೆ ನಡೆಸಿದರು. 500 ಕ್ಕೂ ಹೆಚ್ಚು ಜನರು ಭಾಗವಹಿಸಿದ್ದ ಮೆರವಣಿಗೆಯು ತಹಶೀಲ್ದಾರ್‌ರ ಮುಖಾಂತರ ಪ್ರಧಾನ ಮಂತ್ರಿಗಳಿಗೆ ಮನವಿ ಪತ್ರವನ್ನು ಸಲ್ಲಿಸಿದರು.

ನಂತರ ಬಹಿರಂಗ ಸಭೆಯನ್ನುದ್ದೇಶಿಸಿ ಕಾಂ. ಬಸವರಾಜ್ ಹಾಗೂ ಶರಬಣ್ಣ ನಾಗ್ಲಾಪುರ ಮಾತನಾಡಿದರು.

ವಿರಾಜಪೇಟೆ

ಡಿವೈಎಫ್‌ಐನ ರಾಜ್ಯಮಟ್ಟದ ಕಾರ್ಯಕ್ರಮದಂತೆ ವಿರಾಜಪೇಟೆಯ ಡಿವೈಎಫ್‌ಐನ ತಾಲೂಕು ಸಮಿತಿ ವಿಜಯನಗರ ಉಕ್ಕಿನ ಕಾರ್ಖಾನೆಯ ಸ್ಥಾಪನೆ ಹಾಗೂ ಬಳ್ಳಾರಿ ಜಿಲ್ಲೆಯಿಂದ ರಫ್ತಾಗುತ್ತಿರುವ ಕಬ್ಬಿಣದ ಅದುರಿನ ಮೇಲೆ ನಿಷೇಧ ಹೇರಬೇಕೆಂದು ಒತ್ತಾಯಿಸಿ 15-9-90 ರಂದು ಮೆರವಣಿಗೆ ಮೂಲಕ ಘೋಷಣೆಗಳನ್ನು ಕೂಗುತ್ತಾ ತಹಶೀಲ್ದಾರ್ ಕಛೇರಿಗೆ ತೆರಳಿ ಮನವಿ ಪತ್ರವನ್ನು ಸಲ್ಲಿಸಿದರು.

ನಂತರ ಖಾಸಗಿ ಬಸ್ ನಿಲ್ದಾಣದಲ್ಲಿ ನಡೆದ ಬಹಿರಂಗ ಸಭೆಯ ಅಧ್ಯಕ್ಷತೆಯನ್ನು ಕಾಂ. ಐ.ಆರ್. ಪ್ರಮೋದ್ ವಹಿಸಿದ್ದರು.

ಜನತೆಯ ಒಗ್ಗಟ್ಟಿಗಾಗಿ ಕರೆ

ಮಂಡಲ ಆಯೋಗದ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸುವ ಕೇಂದ್ರ ಸರಕಾರದ ನಿರ್ಧಾರ ಮೀಸಲಾತಿ ವಿರೋಧಿ ಚಳುವಳಿಗೆ ಎಡೆಮಾಡಿಕೊಟ್ಟಿದೆ. ಹಿಂದುಳಿದ ಜಾತಿಗಳ ಅಸಮಾನತೆಯನ್ನು ಭಾಗಶಃ ತೊಡೆಯಲು ಮೀಸಲಾತಿ ಅವಶ್ಯಕವೆಂಬುದನ್ನು ಮುಂದುವರಿದ ಜಾತಿಗಳ ಪ್ರಜಾಸತ್ತಾತ್ಮಕ ಮನೋಭಾವದ ಜನ ಮನಗಾಣಬೇಕೆಂದು ಹಾಗೂ ಹೊಸ ಉದ್ಯೋಗ ಸೃಷ್ಟಿಗಾಗಿ ಹೋರಾಡಬೇಕಾದ ಸಂದರ್ಭದಲ್ಲೇ ಮೀಸಲಾತಿ ಪರ ಮತ್ತು ವಿರೋಧವಾಗಿ ಒಡೆಯುವುದು ನಿಲ್ಲಬೇಕೆಂದು ಸಿಪಿಐ(ಎಂ)ನ ಶಿರಸಿ ಶಾಖೆ ಕರೆ ನೀಡಿದೆ

ರಾಮ ಜನ್ಮ ಭೂಮಿಯ ವಿಷಯದಲ್ಲೂ ಅದು ವಿಎಚ್‌ಪಿಯ ನಿಲುವನ್ನು ದೇಶದ ಶತ್ರುಗಳಿಗಷ್ಟೇ ನೆರವಾಗುವ ಅಕ್ರಾಮಕ ನಿಲುವೆಂದು, ಜಾತ್ಯಾತೀತ ಶಕ್ತಿಗಳು ಹಾಗೂ ಸರಕಾರ ಕೋಮುವಾದಿಗಳ ಈ ಪ್ರಯತ್ನಗಳ ವಿರುದ್ಧ ದೃಢ ನಿಲುವು ಹಾಗೂ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದೆ.



ಕೋಟೆಕಾರ್ ಸರ್ಕಲ್ ಬೀಡಿ ಲೇಬರ್ ಯೂನಿಯನ್ ತನ್ನ 16ನೇ ವಾರ್ಷಿಕ ಮಹಾಸಭೆಯಲ್ಲಿ ಅಂಗೀಕರಿಸಿದ ನಿರ್ಣಯವೊಂದರಲ್ಲಿ ಅಸಂಘಟಿತ ಬೀಡಿ ಕಾರ್ಮಿಕರ ಜೀವನ ಮಟ್ಟ ಸುಧಾರಿಸುವ ನಿಟ್ಟಿನಲ್ಲಿ ಸಾವಿರ ಬೀಡಿಗೆ ರೂ.30 ಕನಿಷ್ಠ ಕೂಲಿಯನ್ನು ಜಾರಿಗೊಳಿಸಬೇಕೆಂದು ಕೇಂದ್ರ ಹಾಗೂ ರಾಜ್ಯ ಸರಕಾರಗಳೆರಡನ್ನೂ ಒತ್ತಾಯಿಸಿದೆ. 1985 ಡಿಸೆಂಬರ್ ತಿಂಗಳಲ್ಲಿ ಹೋರಾಟದ ಮೂಲಕ ಹೆಚ್ಚಳವಾಗಿ ಪಡೆದ 80 ಪೈಸೆ ಮುಜೂರಿಯೂ ಸೇರಿದಂತೆ ಒಟ್ಟು ರೂ.9.60 ಕನಿಷ್ಠ ಕೂಲಿಯನ್ನು ಮಾತ್ರ ಪಡೆಯುವ ಬೀಡಿಕಾರ್ಮಿಕರು, ಅವಶ್ಯಕ ವಸ್ತುಗಳ ಬೆಲೆಯು ಗಗನಕ್ಕೇರುತ್ತಿರುವ ಈ ಸಂದರ್ಭದಲ್ಲಿ ಕನಿಷ್ಠ ಕೂಲಿಗಾಗಿ ಹೋರಾಟಕ್ಕೆ ಮುಂದಾಗಬೇಕೆಂದು ಸಂಘ ಕರೆ ನೀಡಿದೆ.

ಕೆ. ನಾರಾಯಣ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಸೇರಿದ ಮಹಾಸಭೆಯಲ್ಲಿ ಮುಖ್ಯ ಅತಿಥಿಯಾಗಿ ದ.ಕ.ಜಿಲ್ಲಾ ಸಿಐಟಿಯು ಕಾರ್ಯದರ್ಶಿ ಬಿ. ಮಾಧವ ಮಾತನಾಡಿದರು.

Printed and published by [illegible]

ಸೋವಿಯತ್ ಒಕ್ಕೂಟ ಮಾರುಕಟ್ಟೆ ಆರ್ಥಿಕತೆಯತ್ತ

28ನೇ ಮಹಾಧಿವೇಶನದಲ್ಲಿ ಸೋವಿಯತ್ ಕಮ್ಯುನಿಸ್ಟ್ ಪಕ್ಷ ಆರ್ಥಿಕ ಸುಧಾರಣೆಗಳು ಮತ್ತು ಮಾರುಕಟ್ಟೆ ಆರ್ಥಿಕತೆಯತ್ತ ಹಂತಹಂತವಾಗಿ ಹೋಗುವ ಬಗ್ಗೆ ನಿರ್ಣಯಗಳನ್ನು ತೆಗೆದುಕೊಂಡಿತ್ತು. ಈ ಯೋಜನೆಯ ವಿವರಗಳ ಬಗ್ಗೆ ಪಕ್ಷದೊಳಗೆ, ದೇಶದ ಚುನಾಯಿತ ಸಂಘಟನೆಗಳಲ್ಲಿ, ರಾಜಕೀಯ ಶಕ್ತಿಗಳಲ್ಲಿ ಭಾರಿ ಭಿನ್ನಾಭಿಪ್ರಾಯ ಕಂಡುಬಂದಿದೆ. ಮಾರುಕಟ್ಟೆ ಆರ್ಥಿಕತೆಯತ್ತ ಹೋಗುವ ಕ್ರಮಗಳು, ಅದರ ವೇಳಾಪಟ್ಟಿ, ತೀವ್ರತೆ ಬೇರೆ ಬೇರೆಯಾಗಿರುವ ಹಲವಾರು ಯೋಜನೆಗಳನ್ನು ಮಂಡಿಸಲಾಗಿದೆ. ಸೋವಿಯತ್ ಕೇಂದ್ರ ಸರಕಾರ ಮೇನಲ್ಲಿ ಒಂದು ಯೋಜನೆಯನ್ನು ಸುಪ್ರಿಂ ಸೋವಿಯತ್(ಸೋವಿಯತ್ ಪಾರ್ಲಿಮೆಂಟ್) ಮುಂದೆ ಮಂಡಿಸಿತ್ತು. ಇದರ ಪ್ರಕಾರ ವರ್ಷದ ಕೊನೆಯೊಳಗೆ ಮಾರುಕಟ್ಟೆ ಆರ್ಥಿಕತೆಗೆ ಅಗತ್ಯ ಕಾನೂನಿನ ಚೌಕಟ್ಟು ಸಿದ್ಧಪಡಿಸುವುದು, ಎರಡು ವರ್ಷಗಳಲ್ಲಿ ಬೆಲೆ ನಿರ್ಧಾರ, ತೆರಿಗೆ ಮತ್ತು ಸಾಲಕ್ಕೆ ಸಂಬಂಧಪಟ್ಟ ಸುಧಾರಣೆಗಳು, ಹಾಗೂ ಮಾರುಕಟ್ಟೆಗೆ ವಸ್ತು ಮತ್ತು ಆರ್ಥಿಕ ಅಡಿಪಾಯದ ನಿರ್ಮಾಣ, ಮತ್ತೆ ಮೂರು ವರ್ಷಗಳಲ್ಲಿ ಅಭಿವೃದ್ಧಿ ಮಾರುಕಟ್ಟೆ ಆರ್ಥಿಕತೆಯ ಪೂರ್ಣ ಬೆಳವಣಿಗೆ. ಆದರೆ ಈ ಯೋಜನೆಯನ್ನು ಮಂಡಿಸಿದಾಗ, ಈ ಯೋಜನೆಯ ಭಾಗವಾಗಿದ್ದ ಬೆಲೆಯೇರಿಕೆ ಬಗ್ಗೆ ಭಾರಿ ವಿರೋಧ ಕಂಡು ಬಂತು. ಸುಪ್ರಿಂ ಸೋವಿಯತ್ ಈ ಯೋಜನೆ ಬಗ್ಗೆ ವಿವರವಾಗಿ ಚರ್ಚಿಸಿತು. ಈ ಚರ್ಚೆಯ ಮತ್ತು ಸೋವಿಯತ್ ಒಕ್ಕೂಟದ ಅಂಗ ಗಣರಾಜ್ಯಗಳು ಮತ್ತು ಸ್ವಾಯತ್ತ ಪ್ರದೇಶಗಳ ಸುಪ್ರಿಂ ಸೋವಿಯತ್‌ಗಳು ಈ ಬಗ್ಗೆ ಮಾಡಿದ ಶಿಫಾರಸುಗಳ ಆಧಾರದ ಮೇಲೆ ಸೆಪ್ಟೆಂಬರ್‌ನಲ್ಲಿ ಒಂದು ಹೊಸ ಯೋಜನೆ ಮಂಡಿಸಬೇಕೆಂದು ಸೋವಿಯತ್ ಕೇಂದ್ರ ಸರಕಾರಕ್ಕೆ ಆದೇಶ ನೀಡಿತು.

ಈ ನಡುವೆ ಕೆಲವು ಅಗತ್ಯ ಕಾನೂನುಗಳನ್ನು ಆಗಲೇ ಸರಕಾರ ಮಂಡಿಸಿದೆ. 28 ನೇ ಮಹಾಧಿವೇಶನದ ನಿರ್ಣಯದ ಪ್ರಕಾರ, ಇನ್ನೊಂದು ಪ್ರಮುಖ ನಿರ್ಣಯ ಸೋವಿಯತ್ ಒಕ್ಕೂಟದ ರಚನೆ ಬಗ್ಗೆ ಹೊಸ ಒಪ್ಪಂದ ರೂಪಿಸುವುದು. ಇದು ಮತ್ತು ಒಕ್ಕೂಟವನ್ನು ಒಂದು ಸಮಗ್ರ ಐಕ್ಯ ಮಾರುಕಟ್ಟೆಯಾಗಿಸುವ ಯೋಜನೆ ಒಂದೇ ನಾಣ್ಯದ ಎರಡು ಮುಖಗಳು ಎಂದು ಗೋರ್ಬಚೇವ್ ನುಡಿದಿದ್ದಾರೆ. ಈ ಬಗ್ಗೆ ಸರಕಾರದ ನೀತಿಗಳಿಗೆ ಭಾರಿ ಅಡೆತಡೆ ಬಂದಿದೆ. ಮೂರು ಬಾಲ್ಟಿಕ್ ಗಣರಾಜ್ಯಗಳು, ಒಕ್ಕೂಟದಿಂದ ಹೊರಹೋಗುವ ನಿರ್ಣಯ ತೆಗೆದುಕೊಂಡಿದ್ದಲ್ಲದೆ, ಇನ್ನು ನಾಲ್ಕು ಗಣರಾಜ್ಯಗಳು ತಮ್ಮದು ಸರ್ವತಂತ್ರ ಗಣರಾಜ್ಯಗಳು , ತಮ್ಮ ಗಣರಾಜ್ಯದ ಕಾನೂನುಗಳು ಒಕ್ಕೂಟದ ಕಾನೂನುಗಳನ್ನು ಮೀರಿದ್ದು, ಕೆಲವು ಒಕ್ಕೂಟದ ಕಾನೂನುಗಳು ತಮಗೆ ಅನ್ವಯಿಸುವುದಿಲ್ಲ ಎಂಬ ನಿರ್ಣಯ ತೆಗೆದುಕೊಂಡಿದೆ. ಇದರಲ್ಲಿ ಅತ್ಯಂತ ದೊಡ್ಡ ರಷ್ಯನ್ ಗಣರಾಜ್ಯವೂ ಸೇರಿದೆ. ಕೆಲವು ನಗರಗಳ ಸೋವಿಯತ್‌ಗಳೂ ಇಂತಹ ಕ್ರಮ ತೆಗೆದುಕೊಂಡಿದೆ. ಆರ್ಥಿಕ ಸುಧಾರಣೆಗಳಲ್ಲೂ ಈ ಗಣರಾಜ್ಯಗಳು ತಮಗೆ ಮನಬಂದಂತೆ ಕೆಲವು ಕ್ರಮಗಳನ್ನು ಕೈಗೊಂಡು ಆರ್ಥಿಕ ಅರಾಜಕತೆಗೆ ಎಡೆಕೊಟ್ಟಿದೆ. ಇವು ಹೆಚ್ಚಾಗಿ ಆಗಿರುವುದು, ಸಮಾಜವಾದಿ ಆಯ್ಕೆಗೆ ಬದ್ಧರಾಗಿರದ ರಾಜಕೀಯ ಶಕ್ತಿಗಳ ಒತ್ತಡದಿಂದ . ಇವಕ್ಕೆ ಒಂದು ಹೊಸ ಸುಭದ್ರ ಆರ್ಥಿಕ-ರಾಜಕೀಯ ತಳಹದಿಯಲ್ಲಿ ಸೋವಿಯತ್ ಒಕ್ಕೂಟ ಆಗುವುದು ಬೇಕಾಗಿಲ್ಲ. ಆದ್ದರಿಂದ ಈ ಯೋಜನೆಗಳನ್ನು ಬೇರೆಬೇರೆ ಹೆಸರಲ್ಲಿ ಟೀಕಿಸಿ, ಅದು ಆಗಗೊಡದಂತೆ ಪ್ರಯತ್ನಿಸುತ್ತಿದ್ದಾರೆ. ರಷ್ಯನ್ ಅಧ್ಯಕ್ಷ ಯೆಲ್ಟ್‌ಸಿನ್ ಒಂದು ಕಡೆ ಕೇಂದ್ರ ಸರಕಾರದ ಬೆಲೆ ಏರಿಸುವ ಕ್ರಮವನ್ನು ಬಲವಾಗಿ ವಿರೋಧಿಸಿ, ಜನಪ್ರಿಯತೆ ಗಿಟ್ಟಿಸಿಕೊಂಡರೆ, ತಮ್ಮ ಗಣರಾಜ್ಯದಲ್ಲಿ ಮನಬಂದಂತೆ ಬೆಲೆಗಳನ್ನು ಏರಿಸುತ್ತಿದ್ದಾರೆ. ಇವರು 300 ದಿನಗಳ ಮಾರುಕಟ್ಟೆ ಯೋಜನೆಯನ್ನು ಕೇಂದ್ರ ಸರಕಾರದ ಮೇಲೆ ಹೊರಿಸಲು ಪ್ರಯತ್ನಿಸಿದರು.

ಶಟಾಲಿನ್ ಎಂಬ ಆರ್ಥಿಕತಜ್ಞನ ನಾಯಕತ್ವದ ಸಮಿತಿ 500 ದಿನಗಳಲ್ಲಿ ಮಾರುಕಟ್ಟೆ ಯೋಜನೆ ಮುಂದಿಟ್ಟಿದ್ದು ಅಧ್ಯಕ್ಷ ಗೋರ್ಬಚೇವ್ ಸೇರಿದಂತೆ ದೇಶದೊಳಗಿನ ಸಾಮಾನ್ಯ ಜನಾಭಿಪ್ರಾಯ ಇದಕ್ಕೆ ಪರವಾಗಿದ್ದ ಹಾಗೆ ಕಾಣುತ್ತದೆ. ಈ ಮೊದಲು ಗೋರ್ಬಚೇವ್-ಯೆಲ್ಟ್‌ಸಿನ್ ಮಾತುಕತೆಗಳು ನಡೆದಿದ್ದು, ಯೆಲ್ಟ್‌ಸಿನ್ ಗುಂಪು ಇದಕ್ಕೆ ಒಪ್ಪುವ ಸಾಧ್ಯತೆ ಇದೆ. ಈ ವರದಿಯನ್ನು ಸುಪ್ರಿಂ ಸೋವಿಯತ್ ಮುಂದೆ ಮಂಡಿಸಲಾಗಿದ್ದು, ಇದು ಹಿಂದೆ ಪ್ರಧಾನಿ ರಿಝ್‌ಕೊವ್ ಮಂಡಿಸಿದ ಯೋಜನೆಗಿಂತ ತೀವ್ರವಾದ ಯೋಜನೆ. ಇದರಿಂದ ರಿಝ್‌ಕೊವ್ ಯೋಜನೆ ತಿರಸ್ಕರಿಸಿದಂತೆ ಆಗಿರುವುದರಿಂದ, ಸರಕಾರ ರಾಜಿನಾಮೆ ಕೊಡಬೇಕೆಂದು ವಿರೋಧಿಗಳು ಒತ್ತಾಯಿಸುತ್ತಿದ್ದಾರೆ. ಇದನ್ನು ಗೋರ್ಬಚೇವ್ ತಳ್ಳಿಹಾಕಿದ್ದು ರಾಷ್ಟ್ರೀಯ ಒಮ್ಮತ ರೂಪಿಸಿ ಅದನ್ನು ಜಾರಿಗೆ ತರಲು ಸರಕಾರ ಸುಭದ್ರತೆ ಅಗತ್ಯ ಎಂದು ಒತ್ತಿ ಹೇಳಿದ್ದಾರೆ. ಬಹಳ ವಿವಾದಾಸ್ಪದವಾಗಿರುವ 'ಭೂಮಿ ಆಸ್ತಿ ಒಡೆತನ'ದ ಕಾನೂನು ಬಗ್ಗೆ ಒಮ್ಮತ ರೂಪಿತವಾಗಿಲ್ಲದೆ ಇರುವುದರಿಂದ, ರಾಷ್ಟ್ರೀಯ ಮತಸಂಗ್ರಹ ಈ ಬಗ್ಗೆ ನಡೆಸಬೇಕೆಂದು ಅಧ್ಯಕ್ಷ ಗೋರ್ಬಚೇವ್ ಸುಪ್ರಿಂ ಸೋವಿಯತ್‌ಗೆ ಸಲಹೆ ಮಾಡಿದ್ದಾರೆ.

128 ಅಮೇರಿಕನ್ ನೆಲೆಗಳು ಬಂದ್

ವಾರ್ಸಾ ಬಣದ ಏಕಪಕ್ಷೀಯ ನಿಶ್ಶಸ್ತ್ರೀಕರಣದ ಪ್ರಸ್ತಾಪಗಳಿಗೆ ಅತ್ಯಂತ ವಿಳಂಬಿತ ಪ್ರತಿಕ್ರಿಯೆಯಾಗಿ, ಅಮೇರಿಕ ಎಂಟು ದೇಶಗಳಲ್ಲಿ 128 ಅಮೇರಿಕನ್ ಸೇನಾ ನೆಲೆಗಳನ್ನು ಮುಚ್ಚುವುದು ಮತ್ತು 23 ನೆಲೆಗಳ ಕಾರ್ಯಾಚರಣೆಗಳಲ್ಲಿ ತೀವ್ರ ಕಡಿತ ಮಾಡುವುದು ಎಂದು ರಕ್ಷಣಾ ಮಂತ್ರಿ ಪ್ರಕಟಿಸಿದ್ದಾರೆ.

ಇವುಗಳಲ್ಲಿ 95 ಪಶ್ಚಿಮ ಜರ್ಮನಿಯಲ್ಲಿ, ಹನ್ನೊಂದು ಸ್ಪೇನ್‌ನಲ್ಲಿ, ಒಂಬತ್ತು ದ. ಕೋರಿಯಾದಲ್ಲಿ, ತಲಾ ಮೂರು ಗ್ರೀಸ್, ಇಟಲಿ, ಬ್ರಿಟನ್, ಆಸ್ಟ್ರೇಲಿಯಾಗಳಲ್ಲಿ ಮತ್ತು ಒಂದು ಜಪಾನ್‌ನಲ್ಲಿ ಇವೆ.

ಈ ನಿರ್ಧಾರ ಸ್ವಾಗತಾರ್ಹವಾದರೂ ನೆಲೆಗಳ ಕಡಿತ, ಶಸ್ತ್ರಾಸ್ತ್ರ ಅಥವಾ ಪಡೆಗಳ ಕಡಿತವಲ್ಲವೆಂದು ನೆನಪಿನಲ್ಲಿಡಬೇಕು. ಇದು ಕೇವಲ ಶಸ್ತ್ರಾಸ್ತ್ರ, ಪಡೆಗಳ ಪುನರ್ ಹಂಚಿಕೆಯೂ ಇರಬಹುದು. ಅಥವಾ ಕೊಲ್ಲಿಯ ಬಿಕ್ಕಟ್ಟಿನ ಮಿಲಿಟರಿ ಪರಿಣಾಮವೂ ಇರಬಹುದು. ಅಮೇರಿಕನ್ ಮಿಲಿಟರಿ ಆಧಿಪತ್ಯ ಉಳಿಸಿಕೊಳ್ಳಲು, ಬದಲಾದ ಸನ್ನಿವೇಶದಲ್ಲಿ ಹೊಸ ಮಿಲಿಟರಿ ರಣನೀತಿಯೂ ಆಗಿರಬಹುದು.

ಸದ್ಯಕ್ಕೆ ಅಮೇರಿಕನ್ ಪಡೆಗಳು ಕೊಲ್ಲಿಯಲ್ಲಿದೆ. ಆಫ್ರಿಕಾದ ಲೈಬೀರಿಯಾದಲ್ಲಿ ಪಡೆಗಳನ್ನು ಕಳಿಸಿತ್ತು. ಲೈಬೀರಿಯಾದಲ್ಲಿ ನಡೆಯುತ್ತಿದ್ದ ಅಂತರ್ಯುದ್ಧದಲ್ಲಿ ಅದು ಪಕ್ಷ ವಹಿಸಿದ್ದು, ಅಮೇರಿಕನ್ ಪ್ರಜೆಗಳನ್ನು ತೆರವು ಮಾಡುವ ನೆವದಲ್ಲಿ ಮೇರಿನ್ ಪಡೆಗಳನ್ನು ಕಳುಹಿಸಿತ್ತು. ಅದೂ ಪಶ್ಚಿಮ ಆಫ್ರಿಕಾದ ನಾಯಕರುಗಳು ಈ ಅಂತರ್ಯುದ್ಧದ ಬಗ್ಗೆ ಶಾಂತಿ ಸೂತ್ರಗಳನ್ನು ರೂಪಿಸಲು ಸೇರಿದಾಗಲೇ ಈ ಮಧ್ಯ ಪ್ರವೇಶ ನಡೆದಿದೆ.

ಲೋಕಸಂಚಾರ

ಇರಾಕ್ ಏಷ್ಯಾಡ್‌ನಿಂದ ಹೊರಕ್ಕೆ

ಕೊಲ್ಲಿ ಬಿಕ್ಕಟ್ಟು ಮುಂದುವರಿದಿದ್ದು, ಶಾಂತಿಯುತವಾಗಿ ಬಗೆಹರಿಯುವ ಯಾವುದೇ ಆಶಾದಾಯಕ ಸೂಚನೆಗಳಿಲ್ಲ. ಇರಾಕ್ ಮತ್ತು ಪಾಶ್ಚಿಮಾತ್ಯ ದೇಶಗಳ ನಡುವೆ ರಾಯಭಾರಿಗಳನ್ನು ದೇಶದಿಂದ ಹೊರಕ್ಕೆ ಹಾಕುವ ಸ್ಪರ್ಧೆ ನಡೆದಿದ್ದು ಕಹಿಯಾದ 'ಶೀತ ಸಮರ'ಕ್ಕೆ ಎಡೆಮಾಡಿದೆ. ಈ ನಡುವೆ ಅಮೇರಿಕನ್ ವಾಯುದಳದ ಮುಖ್ಯಸ್ಥ ಯುದ್ಧ ನಡೆದರೆ ಬಾಗ್ದಾದ್ ಅನ್ನು ನಿರ್ನಾಮ ಮಾಡುವುದಲ್ಲದೆ, ಸದ್ದಾಂ ಹುಸೇನ್‌ರನ್ನು ಇಲ್ಲದಂತೆ ಮಾಡುತ್ತೇನೆ ಎಂಬ ಅತ್ಯಂತ ಪ್ರಚೋದನಕಾರಿ ಹೇಳಿಕೆ, ಅಮೇರಿಕ ಸರ್ಕಾರವನ್ನೇ ಬೆಸ್ತುಗೊಳಿಸಿತ್ತು. ಈ ರೀತಿ ಹೇಳುವ 'ಹಕ್ಕು'ಅವರಿಗಿಲ್ಲ ಎಂಬ ಕಾರಣದ ಮೇಲೆ ವಜಾ ಮಾಡಲಾಗಿದೆ.

ಇರಾಕ್‌ಗೆ ಆರ್ಥಿಕ ದಿಗ್ಬಂಧನದ ಕಹಿ ಅನುಭವವಾಗಲು ಆರಂಭಿಸಿದ್ದು, ಅದರಿಂದ ತಪ್ಪಿಸಿಕೊಳ್ಳಲು ಬೇರೆಬೇರೆ ದಾರಿಗಳನ್ನು ಹುಡುಕುತ್ತಿದೆ. ಇರಾನ್ ಮತ್ತು ಜೋರ್ಡಾನ್ ಈ ಆರ್ಥಿಕ ದಿಗ್ಬಂಧನದ ಕಣ್ತಪ್ಪಿಸಿ ಇರಾಕ್‌ಗೆ ಸಹಾಯವಾಗುವ ಸಾಧ್ಯತೆ ಇದೆ. ಜೋರ್ಡಾನ್, ಈ ಸಂದರ್ಭದಲ್ಲಿ ತಾನು ಇರಾಕ್‌ನಿಂದ ತೈಲ ಪಡೆಯದೆ ದಾರಿಯಿಲ್ಲ ಎಂದಿದೆ.

ಕುವೈತ್-ಸೌದಿ ಅರೇಬಿಯಾ ಗಡಿ ತೆರೆದಿದ್ದು, ಇರಾಕ್ ಕುವೈತ್‌ನ ಜನಸಂಖ್ಯಾ ಪ್ರಮಾಣದಲ್ಲೇ ಬದಲಾವಣೆ ಮಾಡಲು ಪ್ರಯತ್ನಿಸುತ್ತಿರುವಂತಿದೆ. ಈಗಾಗಲೇ ಸುಮಾರು ಮೂರು ಸಾವಿರ ಕುವೈತಿ ಶ್ರೀಮಂತ ಕುಟುಂಬಗಳು ಸೌದಿ ಅರೇಬಿಯಾಕ್ಕೆ ಹೋಗಿವೆ.

ಏಷ್ಯಾಡ್ ಒಲಂಪಿಕ್ ಸಮಿತಿ ಇರಾಕ್‌ಗೆ ಬೀಜಿಂಗ್ ಏಷ್ಯಾಡ್ ಕ್ರೀಡೆಗಳಲ್ಲಿ ಭಾಗವಹಿಸಲು ಅನುಮತಿ ನಿರಾಕರಿಸಿದ್ದು, ವಿಶ್ವಸಂಸ್ಥೆ ಮಾಡುಬದಿಗ್ಬಂಧನ ಹಾಕುವ ನಿರ್ಣಯದ ಬಗ್ಗೆ ಚರ್ಚೆ ನಡೆದಿದೆ.

ಫ್ರಾನ್ಸ್ ಅಣ್ವಸ್ತ್ರ ಪ್ರಯೋಗ ಬಿಟ್ಟುಕೊಡದು

ಸೋವಿಯತ್‌ಬಹಳ ಹಿಂದೆಯೇ ಅಣ್ವಸ್ತ್ರವನ್ನು ತಾನು ಪ್ರಥಮವಾಗಿ ಪ್ರಯೋಗಿಸುವುದಿಲ್ಲ ಎಂಬ ಹೇಳಿಕೆಯ ಹಲವು ವರ್ಷಗಳ ನಂತರ ತಡವಾಗಿಯಾದರೂ, ಇತ್ತೀಚೆಗೆ ನ್ಯಾಟೋ ಅಣ್ವಸ್ತ್ರ ಪ್ರಯೋಗ ಕೊನೆಯ ದಾರಿ ಎಂದು ಘೋಷಿಸಿತು . ಆದರೆ ಇದನ್ನು ಹೇಳಲೂ ಫ್ರಾನ್ಸ್ ತಯಾರಿಲ್ಲ.ಫ್ರಾನ್ಸ್ ನ್ಯಾಟೋ ಮಿಲಿಟರಿ ಕೂಟದ ಭಾಗ ವಲ್ಲದಿದ್ದರೂ, ನ್ಯಾಟೋದ ಜತೆ ನಿಕಟ ಸಂಬಂಧ ಇರಿಸಿಕೊಂಡಿದೆ. ಈಗ ನಡೆಯುತ್ತಿರುವ ಬೆಳವಣಿಗೆಗಳ ದೃಷ್ಟಿಯಿಂದ, ಯೂರೋಪ್‌ನಲ್ಲಿ ಮಿಲಿಟರಿ ನಿರ್ವಾತ ಉಂಟಾಗುವ ಸಂಭವವಿದ್ದು ಇದು ಬಾಹ್ಯ ಹಸ್ತಕ್ಷೇಪಕ್ಕೆ ಎಡೆ ಮಾಡಿಕೊಡುತ್ತದೆ. ಆದ್ದರಿಂದ ಫ್ರಾನ್ಸ್‌ನ 'ಅಣ್ವಸ್ತ್ರ'ದ ಮೇಲೆ ಅವಲಂಬನೆ ವೈರಿಗಳನ್ನು ಹಿಂದೂಡಲು ಮುಂದುವರಿಯುತ್ತದೆ ಎಂದಿದೆ.

ಸ್ಯಾಂಡಿನಿಸ್ತಾ ನಿಲುವಿಗೆ ಚಮೋರೋ ಸಮರ್ಥನೆ!

ನಿಕರಾಗುವದ ಹಿಂದಿನ ಸ್ಯಾಂಡಿನಿಸ್ತಾ ಸರಕಾರ , ವಿಶ್ವ ಕೋರ್ಟ್‌ನಲ್ಲಿ ಅಮೇರಿಕ ತನಗೆ 12 ಶತಕೋಟಿ ಡಾಲರು ಪರಿಹಾರ ಧನ ನೀಡಬೇಕೆಂದು ವಾದಿಸಿ ಕೇಸು ಗೆದ್ದಿತ್ತು. ಇದನ್ನು ಅಂಶಿಕವಾಗಿಯಾದರೂ ಅಮೇರಿಕನ್ ಸರಕಾರ ಕೊಡಬೇಕೆಂದು ಅಧ್ಯಕ್ಷ ಚಮೋರೋ ಸರಕಾರ ಒತ್ತಾಯಮಾಡಿರುವುದು ಮೊದಲ ನೋಟಕ್ಕೆ ಆಶ್ಚರ್ಯ ಜನಕ ಎನ್ನಿಸಬಹುದು.

1984ರಲ್ಲಿ ಅಮೇರಿಕ ನಿಕರಾಗುವದ ಮೇಲೆ ಆರ್ಥಿಕ ದಿಗ್ಬಂಧನ ವಿಧಿಸಲು, ಅದರ ಬಂದರುಗಳಲ್ಲಿ ಮೈನ್‌ಗಳನ್ನು ಹಾಕಿತ್ತು. ಇದು ಮತ್ತು ಕಾಂಟ್ರಾಗಳಿಗ ಇರಾಕ್- ಇರಾನ್ ಯುದ್ಧಕ್ಕೆ ಮಿಲಿಟರಿ ಮಾರಾಟದ 'ಕಪ್ಪ ಹಣ'ಬಳಸಿದ್ದರ ಬಗ್ಗೆ, ಸ್ಯಾಂಡಿನಿಸ್ತಾ ಸರಕಾರ ವಿಶ್ವಕೋರ್ಟ್‌ನಲ್ಲಿ ಕೇಸು ಹಾಕಿತ್ತು.ಇದರಿಂದ ನಿಕರಾಗುವಕ್ಕೆ ಆಗಿರುವ ಆರ್ಥಿಕ ನಷ್ಟವನ್ನು ತುಂಬಿಕೊಳ್ಳಲು 12 ಶತಕೋಟಿ ಡಾಲರುಗಳು ಪರಿಹಾರ ನೀಡಬೇಕೆಂದು ನಿಕರಾಗುವದ ಕೇಳಿಕೆಯನ್ನು ವಿಶ್ವಕೋರ್ಟ್ 1988ರಲ್ಲಿ ಎತ್ತಿಹಿಡಿಯಿತು.

ಅಧ್ಯಕ್ಷ ಚಮೋರೋ ಸರಕಾರ ಈ ಬಗ್ಗೆ ಈವರೆಗೆ ಚಕಾರವೆತ್ತಿರಲಿಲ್ಲ. ಅಮೇರಿಕದ ಬೆಂಬಲದಿಂದ ಬದುಕಿಕೊಂಡಿರುವ ಈ ಸರಕಾರ ಇಂತಹ ದಾರ್ಢ್ಯ ತೋರಿಸಿರುವುದು ಅತ್ಯಂತ ಅರ್ಥಪೂರ್ಣವಾದದ್ದು. ಇದು ಸಾಧ್ಯವಾಗಿರುವುದು ಅತ್ಯಂತ ಅರ್ಥಪೂರ್ಣವಾದದ್ದು. ಇದು ಸಾಧ್ಯವಾಗಿರುವುದು ಮುಖ್ಯವಾಗಿ ಎರಡು ಕಾರಣಗಳಿಂದ. ಮೊದಲನೆಯದಾಗಿ ನಿಕರಾಗುವದ ಆರ್ಥಿಕತೆ ದುರ್ಬರ ಸ್ಥಿತಿಯಲ್ಲಿದೆ. ಶೇಕಡಾ 22 ನಿರುದ್ಯೋಗ ಮತ್ತು ಶೇಕಡಾ 3000 ಹಣದುಬ್ಬರ! ಎರಡನೆಯದಾಗಿ ಈಗ ವಿರೋಧ ಪಕ್ಷವಾಗಿರುವ ಸ್ಯಾಂಡಿನಿಸ್ತಾಗಳ ಈ ಸರ್ಕಾರ ಅಮೇರಿಕದ ಸ್ವಲ್ಪ ಸಹಾಯಧನಕ್ಕೆ ಪ್ರತಿಯಾಗಿ ಈ ಪರಿಹಾರ ಧನದ ಹಕ್ಕನ್ನು ಏಕಪಕ್ಷೀಯವಾಗಿ ಬಿಟ್ಟುಕೊಡಲು ತಯಾರಾಗಿದೆ ಎಂಬ ರಾಜಕೀಯ ಪ್ರಚಾರವನ್ನು ಎದುರಿಸಲು.

ಪಾಶ್ಚಿಮಾತ್ಯ ದೇಶಗಳಲ್ಲಿ ಬಿಕ್ಕಟ್ಟು

ಸಾಮ್ರಾಜ್ಯಶಾಹಿ ಮಾಧ್ಯಮ ಎಷ್ಟೇ ಪಾಶ್ಚಿಮಾತ್ಯ ದೇಶಗಳನ್ನು ಹಾಲು ಜೇನು ಹರಿಯುವ ದೇಶ ಎಂದು ಬಿಂಬಿಸಲು ಪ್ರಯತ್ನಿಸಿದರೂ,ಹಲವೊಮ್ಮೆ ನಿಜ ಹೇಳಲೇಬೇಕಾಗುತ್ತದೆ.

ನ್ಯುಯಾರ್ಕ್ ಟೈಮ್ಸ್ ವರದಿಯೊಂದರ ಪ್ರಕಾರ ಅಮೇರಿಕದ 16 ರಾಜ್ಯಗಳು ತೀವ್ರ ಆರ್ಥಿಕ ಹಿಂಜರಿತ ಅನುಭವಿಸುತ್ತಿವೆ ಎಂದಿದೆ. ಒಟ್ಟು ಉತ್ಪಾದನೆಯಲ್ಲಿ ಇಳಿತ ಮತ್ತು ನಿರುದ್ಯೋಗದಲ್ಲಿ ಏರಿಕೆ ಪುನರಾವರ್ತನೆಯಾಗುತ್ತಾ ಹೋದರೆ ಅದನ್ನು ಹಿಂಜರಿತ ಎಂದು ಕರೆಯಲಾಗುತ್ತದೆ.

ಕೇಂದ್ರಸರಕಾರದ ಮುಂದಿನ ವರ್ಷದ ಬಜೆಟ್ ಖೋತಾ 68.3 ಶತಕೋಟಿ ಡಾಲರುಗಳ ಬದಲು, 168.8 ಶತಕೋಟಿ ಡಾಲರುಗಳಿಗೆ ಏರಿದೆ. ಸಮತೋಲನದ ಬಜೆಟ್ ಆರ್ಥಿಕ ನಿಯಮದ ಪ್ರಕಾರ 64 ಶತಕೋಟಿ ಡಾಲರುಗಳಿಗಿಂತ ಹೆಚ್ಚಿಗೆ ಖೋತಾ ಇರಕೂಡದು. ಈ ನಿಯಮ ಪಾಲಿಸಬೇಕಾದರೆ, ಬುಶ್ ಆಡಳಿತಕ್ಕೆ ಒಂದೇ ಇರುವ ದಾರಿಯೆಂದರೆ 100 ಶತಕೋಟಿ ಡಾಲರುಗಳಷ್ಟು ಖರ್ಚು ಕಡಿಮೆ ಮಾಡುವುದು. ಅಂದರೆ ಇಡೀ ದೇಶಾದ್ಯಂತ ತೀವ್ರ ಆರ್ಥಿಕ ಹಿಂಜರಿತಕ್ಕೆ ಆಹ್ವಾನ.

ಪಶ್ಚಿಮ ಯೂರೋಪಿಯನ್ ಸಮುದಾಯದ ದೇಶಗಳಲ್ಲಿ ಬಡತನ ಏರುತ್ತಿದೆ. ಬಡವರ ಮತ್ತು ಶ್ರೀಮಂತರ ನಡುವೆ ಅಂತರ ಇನ್ನೂ ಹೆಚ್ಚಾಗುತ್ತಿದೆ ಎಂದು ಇನ್ನೊಂದು ವರದಿ ಹೇಳಿದೆ. ಅವರದೇ ನಿರ್ದೇಶಿಕೆಯ 'ಬಡತನ'ದ ಪ್ರಕಾರ, ಬಡವರ ಸಂಖ್ಯೆ 3.8ಕೋಟಿಯಿಂದ 4.4ಕೋಟಿ ಏರಿದೆ. ಇದೇ ರೀತಿ ಮನೆಯಿಲ್ಲದವರ ಸಂಖ್ಯೆ ಏರುತ್ತಿದೆ. 1988ರಲ್ಲಿ ಅದು ಹತ್ತು ಲಕ್ಷವಾಗಿತ್ತು. ಈಗಿನ ನಿರುದ್ಯೋಗ ದರ ಶೇಕಡಾ 8.5 ಎಂದರೆ ಒಂದು ಕಾಲು ಕೋಟಿ. ದೀರ್ಘಕಾಲದ ನಿರುದ್ಯೋಗವು 19[illegible] ರಲ್ಲಿ ಶೇಕಡಾ37ರಿಂದ 1988 ರಲ್ಲಿ ಶೇಕಡಾ 53ಕ್ಕೇರಿದೆ. ಮಹಿಳಾ ಉದ್ಯೋಗಿಗಳ ಸಂಖ್ಯೆ ಶೇಕಡಾ 38 ಆಗಿದ್ದರೂ ಇದರಲ್ಲಿ ಭಾರಿ ದೊಡ್ಡ ಪ್ರಮಾಣದಲ್ಲಿ ಪಾರ್ಟ್ ಟೈಂ ಅಥವಾ ತಾತ್ಕಾಲಿಕ ಉದ್ಯೋಗಿಗಳು. ಹೆಚ್ಚು ಕಡಿಮೆ ಎಲ್ಲಾ ದೇಶಗಳಲ್ಲಿ ಮಹಿಳೆಯರಿಗೆ ಪುರುಷರಿಗಿಂತ ಇನ್ನೂ ಕಡಿಮೆ ವೇತನ ದೊರೆಯುತ್ತಿದೆ.

ಸೋವಿಯತ್ ಕಮ್ಯುನಿಸ್ಟ್ ಪಕ್ಷದ ಸದಸ್ಯರ ಸಂಖ್ಯೆಯಲ್ಲಿ ಇಳಿತ

ಈ ವರ್ಷದ ಮೊದಲ 6 ತಿಂಗಳಲ್ಲಿ ಸೋವಿಯತ್ ಕಮ್ಯುನಿಸ್ಟ್ ಪಕ್ಷದ ಸದಸ್ಯರ ಸಂಖ್ಯೆ ಇಳಿಮುಖವಾಗಿದೆಯಂತೆ. ಈ ಅವಧಿಯಲ್ಲಿ ಪಕ್ಷ ಬಿಟ್ಟವರ ಸಂಖ್ಯೆ 3.7 ಲಕ್ಷ. ಇದರಲ್ಲಿ ಅರ್ಧಕ್ಕರ್ಧ ಕಾರ್ಮಿಕರು , ಇನ್ನು ಕಾಲು ಭಾಗ ಬುದ್ಧಿಜೀವಿಗಳು, ಉಳಿದವರು ಪಿಂಚಣಿದಾರರು. ಆದರೆ ಈ ಅವಧಿಯಲ್ಲಿ 1.2 ಲಕ್ಷ ಹೊಸ ಸದಸ್ಯರು ಪಕ್ಷಕ್ಕೆ ಸೇರಿದ್ದಾರೆ. ಇದರಲ್ಲಿ ಅರ್ಧದಷ್ಟು ರೈತ ಕಾರ್ಮಿಕರು ಇದ್ದಾರೆ. ಆದರೆ ಹೊಸ ಸದಸ್ಯರಲ್ಲಿ ಯುವಜನರ ಸಂಖ್ಯೆ ಬಹಳ ಕಡಿಮೆ ಎಂದು ಪಕ್ಷದ ಕೇಂದ್ರ ಕಂಟ್ರೋಲ್ ಕಮಿಷನ್ ಅಧ್ಯಕ್ಷರು ಹೇಳಿದ್ದಾರೆ.

ಮಾಸ್ಕೋ ಪಕ್ಷದ ಕಾರ್ಯದರ್ಶಿ ಪ್ರಕಾರ, ಪಕ್ಷ ಬಿಡುತ್ತಿರುವುದು ಪಕ್ಷದ ಕಾರ್ಯಕ್ರಮದಲ್ಲಿ ನಂಬಿಕೆಯಿಲ್ಲದೆ ಆಡಳಿತದ ಸ್ಥಾನ ಸಿಗಲು ಪಕ್ಷ ಸದಸ್ಯತ್ವ ಗೇಟ್-ಪಾಸ್ ಎಂದು ತಿಳಿದವರೇ ಹೆಚ್ಚು. ಈಗಿನ ಚುನಾಯಿತ ಪ್ರಜಾಪ್ರಭುತ್ವ ಸಂಸ್ಥೆಗಳ ವ್ಯವಸ್ಥೆಯಲ್ಲಿ, ಅವರಿಗೆ ಪಕ್ಷದ ಸದಸ್ಯತ್ವದಲ್ಲಿ ಆಸಕ್ತಿಯಿಲ್ಲ. ಇಂತಹವರು ಪ[...] ಬೇಕಾಗಿಲ್ಲ ಎಂದು ಅವರಲಂಬೋ[...] ಕಾರ್ಮಿಕರ ಸಂಖ್ಯೆ ಪಕ್ಷದಲ್ಲಿ ಕಡಿಮೆಯಾ[...]ತ್ತಿರುವ ಬಗ್ಗೆ ಅವರಿಗೆ ಆತಂಕವಿದೆ. ಈ[...]ರಿಗೆ ಕಾರ್ಮಿಕರಿಗೆ 'ಪೆರಸ್ತ್ರೋಯಿಕ'ದಿ[...] ಆಗಿರುವ ಲಾಭ ಅತ್ಯಂತ ಕಡಿಮೆ. ಇ[...] ವರ್ಗಗಳಿಗೆ ಹೋಲಿಸಿದರೆ ಇದು ಕಾರಣ[...]ರಬಹುದು ಎಂದು ಅವರ ಅಂದಾಜು.

ಇದು ಪಕ್ಷದ ಹಲವು ದೈನಿಕಗಳ ಪ್ರಸಾರದ ಮೇಲೂ ಪರಿಣಾಮ ಬೀರಿದೆ. ಹೆಚ್ಚಿನವು ಸ್ವಲ್ಪಮಟ್ಟಿಗೆ ಇಳಿಮುಖವಾಗಿವೆ. 'ಗ್ಲಾಸ್ ನೋಸ್ಟ್'ನಲ್ಲಿ ಪತ್ರಿಕೆಗಳ ಸಂಖ್ಯೆ ಹೆಚ್ಚಿರುವುದರಿಂದ ಸ್ವಲ್ಪ ಮಟ್ಟಿಗೆ ಈ ಇಳಿತ ಆತಂಕಕಾರಿಯಲ್ಲ.

ಕಳೆದ ಒಂದು ವರ್ಷದಲ್ಲಿ ಪ್ರಾವ್ದಾ(-ಪಕ್ಷದ ದೈನಿಕ) ಪ್ರಸಾರ 96.6ಲಕ್ಷದಿಂದ 68. 4ಲಕ್ಷಕ್ಕೆ, ಇಝ್ವೆಸ್ತಿಯಾ(ಸರಕಾರದ ದೈನಿಕ) 1.01 ಕೋಟಿಯಿಂದ 95.5 ಲಕ್ಷಗಳಿಗೆ , ರೈತರ ಪತ್ರಿಕೆ 65.9ಲಕ್ಷದಿಂದ 59.3 ಲಕ್ಷಕ್ಕೆ, ಸೈನಿಕರ ಪತ್ರಿಕೆ 13.7 ಲಕ್ಷದಿಂದ 10.9 ಲಕ್ಷಗಳಿಗೆ ಇಳಿದಿದೆ. ಆದರೆ ಆಸಕ್ತಿಕಾರಕ ವಿಷಯವೆಂದರೆ ಪಕ್ಷದ ಯುವಜನರ ಪತ್ರಿಕೆ ಪ್ರಸಾರ 1.76 ಕೋಟಿಗಳಿಂದ 2.12ಕೋಟಿಗಳಿಗೂ, ಟ್ರೇಡ್ ಯೂನಿಯನ್ ಪತ್ರಿಕೆ ಪ್ರಸಾರ 1.98 ಕೋಟಿಗಳಿಂದ 2ಕೋಟಿಗಳಿಗೂ ಏರಿದೆ.

ಅರಬ್ ದೇಶಗಳಲ್ಲಿ ಭಾರತೀಯರು

ಸೌದಿ ಅರೇಬಿಯಾ	4,25,000
ಯು.ಎ.ಇ.	2,75,000
ಜರ್ಮನ್	1,90,000
ಕುವೇಟ್	1,72,000
ಬಹರೈನ್	80,000
ಕತಾರ್	45,000
ಇರಾಕ್	9,000
ಯೆಮೆನ್	6000

K R N M/ BGW - 293 MAG (2) PRB DECR 319 - 78/79

ವಿಡಿಯಾ ಕಾರ್ಖಾನೆಯಲ್ಲಿ ಸಿಐಟಿಯು ಹಿತೈಷಿಗಳಿಗೆ ವಿಜಯ

ಬೆಂಗಳೂರಿನ ಪೀಣ್ಯ ತುಮಕೂರು ರೋಡಿನಲ್ಲಿರುವಟುಂಗ್‌ಸ್ಟನ್ ಕಾರ್ಬೈಡ್ ಉದ್ದಿಮೆ ವಿಡಿಯಾ(ಇಂಡಿಯಾ) ಕಾರ್ಮಿಕ ಸಂಘದ ಚುನಾವಣೆ ಸೆಪ್ಟೆಂಬರ್ 22ರಂದು ನಡೆಯಿತು. ಈ ಚುನಾವಣೆಯಲ್ಲಿ ಆರಿಸಿ ಬಂದಿರುವ ಅಧ್ಯಕ್ಷರು,ಪ್ರಧಾನ ಕಾರ್ಯದರ್ಶಿಗಳೂ ಸೇರಿದಂತೆ ಎಲ್ಲಾ ಪದಾಧಿಕಾರಿಗಳೂ ಸಿಐಟಿಯುನ ಹಿತೈಷಿಗಳು.

ಚುನಾವಣೆಯ ವಿವರ ಹೀಗಿದೆ:

ಅಧ್ಯಕ್ಷರು: ಎಂ.ಎಸ್. ನಂಜರಾಜುರವರು 463ಮತಗಳನ್ನು ಪಡೆದು ಭದ್ರಪ್ಪನವರನ್ನು (27 ಮತಗಳು) ಸೋಲಿಸಿದರು.

ಉಪಾಧ್ಯಕ್ಷರು: ಜೆ.ಮಾರೇಗೌಡ(530 ಮತಗಳು)ರು ಬಿ.ಶಿವಲಿಂಗಪ್ಪನವರನ್ನು (200 ಮತಗಳು) ಸೋಲಿಸಿದರು.

ಪ್ರಧಾನ ಕಾರ್ಯದರ್ಶಿ: ಸಿ.ನರಸಿಂಹಲುರೆಡ್ಡಿ(423 ಮತಗಳು) ಬಿ.ಎಮ್ ನರಸಿಂಹಾಚಾರ್ಯ(309)ರವರನ್ನು ಸೋಲಿಸಿದರು.

ಸಹಕಾರ್ಯದರ್ಶಿ: ಮಹಮ್ಮದ್ ಪೀರ್(423 ಮತಗಳು) ಫಣಿರಾಜುರವರನ್ನು (143) ಸೋಲಿಸಿದರು.

ಖಜಾಂಚಿ: ಸತ್ಯನಾರಾಯಣ ಶೆಟ್ಟಿಯವರು(422 ಮತಗಳು) ಆನಂದ ಕೃಷ್ಣಪ್ಪ(246 ರವರನ್ನು ಸೋಲಿಸಿದರು.

ಅಧ್ಯಕ್ಷರಾಗಿಆಯ್ಕೆಯಾದ ಕಾಂ. ಎಂ.ಎಸ್. ನಂಜರಾಜುರವರು ಡಿ.ವೈ.ಎಫ್.ಐ. ಬೆಂಗಳೂರು ಜಿಲ್ಲಾ ಸಮಿತಿ ಉಪಾಧ್ಯಕ್ಷರು.

ಕಾರ್ಯಕಾರಿ ಸಮಿತಿಗೆ ಆಯ್ಕೆಯಾದ ಅಭ್ಯರ್ಥಿಗಳೂ ಬಹುತೇಕ ಸಿಐಟಿಯು ಹಿತೈಷಿಗಳು. ಅವರ ಹೆಸರುಗಳು ಹೀಗಿವೆ. ರಮೇಶ ಪೂಜಾರ್, ರಮಾನಂದ, ಐ. ಫೆಲಿಕ್ಸ್, ಎ. ಆರೋಗ್ಯದಾಸ್ ಮತ್ತು ಬಿ.ಡಿ. ಶ್ರೀನಿವಾಸ್‌ಚುನಾಯಿತರಾಗಿದ್ದಾರೆ. ಜಗನ್ನಾಥರಾವ್, ಲಿಂಗಣ್ಣಗೌಡ ಬೀರೇದಾರ್, ರವಿ, ಟಿ.ಮುನಿಯಪ್ಪ, ಮತ್ತು ಮುನಿಯಪ್ಪ ಇವರು ಅವಿರೋಧವಾಗಿ ಆಯ್ಕೆಯಾಗಿದ್ದರು.

ಈ ಸಂಘ ಏಐಟಿಯುಸಿಗೆ ಸಂಯೋಜಿತವಾದ ಸಂಘ ಎಂಬುದು ಇಲ್ಲಿ ಗಮನಾರ್ಹ. ಹಿಂದಿನ ವೇತನ ಒಪ್ಪಂದದ ಸಮಯದಲ್ಲಿ ಸಂಘದ ಮುಖಂಡರು ನಡೆದುಕೊಂಡ ರೀತಿ, ಇದರಿಂದಾಗಿ ಮಾಡಿಕೊಂಡ ಒಪ್ಪಂದದ ಬಗ್ಗೆ ಕಾರ್ಮಿಕರಲ್ಲಿದ್ದ ಅತೃಪ್ತಿಯ ಹಿನ್ನಲೆಯಲ್ಲಿ ಈ ಚುನಾವಣೆ ನಡೆದಿದ್ದು ಏಐಟಿಯುಸಿ ಮುಖಂಡರ ಬಗ್ಗೆ ಕಾರ್ಮಿಕರ ಅಪನಂಬಿಕೆ ಈ ಚುನಾವಣಾ ಫಲಿತಾಂಶದಲ್ಲಿ ಸಾಬೀತಾದಂತಾಗಿದೆ.

ಸಾಮಾನ್ಯವಾಗಿ ಇಂಜಿನಿಯರಿಂಗ್ ಉದ್ದಿಮೆಗಳಲ್ಲಿ ಕಾರ್ಮಿಕರ ವೇತನ ಕಾರ್ಖಾನೆಯ ಉತ್ಪಾದನೆಯ 18 ರಿಂದ20ಶೇಕಡಾ ಇರುತ್ತದೆ. ಆದರೆ ವಿಡಿಯಾ (ಇಂಡಿಯಾ) ದಲ್ಲಿ ಇದು ಕೇವಲ 1987ರಲ್ಲಿ 14.2 ಶೇಕಡಾ ಇದ್ದದ್ದು 1989ರಲ್ಲಿ 12.4ಶೇಕಡಾ.

ಆಡಳಿತ ವರ್ಗದವರು ಮಾತುಕತೆ ನಡೆಯುವ ಸಮಯದಲ್ಲಿ ಕಾರ್ಖಾನೆಯಲ್ಲಿ ಭಯದ ವಾತಾವರಣ ನಿರ್ಮಿಸಿದ್ದರು. ಕಾರ್ಮಿಕರು ಪರಸ್ಪರ ವಿಚಾರ ವಿಮರ್ಶೆ ಮಾಡಲು ಅವಕಾಶವಾಗದಿರಲಿ ಎಂದು. ಒಪ್ಪಂದದ ಮಾತುಕತೆಯ ವೈಖರಿಯ ಬಗ್ಗೆ ವಿಮರ್ಶೆ ಮಾಡಿದ ಕಾರ್ಮಿಕರಿಗೆ ಕಿರುಕುಳ ಕೊಡಲಾಯಿತು.ಒಪ್ಪಂದದ ನಂತರವೂ ಇದು ಮುಂದುವರೆಯಿತು. ಆದರೆ ಕಾರ್ಮಿಕರ ಅತೃಪ್ತಿಯಿಂದ ಹೆದರಿದ ಹಿಂದಿನ ಕಾರ್ಯಕಾರಿ ಸದಸ್ಯರು ರಾಜೀನಾಮೆ ನೀಡಿದರು. ಆದ್ದರಿಂದಲೇ ಈ ಚುನಾವಣೆ ಘೋಷಿಸಬೇಕಾಗಿ ಬಂತು.

ಸಂಘದ ಮುಖಂಡತ್ವದ ಕಾರ್ಮಿಕ-ವಿರೋಧಿ ಧೋರಣೆಗಳನ್ನು ವಿರೋಧಿಸಿದವರು-ಎಲ್ಲರೂ ಸಿಐಟಿಯು ಹಿತೈಷಿಗಳು- ಸಂಘವನ್ನು ನಡೆಸುವ ವಿಧಾನ ಹೇಗಿರಬೇಕು, ಕಾರ್ಮಿಕರ ಸಮಸ್ಯೆಗಳನ್ನು ಬಗೆಹರಿಸುವ ರೀತಿ ಹೇಗಿರಬೇಕೆಂದು ನಿರ್ಧರಿಸುವುದೇ ಈ ಚುನಾವಣೆಯ ಮುಖ್ಯ ಅಂಶವೆಂದು ಕಾರ್ಮಿಕರಿಗೆ ಮನದಟ್ಟು ಮಾಡಲು ಈ ಚುನಾವಣೆಯಲ್ಲಿ ಪ್ರಯತ್ನಿಸಿದರು. ವಿಜಯಿಗಳೂ ಆದರು. ಕಾರ್ಮಿಕ ಸಂಘಟನೆ ಪ್ರಜಾಪ್ರಭುತ್ವ ರೀತಿಯಲ್ಲಿ ನಡೆಯಲೇಬೇಕೆಂಬ ನೀತಿಗೆ ಬದ್ಧರಾದ ಅಭ್ಯರ್ಥಿಗಳು ಭಾರಿ ಗೆಲುವು ಸಾಧಿಸಿದರು.

ಒಟ್ಟು 817 ಕಾರ್ಮಿಕರಲ್ಲಿ 737 ಮಂದಿ ಮತ ಚಲಾಯಿಸಿದರು. ಅಂದರೆ 90ಕಾರ್ಮಿಕರು ಚುನಾವಣೆಲ್ಲಿ ಭಾಗವಹಿಸಿದರು. ಎಲ್ಲಾ ಪದಾಧಿಕಾರಿಗಳು ಶೇ.54 ಕ್ಕಿಂತ ಹೆಚ್ಚು ಮತ ಪಡೆದು ಆಯ್ಕೆಯಾಗಿದ್ದಾರೆ ಎಂಬುದನ್ನು ಮೇಲೆ ತಿಳಿಸಿದ ವಿವರಗಳಿಂದ ಅರಿಯಬಹುದು.

ಜವಾಬ್ದಾರಿಯುತ ರಾಜಕೀಯ ಪಕ್ಷ ಮಾಡಬಾರದ ಬೆಂಕಿಗೆ ತುಪ್ಪ ಸುರಿಯುವ ಕೃತ್ಯ

ಪಂಜಾಬ್, ಕಾಶ್ಮೀರ ಮತ್ತಿತರ ರಾಜ್ಯಗಳಲ್ಲಿ ಪ್ರತ್ಯೇಕತಾವಾದಿಗಳು ದೇಶದ ಐಕ್ಯತೆಯನ್ನು ಕೋಮುವಾದೀ ದಿಕ್ಕಿನಲ್ಲಿ ಹರಿದು ಹಂಚಲು ಸರ್ವ ಪ್ರಯತ್ನ ನಡೆಸಿರುವಾಗ ರಾಮಜನ್ಮಭೂಮಿ ಪ್ರಶ್ನೆ ಕುರಿತು ಬಿ.ಜೆ.ಪಿ. ನಿಲುವಿಗೆ ಪರವಾಗಿ ಸಾರ್ವಜನಿಕಾಭಿಪ್ರಾಯ ರೂಪಿಸಲು ಎಂಟು ರಾಜ್ಯಗಳ ಮೂಲಕ ರಥಯಾತ್ರೆ ನಡೆಸುವುದಾಗಿ ಘೋಷಿಸಿ ಬಿ.ಜೆ.ಪಿ. ಅಧ್ಯಕ್ಷ ಅದ್ವಾಣಿ ಕೋಮುವಾದದ ಬೆಂಕಿಗೆ ತುಪ್ಪ ಸುರಿದಿದ್ದಾರೆ ಎಂದು ಜನತಾದಳ, ಸಿ.ಪಿ.ಐ(ಎಂ), ಸಿ.ಪಿ.ಐ.ನ ನಾಲ್ಕು ಸಂಸತ್ ಸದಸ್ಯರು ಹೇಳಿಕೆಯೊಂದರಲ್ಲಿ ತಮ್ಮ ತೀವ್ರ ಆತಂಕ ವ್ಯಕ್ತಪಡಿಸಿದ್ದಾರೆ.

ಈ ಹೇಳಿಕೆಗೆ ಸಹಿ ಹಾಕಿದ ಎಂ.ಪಿ. ಗಳೆಂದರೆ ಜನತಾದಳದ ಕೆ.ಜಿ. ಮಹೇಶ್ವರಪ್ಪ, ಸಿ.ಪಿ.ಐ.ನ ಗುರುದಾಸ್ ದಾಸಗುಪ್ತಾ ಮತ್ತು ಸಿ.ಪಿ.ಐ.(ಎಂ)ನ ಮಾಲಿನಿ ಭಟ್ಟಾಚಾರ್ಯ ಮತ್ತು ಎಂ.ಎ. ಬೇಬಿ.

ವಿ.ಹೆಚ್.ಪಿ. ಯಂತಹ ಬಹಿರಂಗ ಕೋಮುಸಂಘಟನೆಗೆ ಇಂತಹ ನಗ್ನ ಬೆಂಬಲ ನೀಡಿ ಬಿ.ಜೆ.ಪಿ. ಅಧಿಕಾರ ಗ್ರಹಣಕ್ಕೆ ಧಾರ್ಮಿಕ ಭಾವನೆಗಳ ದುರುಪಯೋಗ ಪಡೆಯುವ ಅಪಾಯಕಾರೀ ಆಟಕ್ಕಿಳಿದಿದೆ ಎಂದು ಈ ಸಂಸತ್ ಸದಸ್ಯರು ದುಃಖ ವ್ಯಕ್ತಪಡಿಸಿದ್ದಾರೆ.

ಕೋಮುವಾದಿ ಕರೆಯೊಂದರ ಆಧಾರದ ಮೇಲೆ ಇಂತಹ ಪ್ರಕ್ಷೋಭೆ ಅಲ್ಪ ಸಂಖ್ಯಾತರಲ್ಲಿ ಪ್ರತಿಕೂಲ ಪ್ರತಿಕ್ರಿಯೆ ಉಂಟು ಮಾಡುವುದಷ್ಟೇ ಅಲ್ಲ, ಬಡತನ, ಸಾಮಾಜಿಕ - ಆರ್ಥಿಕ ಅಸಮಾನತೆ, ನಿರುದ್ಯೋಗ, ಅಸಮಾನ-ಅಭಿವೃದ್ಧಿ ಮುಂತಾದವುಗಳ ವಿರುದ್ಧ ರಾಷ್ಟ್ರೀಯ ಹೋರಾಟಕ್ಕೆ ನಷ್ಟವುಂಟು ಮಾಡುತ್ತದೆ. ಎಲ್ಲೆಲ್ಲಿ ಕೋಮುಗಳ ನಡುವೆ ಸಂಬಂಧ ಗಂಭೀರಗೊಂಡಿದೆಯೋ ಅಲ್ಲೆಲ್ಲಾ ಅದನ್ನು ತಿಳಿಗೊಳಿಸುವುದು ಎಲ್ಲಾ ರಾಜಕೀಯ ಪಕ್ಷಗಳ ಜವಾಬ್ದಾರಿ. ಇಂತಹ ಸಮಯದಲ್ಲಿ ಬಿ.ಜೆ.ಪಿ.ಯ ಈ ಕ್ರಮ ಕೋಮುಗಳ ನಡುವಿನ ಸಂಬಂಧಗಳನ್ನು ಹದಗೆಡಿಸುತ್ತದೆಂದು ಎಂಬ ತಮ್ಮ ಭಯವನ್ನು ಅವರು ಅಭಿವ್ಯಕ್ತಗೊಳಿಸಿದ್ದಾರೆ.

ಯಾವುದೇ ಜವಾಬ್ದಾರಿಯುತ ರಾಜಕೀಯ ಪಕ್ಷ ದೇಶದ ಮೇಲೆ ತರಬಾರದ ವಿನಾಶಕಾರಿ ಪರಿಣಾಮಗಳನ್ನು ಉಂಟು ಮಾಡಬಹುದಾದ ರಥಯಾತ್ರೆ ಕಾರ್ಯಕ್ರಮ ಕೈಬಿಡಬೇಕೆಂದು ಈ ನಾಲ್ವರು ಎಂ.ಪಿ.ಗಳು ಬಿ.ಜೆ.ಪಿ. ಮತ್ತು ಅದ್ವಾಣಿಯವರನ್ನು ವಿನಂತಿಸಿಕೊಂಡಿದ್ದಾರೆ.

ಈ ವಾರ

★ ಅನುದಾನವಿಲ್ಲದ ಆಧಾರದ ಮೇಲೆ ಬಿ.ಎಡ್. ಮತ್ತು ಡಿ.ಎಡ್ ಕಾಲೇಜ್‌ಗಳ ಆರಂಭಕ್ಕೆ ಅನುಮತಿ ನೀಡುವ ವಿಚಾರದಲ್ಲಿ ಮಹಾರಾಷ್ಟ್ರದ ಆಡಳಿತ ಮತ್ತು ರಾಜಕೀಯ ಮುಖಂಡರ ನಡುವೆ ತಿಕ್ಕಾಟ ಆರಂಭವಾಗಿದೆ.

ಈ ವರ್ಷ ರಾಜ್ಯ ಸರಕಾರ ಮುಖ್ಯವಾಗಿ ಆಳುವ ಪಕ್ಷದ ರಾಜಕಾರಣಿಗಳಿಗೆ ಅನುದಾನ ರಹಿತ ಆಧಾರದಲ್ಲಿ *63* ಡಿ.ಎಡ್. *60* ಬಿ.ಎಡ್ ಮತ್ತು *19* ಡಿ.ಪಿ.ಎಡ್ (ದೈಹಿಕ ಶಿಕ್ಷಣ ಡಿಪ್ಲೊಮಾ) ಕಾಲೇಜ್‌ಗಳಿಗೆ ಅನುಮತಿ ನೀಡಿದೆ. ಈ ಕಾಲೇಜ್‌ಗಳು ಪ್ರತಿ ವಿದ್ಯಾರ್ಥಿಯಿಂದ *5,000* ದಿಂದ *15,000* ರೂ. ವರೆಗೆ ವಸೂಲಿ ಮಾಡಿ ಶಿಕ್ಷಣವನ್ನು ವ್ಯಾಪಾರೀಕರಣಗೊಳಿಸುತ್ತಿದೆ.

-ದಿ ಇಕನಾಮಿಕ್ ಟೈಮ್ಸ್. 18.9.90.

★ ಇದೀಗ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಅರ್ಧವಾರ್ಷಿಕ ಪರೀಕ್ಷೆ ಆರಂಭವಾಗಿರುವುದು ಸರಿಯಷ್ಟೆ. ಆದರೆ ಈ ವಿದ್ಯಾರ್ಥಿಗಳಿಗೆ ಕೆಲವು ಪಠ್ಯ ಪುಸ್ತಕಗಳೇ ಇನ್ನೂ ಸಿಗದಿರುವಾಗ, ಇನ್ನೂ ಸರಿಯಾಗಿ ಪಾಠಗಳೇ ನಡೆಯದಿರುವಾಗ ಪರೀಕ್ಷೆ ಎದುರಿಸುವುದಾದರೂ ಎಂತು?

—ಆಂದೋಲನ (ಮೈಸೂರು) ಪತ್ರಿಕೆಯಲ್ಲಿ ಓದುಗರ ಪತ್ರದಲ್ಲಿ 16.9.90.

★ ಕಾಂಗ್ರೆಸ್ (ಐ) ನ ಮಾಜಿ ಸಂಸತ್ ಸದಸ್ಯ ಸಜ್ಜನ್ ಕುಮಾರ್ ಅವರನ್ನು ಬಂಧಿಸಲು ಸಿ.ಬಿ.ಐ. ನವರು ಮಂಗಳವಾರ ಮನೆಗೆ ಹೋಗಿದ್ದಾಗ ಸಜ್ಜನ್ ಬೆಂಬಲಿಗರು ನಡೆಸಿದ ದುಂಡಾವರ್ತಿ ಚಟುವಟಿಕೆಗಳು ರಾಜಧಾನಿಯಲ್ಲಿ ಕಾಂಗ್ರೆಸ್ ಪಕ್ಷ ನಾಯಕರು ಮತ್ತವರ ಬೆಂಬಲಿಗರ ಗುಣಮಟ್ಟವನ್ನು ತಿಳಿಸುತ್ತವೆ. ಸಂಜಯ ಗಾಂಧಿ ಮತ್ತು ಅವರ ಯುವ ಕಾಂಗ್ರೆಸ್(ಐ) ತಂಡ ಉತ್ತುಂಗದಲ್ಲಿದ್ದಾಗಿನ ಕಾಂಗ್ರೆಸ್ ತಳಿಗೆ ಸೇರಿದವರು ಈ ಸಜ್ಜನ್ ಕುಮಾರ್....

—'ಡೆಕ್ಕನ್ ಹೆರಾಲ್ಡ್' ಸಂಪಾದಕೀಯದಲ್ಲಿ 14.9.90.

★ ರಾಮಜನ್ಮಭೂಮಿ-ಬಾಬ್ರಿ ಮಸೀದಿ ವಿವಾದ ಈ ದೇಶದ ಪ್ರಜ್ಞಾವಂತರ ಮನಕದಡಿರುವ ಸಮಸ್ಯೆ. ಇದನ್ನು ಬಗೆಹರಿಸಲು ಇದುವರೆಗೆ ಯತ್ನಗಳು ನಡೆದಿರುವುದು ಯಾವುದೂ ಫಲಕಾರಿಯಾಗಿಲ್ಲ. ಈ ವಿವಾದ ನಮ್ಮ ಸಂವಿಧಾನ ಅಂಗೀಕರಿಸಿರುವ 'ಜಾತ್ಯಾತೀತ' ಎಂಬ ಪದದ ವ್ಯಾಖ್ಯೆಯನ್ನೇ ಮನದಾಲೋಚಿಸುವಂತೆ ಮಾಡಿದೆ. ಈ ಸಮಸ್ಯೆ ಸಮಾಧಾನಕರ ಪರಿಹಾರ ಪಡೆಯದೇ ಹೋದರೆ ಮುಂದಿನ ತಿಂಗಳು ರಾಷ್ಟ್ರಕ್ಕೆ ಒದು ವಿಪತ್ತೇ ಕಾದಿದೆ.

-'ಪ್ರಜಾವಾಣಿ' ಸಂಪಾದಕೀಯ ಸೆಪ್ಟೆಂಬರ್ 18.

★ ಭಾರತದಲ್ಲಿ ಪ್ರತಿವರ್ಷ ಜನಿಸುವ *1.2* ಕೋಟಿ ಹೆಣ್ಣುಗಳಲ್ಲಿ ನಾಲ್ಕನೆ ಒಂದರಷ್ಟು ಮಕ್ಕಳು *15* ವರ್ಷ ತುಂಬುವುದರೊಳಗೆ ಸಾಯುತ್ತವೆ. ಅದರಲ್ಲಿ ಆರನೇ ಒಂದರಷ್ಟು ಶಿಶುಗಳು ಲಿಂಗ ತಾರತಮ್ಯದಿಂದಾಗಿಯೇ ಕೊನೆಯುಸಿರೆಳೆಯುತ್ತವೆ. ಇವು ಆಘಾತಕರ ಅಂಕಿ ಸಂಖ್ಯೆಗಳಾದರೂ ಹೊಸತೇನಲ್ಲ. ಅನೇಕ್ಕೋ ಹೆಣ್ಣು ಶಿಶುಗಳು ಹುಟ್ಟಿದಂತೆಯೇ ಮಾಡಲಾಗುತ್ತಿದೆ.. ಒಂದು ಶತಮಾನದಷ್ಟು ಹಿಂದೆಯೇ. ಅಂದರೆ *1870* ರಲ್ಲಿ ಹೆಣ್ಣು ಭ್ರೂಣಹತ್ಯೆ ನಿಷೇಧಿಸಿದ್ದರೂ ಅದು ಈಗಲೂ ಮುಂದುವರಿಯುತ್ತಿದೆ. ಹುಟ್ಟುವ ಮಗುವಿನ ಲಿಂಗ ಯಾವುದೆಂಬುದನ್ನು ಸುಧಾರಿತ ತಂತ್ರಜ್ಞಾನ ತಿಳಿಸುತ್ತದೆ.....ಅದೆಷ್ಟೊ ಮನೆಗಳಲ್ಲಿ ಹೆಣ್ಣುಮಗುವಿನ ಜನನ ಗಂಡುಮಗು ಹುಟ್ಟಿದಾಗಿನ ಸಂತೋಷದ ವಾತಾವರಣ ಸೃಷ್ಟಿಸುವುದಿಲ್ಲ.

ವಿಶ್ವಸಂಸ್ಥೆ ಅಭಿವೃದ್ಧಿ ಕಾರ್ಯಕ್ರಮ (ಯುಎನ್‌ಡಿಪಿ) ಹೇಳುವಂತೆ, ಮಹಿಳೆ ಸಮಸ್ಯೆಗಳಲ್ಲದೆ ಇನ್ನೇನನ್ನೂ ಅನುಭವಿಸುತ್ತಿಲ್ಲ.

-ದಿ ಹಿಂದೂಸ್ತಾನ್ ಟೈಮ್ಸ್. ಸಂಪಾದಕೀಯ ಸೆಪ್ಟೆಂಬರ್ 17.

★ *ಗಲಭೆಪೀಡಿತ ಪಂಜಾಬ್‌ನಲ್ಲಿ ವಿಧಾನಸಭಾ ಚುನಾವಣೆಗಳನ್ನು ನಡೆಸಲು ವಾತಾವರಣ ಪಕ್ವವಾಗಿಲ್ಲ.*

ಪಂಜಾಬ್‌ನ ಜನರಾಗಲೀ ಬಹುತೇಕ ರಾಜಕೀಯ ಪಕ್ಷಗಳಾಗಲೀ ಅಲ್ಲಿ ಶೀಘ್ರ ಚುನಾವಣೆಯ ಪರವಾಗಿಲ್ಲ.

– ಪಂಜಾಬ್ ರಾಜ್ಯಪಾಲ ವೀರೇಂದ್ರ ವರ್ಮಾ. ಸೆ. 23 ರಂದು ಮದರಾಸು ಪತ್ರಿಕಾಗೋಷ್ಠಿಯಲ್ಲಿ.

★ ಸೌದಿ ಅರೇಬಿಯಾದಲ್ಲಿ ಅಮೆರಿಕ ಭಾರಿ ಪ್ರಮಾಣದಲ್ಲಿ ಸೇನೆ ಜಮಾಯಿಸಿರುವುದರಿಂದ ಅಮೆರಿಕದ ನಿಜವಾದ ಉದ್ದೇಶಗಳ ಬಗ್ಗೆ ಕೆಲವು ಪ್ರಶ್ನೆಗಳು ಏಳುತ್ತವೆ. ಅಮೆರಿಕ ನಿಜವಾಗಿಯೂ ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವಕ್ಕಾಗಿ ಹೋರಾಡುತ್ತಿದೆಯೇ ಅಥವಾ ಅದರದೇ ಹಿತಾಸಕ್ತಿಗಾಗಿಯೆ? ಸಮಸ್ಯೆಯಲ್ಲಿ ಒಳಗೊಂಡಿರುವುದು ಎಣ್ಣೆಯಾಗಿರದೆ ಬೆಣ್ಣೆ ಮಾತ್ರ ಆಗಿದ್ದರೆ ಅಮೆರಿಕ ಈ ವಲಯದಲ್ಲಿ ಇಷ್ಟೊಂದು ಉತ್ಸುಕತೆಯಿಂದ ಬಲ ಪ್ರದರ್ಶನ ಮಾಡುತ್ತಿತ್ತೆ?

—'ಇಂಡಿಯನ್ ಎಕ್ಸ್‌ಪ್ರೆಸ್' ಲೇಖನದಲ್ಲಿ ಎ. ಬಾಲು. ಸೆ. 24.

★ *ನ್ಯೂಯಾರ್ಕ್‌ನಲ್ಲಿ 1989 ರಲ್ಲಿ 1905 ಕೊಲೆಗಳು ನಡೆದಿವೆ. ಈ ಪ್ರಮಾಣ 1950 ರ ದಶಕದಲ್ಲಿ ಪ್ರತಿವರ್ಷ ಸರಾಸರಿ 300 ಆಗಿತ್ತು. 'ನ್ಯೂಯಾರ್ಕ್ ಟೈಮ್ಸ್' ಸಮೀಕ್ಷೆಯೊಂದರ ಪ್ರಕಾರ ಈ ವರ್ಷದ ಮೊದಲ ಮೂರು ತಿಂಗಳಲ್ಲಿ ಕೊಲೆ ಪ್ರಕರಣಗಳಲ್ಲಿ 22 ಶೇಕಡ ಹೆಚ್ಚಳವಾಗಿದೆ. ಲಾಸ್ ಏಂಜಲ್ಸ್, ಚಿಕಾಗೊ, ಬೋಸ್ಟನ್, ಡಲ್ಲಾಸ್, ಹ್ಯೂಸ್ಟನ್, ಫಿಲಡೆಲ್ಫಿಯಾ ಮತ್ತಿತರ ನಗರಗಳಲ್ಲಿ ಕೂಡ ಈ ಚಿತ್ರಣ ಬೇರೆಯಾಗಿಲ್ಲ.*

—'ದಿ ಹಿಂದೂ' ಲೇಖನದಲ್ಲಿ, ಸೆ.23.

★ ಮಮತಾ ಬ್ಯಾನರ್ಜಿ (ಮಾಜಿ ಕಾಂಗ್ರೆಸ್ ಸಂಸತ್ ಸದಸ್ಯೆ) ಅಸ್ತಿತ್ವದಲ್ಲೇ ಇಲ್ಲದ ಅಮೆರಿಕದ ವಿಶ್ವ ವಿದ್ಯಾನಿಲಯವೊಂದರ ಡಾಕ್ಟರೇಟ್ ಪದವಿ ಪಡೆದಿದ್ದೇನೆ ಎಂದು ಮತದಾರರನ್ನು ವಂಚಿಸುವಲ್ಲಿ ಮುಜುಗರ ಪಟ್ಟವರಲ್ಲ. ತುರ್ತು ಪರಿಸ್ಥಿತಿಯ ಅವಧಿಯಲ್ಲಿ ಮಮತಾ ಕಾಂಗ್ರೆಸ್ ಕಾರ್ಯಕರ್ತರ ತಂಡವೊಂದು ಜಯಪ್ರಕಾಶ್ ನಾರಾಯಣರ ಮೇಲೆ ಹಲ್ಲೆ ನಡೆಸಿ ಅವರ ಸಭೆಯನ್ನು ಹಾಳುಗೆಡಹುವಲ್ಲಿ ನಾಯಕತ್ವ ವಹಿಸಿದ್ದರು. ಇತ್ತೀಚೆಗಷ್ಟೆ ಅವರು ಕಲ್ಕತ್ತಾದ ಪೋಲೀಸ್ ಠಾಣೆಯೊಂದರ ಮೇಲೆ ದಾಳಿ ನಡೆಸಿದ ತನ್ನ ಪಕ್ಷ ಕಾರ್ಯಕರ್ತರ ತಂಡವನ್ನು ಮುನ್ನಡೆಸಿದ್ದರು.

– ಮೃಣಾಲ್‌ಗುಹಾ('ಸಂಡೆ' ಓದುಗರ ಪತ್ರ 'ವಿಭಾಗದಲ್ಲಿ,' ಸೆ.23-29)

ಬಾಲಂಗೋಚಿ

ಬ್ರಿಟಿಷರು ನಮ್ಮನ್ನು ಒಡೆದು ದೀರ್ಘ ಕಾಲ ಆಳ್ವಿಕೆ ನಡೆಸಿದರು. ಈಗ ಅದೇ ರೀತಿಯ ಪ್ರಯತ್ನ ನಡೆಸಲು ನಮಗೊಬ್ಬ 'ರಾಜಾ' ಇದ್ದಾರೆ
-ಕಾಂಗ್ರೆಸ್ ಅಧ್ಯಕ್ಷ ರಾಜೀವಗಾಂಧಿ.
ಓಹೋ, ಹಾಗಾ! ತುಮ ಭೀ ವೈಸಾ ಹೀ ಕಿಯಾಥಾ ನಾ?-ಸೋನಿಯಾ ಪತಿರಾಯರ ಕಿವಿಯಲ್ಲಿ ಉಸುರಿದರಂತೆಂದು ಡಿಟೆಕ್ಟಿವ್ 'ವಿ' ಕೀಟಲೆ ವರದಿ.

ಕೋಮು ಗಲಭೆಯ ಬಗ್ಗೆ ಕಳವಳ

ಬೆಂಗಳೂರು ಜಿಲ್ಲೆಯ ರಾಮನಗರದಲ್ಲಿ ಪದೇ ಪದೇ ಕೋಮು ಗಲಭೆಗಳು ಮರುಕಳಿಸುತ್ತಿರುವುದರ ಬಗ್ಗೆ ಸಿಪಿಐ(ಎಂ) ಬೆಂಗಳೂರು ಜಿಲ್ಲಾ ಸಮಿತಿಯು ತನ್ನ ತೀವ್ರ ಕಳವಳವನ್ನು ವ್ಯಕ್ತಪಡಿಸಿದೆ. ಗಲಭೆಯಲ್ಲಿ ಮಡಿದವರಿಗೆ ತನ್ನ ಸಂತಾಪವನ್ನು ಸೂಚಿಸಬಯಸುತ್ತದೆ. ಬೆಂಗಳೂರು ನಗರ ಹಾಗೂ ಗ್ರಾಮಾಂತರ ಪ್ರದೇಶದ ಕೆಲವು ಸ್ಥಳಗಳಲ್ಲಿ ಆಗಾಗ್ಗೆ ಮತೀಯ ಘರ್ಷಣೆಗಳು ಪುನರಾವರ್ತನೆಯಾಗುತ್ತಿದ್ದರೂ ಸರಕಾರ ಮತ್ತು ಪೋಲೀಸ್ ಇಲಾಖೆಯು ಸೂಕ್ತ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳದಿರುವುದನ್ನು ಪಕ್ಷ ಖಂಡಿಸುತ್ತದೆ. ಗಲಭೆಯಲ್ಲಿ ಪ್ರಾಣ ಹಾನಿ ಹಾಗೂ ಆಸ್ತಿಪಾಸ್ತಿ ಕಳೆದುಕೊಂಡಿರುವ ಕುಟುಂಬಗಳಿಗೆ ಸೂಕ್ತ ಪರಿಹಾರವನ್ನು ಕೂಡಲೇ ಒದಗಿಸಬೇಕೆಂದು ಹಾಗೂ ನ್ಯಾಯಾಂಗ ತನಿಖೆಗೆ ಆಜ್ಞೆ ಮಾಡಬೇಕೆಂದು ರಾಜ್ಯ ಸರಕಾರವನ್ನು ಸಿಪಿಐ(ಎಂ) ಒತ್ತಾಯಿಸುತ್ತದೆ.

ವಿದ್ಯುತ್ ದರ ಏರಿಕೆಯ ವಿರುದ್ಧ ಧರಣಿ

ರಾಜ್ಯ ಸರಕಾರ ಜನವಿರೋಧಿ ನೀತಿಯಿಂದ ಏರಿಸಿರುವ ವಿದ್ಯುತ್ ದರವನ್ನು ರದ್ದುಗೊಳಿಸಬೇಕೆಂದು ಒತ್ತಾಯಿಸಿ ಸಿಐಟಿಯು ಗೆ ಸೇರಿದ ಆಟೋ ರಿಕ್ಷಾ ಚಾಲಕರು 13-9-90 ರಂದು ಬೆಳಗ್ಗೆ 11 ಗಂಟೆಗೆ ನಗರದ ಸಿಲ್ವರ್ ಜುಬಿಲಿ ಪಾರ್ಕಿನಿಂದ ನೂರಾರು ಆಟೋಗಳ ಸಮೇತ ಕಾವೇರಿ ಭವನದಲ್ಲಿರುವ ವಿದ್ಯುಚ್ಛಕ್ತಿ ಕಛೇರಿಗೆ ಮೆರವಣಿಗೆಯಲ್ಲಿ ತೆರಳಿ ಧರಣ ನಡೆಸಿ, ಮಂಡಲಿಯ ಕಾರ್ಯದರ್ಶಿಗೆ ಸಂಘದ ಪದಾಧಿಕಾರಿಗಳು ಮನವಿ ಸಲ್ಲಿಸಿದರು.

ಸಭೆಯ ಅಧ್ಯಕ್ಷತೆಯನ್ನು ಸಂಘದ ಖಜಾಂಚಿ ಎಂ.ಆರ್. ವಿಜಯ ಪ್ರಕಾಶ್ ವಹಿಸಿದ್ದರು. ಸಭೆಯನ್ನುದ್ದೇಶಿಸಿ ಸಂಘದ ಪ್ರಧಾನ ಕಾರ್ಯದರ್ಶಿ ಬಿ.ಎಸ್. ನಾರಾಯಣ ಮೂರ್ತಿ , ಉಪಾಧ್ಯಕ್ಷರಾದ ಅನ್ವ ಳಗನ್ ಹಾಗೂ ಸಿಐಟಿಯು ಮುಖಂಡರಾದ ಆರ್. ಶ್ರೀನಿವಾಸ್‌ರವರು ಮಾತನಾಡಿದರು.

Printed and published by P.Ramachandra Rao' on behalf of Communist Party of India (Marxist) Karnataka State Committee, 95A', 11 cross< Muneshwara Block, Palace Guttahalli, Bangalore 560003. Phone: 366489 Editor: P.Ramachandra Rao.